ಬುಧವಾರ, ಏಪ್ರಿಲ್ 2, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 91 | ಪುಟ 12
• www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಬಾಂಗ್ಲಾ: ಚೀನಾಕ್ಕೆ ಹತ್ತಿರ ಭಾರತದಿಂದ ದೂರ
ಶಿಕ್ಷಕಿಯರಿಂದ ಶಾಲೆಗೆ ಬೋರ್‌ವೆಲ್ 7
ಅಶೋಕ ಪತ್ರ: ಬಿಜೆಪಿಗೆ ಇಕ್ಕಟ್ಟು 5

ಸೆನ್ಸೆಕ್ಸ್ 76,024 | ನಿಫ್ಟಿ 23,165



ಏಪ್ರಿಲ್ 1ರ ರಾತ್ರಿಯಿಂದಲೇ ಜಾರಿ: ಪ್ರತಿ ಲೀಟರ್‌ಗೆ ₹91.02 ನಿಗದಿ

ಡೀಸೆಲ್ ದರ ₹2 ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿನ ಬೆಲೆ, ವಿದ್ಯುತ್ ದರ ಮತ್ತು ಕಸ ಸಂಗ್ರಹಣೆ ಶುಲ್ಕ ಹೆಚ್ಚಳದ ಬೆನ್ನಲ್ಲೇ, ಏಪ್ರಿಲ್ 1ರ ರಾತ್ರಿಯಿಂದ ಅನ್ವಯವಾಗುವಂತೆ ರಾಜ್ಯದಲ್ಲಿ ಡೀಸೆಲ್ ದರ ಪ್ರತಿ ಲೀಟರ್‌ಗೆ ₹2ರಷ್ಟು ಏರಿಕೆಯಾಗಿದೆ.

ರಾಜ್ಯ ಸರ್ಕಾರವು ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಶೇ 18.44ರಿಂದ ಶೇ 21.77ಕ್ಕೆ ಏರಿಕೆ ಮಾಡಿ, ಆದೇಶಿಸಿದೆ. ಬೆಂಗಳೂರಿನಲ್ಲಿ ₹89.02 ಇದ್ದ ಡೀಸೆಲ್ ಬೆಲೆ ₹91.02 ಆಗಲಿದೆ. ಉಳಿದ ಜಿಲ್ಲೆಗಳಲ್ಲಿ ಈಗಿರುವ ದರಕ್ಕೆ ಅನುಗುಣವಾಗಿ ಶೇಕಡಾ 2.73ರಷ್ಟು ಹೆಚ್ಚಳವಾಗಲಿದೆ.

‘2021ರ ನವೆಂಬರ್ 4ಕ್ಕೂ ಮುನ್ನ ರಾಜ್ಯದಲ್ಲಿ ಡೀಸೆಲ್‌ಗೆ ಶೇ 24ರಷ್ಟು ಮಾರಾಟ ತೆರಿಗೆ ವಿಧಿಸಲಾಗುತ್ತಿತ್ತು. ಆಗ ಪ್ರತಿ ಲೀಟರ್ ಡೀಸೆಲ್‌ನ ಬೆಲೆ ₹92.03 ಇತ್ತು. 2024ರ ಜೂನ್ 1ರಂದು ಮಾರಾಟ ತೆರಿಗೆಯನ್ನು ಶೇ 18.44ಕ್ಕೆ ಇಳಿಸಲಾಗಿತ್ತು’ ಎಂದು ಆರ್ಥಿಕ ಇಲಾಖೆ ತಿಳಿಸಿದೆ.

‘ಈಗ ತೆರಿಗೆ ದರ ಏರಿಕೆಯ ನಂತರ ಮಾರಾಟ ಬೆಲೆ ಹೆಚ್ಚಳವಾದರೂ, ನೆರೆಯ ರಾಜ್ಯಗಳಿಗಿಂತ ಕರ್ನಾಟಕದಲ್ಲಿಯೇ ಡೀಸೆಲ್ ಬೆಲೆ ಕಡಿಮೆ ಇರಲಿದೆ’ ಎಂದು ಸರ್ಕಾರ ತಿಳಿಸಿದೆ.

7ನೇ ಪುಟ ನೋಡಿ

ಪ್ರತಿ ಸುಂಕ: ಘೋಷಣೆ ಇಂದು

ವಾಷಿಂಗ್ಟನ್ (ರಾಯಿಟರ್ಸ್): ವಿವಿಧ ದೇಶಗಳಿಂದ ಅಮೆರಿಕಕ್ಕೆ ಆಮದಾಗುತ್ತಿರುವ ಸರಕುಗಳಿಗೆ ಸುಂಕ ವಿಧಿಸುವ ‘ಪ್ರತಿ ಸುಂಕ’ ನೀತಿಯನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಪ್ರಕಟಿಸಲಿದ್ದಾರೆ.

ಹೊಸ ಸುಂಕ ನೀತಿಯು ಅಮೆರಿಕದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರಗಳಲ್ಲಿ ಒಂದಾಗಿರುವ ಭಾರತವೂ ಸೇರಿದಂತೆ ವಿವಿಧ ದೇಶಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಶೇ 20ರಷ್ಟು ‘ಪ್ರತಿ ಸುಂಕ’ ವಿಧಿಸುವ ನೀತಿಯನ್ನು ಟ್ರಂಪ್ ಆಡಳಿತ ರೂಪಿಸಿದೆ ಎಂದು ವಾಷಿಂಗ್ಟನ್ ಪೋಸ್ಟ್ ಮಂಗಳವಾರ ವರದಿ ಮಾಡಿದೆ.

‘ಅಮೆರಿಕದ ಸರಕುಗಳಿಗೆ ಸುಂಕ ವಿಧಿಸುವ ಎಲ್ಲಾ ರಾಷ್ಟ್ರಗಳು ಪ್ರತಿ ಸುಂಕ ನೀತಿಯ ಗುರಿಯಾಗಲಿವೆ’ ಎಂದು ಟ್ರಂಪ್ ಹೇಳಿದ್ದಾರೆ. ‘ಅಮೆರಿಕದವರನ್ನು ಅನ್ಯಾಯವಾಗಿ ನಡೆಸಿಕೊಂಡ ದೇಶಗಳು ಪ್ರತಿ ಸುಂಕವನ್ನು ನಿರೀಕ್ಷಿಸಬೇಕು’ ಎಂದು ಅಮೆರಿಕ ಸೋಮವಾರ ತಿಳಿಸಿದೆ.

ಶ್ವೇತಭವನದ ರೋಸ್ ಗಾರ್ಡನ್‌ನಲ್ಲಿ ನಡೆಯಲಿರುವ ಸುದ್ದಿಗೋಷ್ಠಿಯಲ್ಲಿ ಟ್ರಂಪ್, ‘ಪ್ರತಿ ಸುಂಕ’ ನೀತಿಯ ವಿವರಗಳನ್ನು ಬಹಿರಂಗಪಡಿಸಲಿದ್ದಾರೆ.

ಬಿಜೆಪಿಯಿಂದ ಅಹೋರಾತ್ರಿ ಧರಣಿ

ಬೆಂಗಳೂರು: ಬೆಲೆ ಏರಿಕೆ ವಿರೋಧಿಸಿ ಬಿಜೆಪಿಯು ಬುಧವಾರ ಅಹೋರಾತ್ರಿ ಧರಣಿಯೂ ಸೇರಿ, ರಾಜ್ಯವ್ಯಾಪಿ ಸರಣಿ ಹೋರಾಟಗಳನ್ನು ಹಮ್ಮಿಕೊಂಡಿದೆ.

ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೆಳಿಗ್ಗೆ 11ಕ್ಕೆ ಅಹೋರಾತ್ರಿ ಧರಣಿ ಆರಂಭವಾಗಲಿದೆ. ಬಿ.ಎಸ್.ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ, ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಸಂಸದರು, ಶಾಸಕರು ಧರಣಿಯಲ್ಲಿ ಭಾಗವಹಿಸಲಿದ್ದಾರೆ.

ಇದೇ 5ರಂದು ಎಲ್ಲ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರ ಮತ್ತು ಮಂಡಲ ಮಟ್ಟದಲ್ಲಿ ಪಕ್ಷದ ಕಾರ್ಯಕರ್ತರು ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ ನಡೆಸಲಿದ್ದಾರೆ. ಇದೇ 7ರಿಂದ ವಿವಿಧ ಹಂತಗಳಲ್ಲಿ ರಾಜ್ಯದಾದ್ಯಂತ ಜನಜಾಗೃತಿಗಾಗಿ ‘ಜನಾಕ್ರೋಶ ಯಾತ್ರೆ’ ನಡೆಯಲಿದೆ.

ಟೋಲ್ ದರ ಹೆಚ್ಚಳ ಜಾರಿ

ನವದೆಹಲಿ (ಪಿಟಿಐ): ದೇಶದಾದ್ಯಂತ ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್‌ವೇಗಳಲ್ಲಿ ಟೋಲ್ ದರವನ್ನು ಶೇ 4ರಿಂದ ಶೇ 5ರಷ್ಟು ಹೆಚ್ಚಳ ಮಾಡಿದ್ದು, ಮಂಗಳವಾರದಿಂದಲೇ ಜಾರಿಯಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

‘ಪ್ರತಿವರ್ಷದಂತೆ ಈ ವರ್ಷವೂ ಟೋಲ್ ದರ ಹೆಚ್ಚಿಸಲಾಗಿದೆ. ಹಣದುಬ್ಬರ ಏರಿಕೆ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಪರಿಷ್ಕರಣೆ ಮಾಡಲಾಗಿದೆ’ ಎಂದು ತಿಳಿಸಿದ್ದಾರೆ.

2008ರ ನಿಯಮದಂತೆ ಪ್ರತಿ ವರ್ಷ ಏಪ್ರಿಲ್ 1ರಿಂದ ಅನ್ವಯವಾಗುವ ಹಾಗೆ ದರ ಹೆಚ್ಚಿಸಲಾಗುತ್ತದೆ. ಬೆಲೆ ಏರಿಕೆ, ಹಣದುಬ್ಬರವನ್ನು ಆಧರಿಸಿ ದರ ಹೆಚ್ಚಳ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ.

10 ಗ್ರಾಂ ಚಿನ್ನಕ್ಕೆ ₹94,150

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹2 ಸಾವಿರ ಏರಿಕೆಯಾಗಿ, ₹94,150ರಂತೆ ಮಾರಾಟವಾಗಿದೆ. 10

ರಾಜ್ಯದಲ್ಲಿ ‘ದರ ಬೀಜಾಸುರ’ ಸರ್ಕಾರವಿದೆ. ಘಜ್ನಿ ಮಹಮದ್, ಘೋರಿ ಮಹಮದ್ ನಾಚುವಂತೆ ಜನರ ಮೇಲೆ ದರ ಏರಿಕೆ ದಂಡಯಾತ್ರೆ ನಡೆಸುತ್ತಿದೆ
ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಕೈಗಾರಿಕಾ ಸಚಿವ

ಔಷಧ, ತರಕಾರಿ, ಬೇಳೆ ಕಾಳು ದರ ಒಂದೂವರೆ ಪಟ್ಟು ಹೆಚ್ಚಾಗಿದ್ದು, ಟೋಲ್ ದರ ಏರಿಕೆ ಜನರನ್ನು ಕಂಗಾಲು ಮಾಡಿದೆ. ಬಿಜೆಪಿಯವರು ಪ್ರತಿಭಟನೆ ನಡೆಸಬೇಕಿರುವುದು ಕೇಂದ್ರದ ವಿರುದ್ಧ
ಪ್ರಿಯಾಂಕ್ ಖರ್ಗೆ
ಪಂಚಾಯತ್ ರಾಜ್ ಸಚಿವ

ಪಟಾಕಿ ಕಾರ್ಖಾನೆ ಸ್ಫೋಟ: 21 ಸಾವು

ಅಹಮದಾಬಾದ್: ಗುಜರಾತ್‌ನ ಬನಾಸ್‌ಕಾಂಠ ಜಿಲ್ಲೆಯ ಪಟಾಕಿ ಕಾರ್ಖಾನೆಯೊಂದರಲ್ಲಿ ಮಂಗಳವಾರ ಸ್ಫೋಟ ಸಂಭವಿಸಿ ಚಾವಣಿ ಕುಸಿದ ಪರಿಣಾಮ 21 ಮಂದಿ ಮೃತಪಟ್ಟಿದ್ದು, 6 ಮಂದಿ ಗಾಯಗೊಂಡಿದ್ದಾರೆ. 11

‘ಮನೆಗಳ ಧ್ವಂಸ ಆತ್ಮಸಾಕ್ಷಿ ಕಲಕಿದೆ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಪ್ರಯಾಗರಾಜ್ ಅಭಿವೃದ್ಧಿ ಪ್ರಾಧಿಕಾರವು ನಗರದಲ್ಲಿ ಕೆಲವು ಮನೆಗಳನ್ನು ಧ್ವಂಸಗೊಳಿಸಿರುವುದು ‘ಅಮಾನವೀಯ ಹಾಗೂ ಕಾನೂನುಬಾಹಿರ’. ಈ ಕ್ರಮ ನಮ್ಮ ಆತ್ಮಸಾಕ್ಷಿಯನ್ನೇ ಕಲಕಿದೆ’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಈ ವಿಚಾರವಾಗಿ ಉತ್ತರ ಪ್ರದೇಶ ಸರ್ಕಾರ ಹಾಗೂ ಪ್ರಾಧಿಕಾರವನ್ನು ಕಟು ಮಾತುಗಳಲ್ಲಿ ಟೀಕಿಸಿದ ಸುಪ್ರೀಂ ಕೋರ್ಟ್, ನೆಲಸಮಗೊಳಿಸಿರುವ ಐದು ಮನೆಗಳ ಮಾಲೀಕರಿಗೆ 6 ವಾರಗಳ ಒಳಗಾಗಿ ತಲಾ ₹10 ಲಕ್ಷ ಪರಿಹಾರ ನೀಡುವಂತೆ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಹಾಗೂ ಉಜ್ಜಲ್ ಭುಯಾನ್ ಅವರು ಇದ್ದ ನ್ಯಾಯಪೀಠವು ಅರ್ಜಿ ವಿಚಾರಣೆ ನಡೆಸಿತು. ‘ಕಾನೂನು ಪ್ರಕ್ರಿಯೆಯಂತೆಯೆ ಎಲ್ಲವೂ ನಡೆಯಬೇಕು ಎಂಬುದಿದೆ, ಪ್ರತಿಯೊಬ್ಬರಿಗೂ ಸೂರು ಹೊಂದುವ ಹಕ್ಕು ಇದೆ. ಆದರೆ, ಮನೆಗಳನ್ನು ಈ ರೀತಿ ಧ್ವಂಸಗೊಳಿಸಿರುವ ಕ್ರಮವು ಆಘಾತಕಾರಿ’ ಎಂದು ಪೀಠ ಹೇಳಿದೆ.

‘ಸರ್ವಾಧಿಕಾರ’ದ ರೀತಿಯಲ್ಲಿ ಮನೆಗಳ ಧ್ವಂಸ ಕಾರ್ಯಾಚರಣೆ ನಡೆದಿದೆ. ದೇಶದಲ್ಲಿ ಕಾನೂನು ಇದೆ. ಅದರ ಪ್ರಕಾರವೇ ಕ್ರಮ ಜರುಗಿಸಬೇಕು. ಜನರು ಕಟ್ಟಿಕೊಂಡಿರುವ ಮನೆಗಳನ್ನು ಈ ರೀತಿ ಧ್ವಂಸ ಮಾಡಬಾರದು ಎಂದೂ ಪೀಠ ಹೇಳಿದೆ.

11ನೇ ಪುಟ ನೋಡಿ

ಮುಖ್ಯಾಂಶಗಳು

- ನೊಂದವರಿಗೆ ಮೇಲ್ಮನವಿ ಸಲ್ಲಿಸಲು ಸಮಯ ನೀಡಬೇಕು: ‘ಸುಪ್ರೀಂ’
- ಪ್ರತಿ ಪ್ರಕರಣಕ್ಕೆ ಸಂಬಂಧಿಸಿ ಪರಿಹಾರ ನಿಗದಿಗೆ ಸೂಚನೆ

ಪ್ರಕರಣ ಏನು?

ಪ್ರಯಾಗರಾಜ್ ನಿವಾಸಿಗಳಾದ ವಕೀಲ ಜುಲ್ಫೀಕರ್ ಹೈದರ್, ಪ್ರಾಧ್ಯಾಪಕ ಅಲಿ ಅಹ್ಮದ್ ಹಾಗೂ ಇತರರು, ತಮ್ಮ ಮನೆಗಳನ್ನು ಪ್ರಯಾಗರಾಜ್ ಅಭಿವೃದ್ಧಿ ಪ್ರಾಧಿಕಾರ ಧ್ವಂಸಗೊಳಿಸಿದ್ದನ್ನು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್, ಇವರ ಅರ್ಜಿಗಳನ್ನು ವಜಾಗೊಳಿಸಿ ಆದೇಶಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ ಅರ್ಜಿದಾರರು, ‘ನಮ್ಮ ಮನೆಗಳನ್ನು ಬುಲ್ಡೋಜರ್ ಬಳಸಿ ನೆಲಸಮಗೊಳಿಸಲಾಗಿದೆ. ಈ ಕಾರ್ಯಾಚರಣೆ ಕೈಗೊಳ್ಳುವುದಕ್ಕೂ ಒಂದು ರಾತ್ರಿ ಮೊದಲು ನಮಗೆ ನೋಟಿಸ್‌ಗಳನ್ನು ನೀಡಲಾಗಿತ್ತು’ ಎಂದು ಪೀಠಕ್ಕೆ ತಿಳಿಸಿದ್ದರು.

11ನೇ ಪುಟ ನೋಡಿ

ವಕ್ಫ್: ತಿದ್ದುಪಡಿ ಮಸೂದೆ ಇಂದು ಮಂಡನೆ 11

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮೆರವಣಿಗೆ ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿ ಜಯಂತಿ ಪ್ರಯುಕ್ತ ಶಿವಕುಮಾರ ಸ್ವಾಮೀಜಿ ಅವರ ಮೂರ್ತಿಯ ಮೆರವಣಿಗೆ ಮಂಗಳವಾರ ನಡೆಯಿತು ಸುದ್ದಿ ಪುಟ 7

ಎಂಟು ಮಂದಿ ಅಧಿಕಾರಿಗಳ ಅಮಾನತು

ಅಕ್ರಮ: ಪರೀಕ್ಷಾ ಮಂಡಳಿ ಭಾಗಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಡಿಪ್ಲೊಮಾ ಇನ್ ಫಾರ್ಮಸಿ (ಡಿ. ಫಾರ್ಮಸಿ) ಪರೀಕ್ಷೆಯಲ್ಲಿ ಭಾರಿ ಅಕ್ರಮ ನಡೆದಿರುವುದು ಪತ್ತೆಯಾಗಿದ್ದು, ಈ ಸಂಬಂಧ ಎಂಟು ಅಧಿಕಾರಿಗಳನ್ನು ಸರ್ಕಾರ ಅಮಾನತು ಮಾಡಿದೆ.

ರಾಜ್ಯ ಔಷಧ ಇಲಾಖೆ ಡಿ. ಫಾರ್ಮಸಿ ವಾರ್ಷಿಕ ಪರೀಕ್ಷೆ ನಡೆಸಿತ್ತು. ಪರೀಕ್ಷೆಯನ್ನೇ ಬರೆಯದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನದ ವೇಳೆ ಪತ್ತೆಯಾಗಿದ್ದವು. ಚೀಫ್ ಕಸ್ಟೋಡಿಯನ್, ಪರೀಕ್ಷಾ ಪ್ರಾಧಿಕಾರ ಮಂಡಳಿಯ ಸದಸ್ಯ ಕಾರ್ಯದರ್ಶಿ ಮತ್ತು ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರು ಈ ಅಕ್ರಮದಲ್ಲಿ ಕೈಜೋಡಿಸಿರುವುದು ತನಿಖೆಯಲ್ಲಿ ಬಹಿರಂಗವಾಗಿದೆ.

ಡಿ. ಫಾರ್ಮಸಿ

2023ರ ಜನವರಿಯಲ್ಲಿ ನಡೆದ ಪರೀಕ್ಷೆಗೆ ಗೈರಾಗಿದ್ದ 104 ವಿದ್ಯಾರ್ಥಿಗಳ 397 ಉತ್ತರ ಪತ್ರಿಕೆಗಳು ಮೌಲ್ಯಮಾಪನ ವೇಳೆ ಪ್ರತ್ಯಕ್ಷವಾಗಿದ್ದವು. ಈ ಬಗ್ಗೆ ತನಿಖೆ ನಡೆಸಿದಾಗ ಕೆಲವು ಉತ್ತರ ಪತ್ರಿಕೆಗಳು ಮತ್ತು ಬಾರ್ ಕೋಡ್‌ಗಳಲ್ಲಿ ವ್ಯತ್ಯಾಸ ಕಂಡು ಬಂದಿತ್ತು. ಅಕ್ರಮ ನಡೆದಿರುವುದು ಮೊದಲ ಹಂತದಲ್ಲಿ ಗೊತ್ತಾಗಿತ್ತು.

ತನಿಖೆಯ ಬಳಿಕ, ಪರೀಕ್ಷಾ ಮೇಲ್ವಿಚಾರಕರ ಡೈರಿ ತಿದ್ದಿರುವುದು, ಸಿ.ಸಿ.ಟಿ.ವಿ ಕ್ಯಾಮೆರಾ ತುಣುಕುಗಳನ್ನು ಅಳಿಸಿ ಹಾಕಿರುವುದು, ಹಿಂದಿನ ವರ್ಷದ ಉತ್ತರ ಪತ್ರಿಕೆಗಳನ್ನು ಹಿಂದಿರುಗಿಸದಿರುವುದು ಸೇರಿದಂತೆ ಹಲವು ಅಕ್ರಮಗಳು ಪರೀಕ್ಷಾ ಪ್ರಾಧಿಕಾರ ಮಂಡಳಿಯಲ್ಲಿ ನಡೆದಿರುವುದು ದೃಢಪಟ್ಟಿದೆ.

7ನೇ ಪುಟ ನೋಡಿ

ಪರೀಕ್ಷಾ ಅಕ್ರಮದ ಪರಿ...

- 2022ರ ಮಾರ್ಚ್, ಸೆಪ್ಟೆಂಬರ್ ಪರೀಕ್ಷೆಯ ಉತ್ತರಪತ್ರಿಕೆ 2023ರ ವಾರ್ಷಿಕ ಪರೀಕ್ಷೆಗೆ ಅಕ್ರಮವಾಗಿ ಬಳಕೆ
- ಪರೀಕ್ಷೆಗೆ ಗೈರಾದ 104 ವಿದ್ಯಾರ್ಥಿಗಳ 397 ಉತ್ತರಪತ್ರಿಕೆ ಮೌಲ್ಯಮಾಪನ ವೇಳೆ ಪ್ರತ್ಯಕ್ಷ
- ಖಾಸಗಿ ಫಾರ್ಮಸಿ ಸಂಸ್ಥೆಗಳ ಅಕ್ರಮಕ್ಕೆ ಕೈಜೋಡಿಸಿದ ಪರೀಕ್ಷಾ ಪ್ರಾಧಿಕಾರ ಮಂಡಳಿ
- ಐಎಎಸ್ ಅಧಿಕಾರಿ ನಡೆಸಿದ ತನಿಖೆಯಲ್ಲಿ ಪರೀಕ್ಷಾ ಅಕ್ರಮ ಬಹಿರಂಗ

ಏಜೆಂಟ್‌ಗೆ ಹಣ ನೀಡಿದ್ದ ಪರೀಕ್ಷಾರ್ಥಿ

ಕೊರಟಗೆರೆಯ ಪ್ರಕೃತಿ ಕಾಲೇಜ್ ಆಫ್ ಫಾರ್ಮಸಿ ಮತ್ತು ಪ್ರಿಯದರ್ಶಿನಿ ಕಾಲೇಜು ಆಫ್ ಫಾರ್ಮಸಿ ಸಂಸ್ಥೆಯವರು ಮಾರ್ಚ್ 2022 ಮತ್ತು ಸೆಪ್ಟೆಂಬರ್ 2022ರ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಮಂಡಳಿಗೆ ಹಿಂದಿರುಗಿಸಿರುವುದಾಗಿ ತಪ್ಪು ಮಾಹಿತಿ ನೀಡಿದ್ದರು. ಅದೇ ಉತ್ತರ ಪತ್ರಿಕೆಗಳು 2023ರ ಜನವರಿಯಲ್ಲಿ ನಡೆದ ಪರೀಕ್ಷೆಗೆ ಬಳಕೆಯಾಗಿದೆ. ಪ್ರಾಥಮಿಕ ತನಿಖೆಗೆ ಹಾಜರಾಗಿದ್ದ ಇಬ್ಬರು ವಿದ್ಯಾರ್ಥಿಗಳು, ಅಫ್ಜಲ್ ಎಂಬ ಏಜೆಂಟ್‌ಗೆ ಹಣ ನೀಡಿ ಪರೀಕ್ಷೆ ಬರೆದಿರುವುದಾಗಿ ಲಿಖಿತ ಹೇಳಿಕೆ ನೀಡಿದ್ದರು ಎಂದೂ ತನಿಖಾ ವರದಿಯಲ್ಲಿ ವಿವರಿಸಲಾಗಿದೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/103/2025
ದಿನಾಂಕ : 26-03-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬಾಗಲಕೋಟೆ – ಕುಡಚಿ ಹೊಸ ಬಿಜಿ ಸಿಂಗಲ್ ಮಾರ್ಗ ಯೋಜನೆ : ಖಜ್ಜಿಡೋಣಿ – ಲೋಕಾಪುರ್ ಸೆಕ್ಷನ್‌ನಲ್ಲಿ 5.0ಮೀ.ಗಿಂತ ಎತ್ತರದ ಬ್ಯಾಂಕ್ ಎತ್ತರಕ್ಕಾಗಿ ಟರ್ಫ್ ರಿಇನ್ಫೋರ್ಸ್‌ಮೆಂಟ್ ಮ್ಯಾಟ್ (ಟಿಆರ್‌ಎಂ) ಮತ್ತು ವೆಟಿವೆರ್ ಗ್ರಾಸ್ ಸ್ಯಾಪ್ಲಿಂಗ್‌ಗಳನ್ನು ಒದಗಿಸುವುದು ಮತ್ತು ಹಾಕುವುದರಿಂದ ಎಂಬ್ಯಾಂಕ್‌ಮೆಂಟ್ ಇಳಿಜಾರುಗಳ ಸವೆತವನ್ನು ತಡೆಯುವ ಕ್ರಮಗಳು. (ಟೆಂಡರ್ ಉಲ್ಲೇಖ ಸಂ. ಬಿಜಿಕೆ–ಕೆಯುಡಿ–45–ಟಿಆರ್‌ಎಂ)	ರೂ. 11,75,20,000/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22–04–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/878/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಿಂದ ಪಾರ್ಸೆಲ್ ಸ್ಥಳ, ಪಾರ್ಕಿಂಗ್ & ಜಾಹೀರಾತು ಮತ್ತು ಇತರ ವಿವಿಧ ಗುತ್ತಿಗೆಗಳಿಗಾಗಿ ಇ–ಹರಾಜು

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ದಿನಾಂಕಗಳ ಇ–ಹರಾಜುಗಳಿಗೆ ಬಿಡ್ಡುದಾರರನ್ನು ಆಹ್ವಾನಿಸಿದ್ದಾರೆ.

1) ರೈಲ್ ಕೋಚ್ ರೆಸ್ಟೋರೆಂಟ್ : 07–04–2025
2) ಊಟೋಪಹಾರ ಮತ್ತು ವಿವಿಧೋದ್ದೇಶ ಮಳಿಗೆಗಳು : 10–04–2025, 24–04–2025, 25–04–2025, 28–04–2025
3) ಪಾರ್ಕಿಂಗ್ ಹಾಗೂ ಪಾವತಿಸಿ ಮತ್ತು ಬಳಸಿ : 03–04–2025, 04–04–2025, 07–04–2025, 23–04–2025
4) ಪಾರ್ಸೆಲ್ : 28–04–2025
5) ಜಾಹೀರಾತು ಎಟಿಎಂ ಮತ್ತು ಇತರೆ : 09–04–2025, 10–04–2025, 11–04–2025, 15–04–2025, 16–04–2025, 17–04–2025, 22–04–2025, 23–04–2025, 24–04–2025, 25–04–2025, 29–04–2025, 30–04–2025

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು

ಪಿಯುಬಿ/880/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ಐಪಿಎಲ್ ಕ್ರಿಕೆಟ್: ಮೆಟ್ರೊ ಸೇವೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯಗಳು ನಡೆಯುವ ದಿನಗಳಂದು ಎಲ್ಲ ನಾಲ್ಕು ಮೆಟ್ರೊ ಟರ್ಮಿನಲ್‌ಗಳಿಂದ ಕೊನೆಯ ಮೆಟ್ರೊ ರೈಲು ಸೇವೆಯನ್ನು ರಾತ್ರಿ 12.30 ರವರೆಗೆ ವಿಸ್ತರಿಸಲಾಗುವುದು ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ತಿಳಿಸಿದೆ.

ಏಪ್ರಿಲ್ 2, 10, 18 ಹಾಗೂ ಮೇ 3, 13 ಮತ್ತು 17ರಂದು ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಟಿ-20 ಕ್ರಿಕೆಟ್ ಪಂದ್ಯಾವಳಿಗಳು ನಡೆಯಲಿವೆ. ಈ ದಿನಗಳಂದು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಭಿಮಾನಿಗಳು ಕ್ರಿಕೆಟ್ ವೀಕ್ಷಣೆಗಾಗಿ ಕ್ರೀಡಾಂಗಣಕ್ಕೆ ಭೇಟಿ ನೀಡುತ್ತಾರೆ.

ಕ್ರೀಡಾ ಪ್ರೇಮಿಗಳಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಪಂದ್ಯಾವಳಿ ನಡೆಯುವ ದಿನಗಳಂದು 'ನಮ್ಮ ಮೆಟ್ರೊ'ದ ವೈಟ್‌ಫೀಲ್ಡ್(ಕಾಡುಗೋಡಿ), ಚಲ್ಲಘಟ್ಟ, ರೇಷ್ಮೆಸಂಸ್ಥೆ ಮತ್ತು ಮಾದಾವರ ಟರ್ಮಿನಲ್‌ಗಳಿಂದ ಕೊನೆಯ ಮೆಟ್ರೊ ರೈಲು ಸೇವೆಯನ್ನು ರಾತ್ರಿ 12.30ರವರೆಗೆ ವಿಸ್ತರಿಸಲಾಗಿದೆ. ನಾಡಪ್ರಭು ಕೆಂಪೇಗೌಡ ನಿಲ್ದಾಣ ಮೆಜೆಸ್ಟಿಕ್‌ನಿಂದ ನಾಲ್ಕು ದಿಕ್ಕುಗಳಿಂದ ಕೊನೆಯ ರೈಲು ಮಧ್ಯರಾತ್ರಿ 1.15 ಕ್ಕೆ ಹೊರಡಲಿದೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

ರಸ್ತೆ ಸಂಚಾರ ಮಾರ್ಗ ಬದಲು

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳು ನಡೆಯುವ ವೇಳೆ ಕ್ರೀಡಾಂಗಣದ ಸುತ್ತಮುತ್ತ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ.

ಏಪ್ರಿಲ್ 2ರಿಂದ ಮೇ 5ರವರೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯುವ ದಿನಗಳಲ್ಲಿನ ಮಧ್ಯಾಹ್ನ 3ರಿಂದ ರಾತ್ರಿ 12ರವರೆಗೆ ಈ ಮಾರ್ಪಾಡು ಇರಲಿದೆ. ಏಪ್ರಿಲ್ 10, 18, 24, ಮೇ 4, 13 ಮತ್ತು 17ರಂದು ಪಂದ್ಯಗಳು ನಡೆಯಲಿವೆ. ಪಂದ್ಯದ ಸಂದರ್ಭದಲ್ಲಿ ಸುಗಮ ಸಂಚಾರದ ದೃಷ್ಟಿಯಿಂದ ಕ್ರೀಡಾಂಗಣದ ಸುತ್ತಮುತ್ತಲಿನ ರಸ್ತೆಗಳಲ್ಲಿ ಸಂಚಾರ ವ್ಯವಸ್ಥೆಯಲ್ಲಿ ಮಾರ್ಪಾಡುಗಳನ್ನು ಮಾಡಲಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಮುತ್ತಲೂ ವಾಹನಗಳ ನಿಲುಗಡೆ ಸ್ಥಳದ ಕೊರತೆ ಇರುವುದರಿಂದ ಹಾಗೂ ಕ್ರೀಡಾಂಗಣದ ಸುತ್ತಮುತ್ತ ಸಂಚಾರ ದಟ್ಟಣೆ ತಪ್ಪಿಸಲು ಕ್ರಿಕೆಟ್ ಪಂದ್ಯಗಳ ವೀಕ್ಷಣೆಗೆ ಬರುವ ಪ್ರೇಕ್ಷಕರು ಸಾಧ್ಯವಾದಷ್ಟು ಬಿಎಂಟಿಸಿ ಹಾಗೂ ಮೆಟ್ರೊ ಸೇವೆಯನ್ನು ಬಳಸುವಂತೆ ಸಂಚಾರ ಪೊಲೀಸರು ಕೋರಿದ್ದಾರೆ.

ವಾಹನ ನಿಲುಗಡೆ ನಿಷೇಧಿಸಲಾದ ರಸ್ತೆಗಳು..

- ಕ್ವೀನ್ಸ್ ರಸ್ತೆಯಲ್ಲಿ, ಬಾಳೇಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ರಸ್ತೆಯ ಎರಡೂ ಕಡೆ
- ಎಂ.ಜಿ ರಸ್ತೆಯಲ್ಲಿ ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ರಸ್ತೆಯ ಎರಡೂ ಕಡೆ
- ಲಿಂಕ್ ರಸ್ತೆಯಲ್ಲಿ ಎಂ.ಜಿ ರಸ್ತೆಯಿಂದ ಕಬ್ಬನ್ ರಸ್ತೆವರೆಗೆ
- ರಾಜಭವನ ರಸ್ತೆಯಲ್ಲಿ, ಟಿ.ಚೌಡಯ್ಯ ರಸ್ತೆ ಮತ್ತು ರೇಸ್ ಕೋರ್ಸ್ ರಸ್ತೆ
- ಸೆಂಟ್ರಲ್ ಸ್ಟ್ರೀಟ್‌ನ ಎರಡೂ ಕಡೆ
- ಕಬ್ಬನ್ ರಸ್ತೆಯಲ್ಲಿ, ಸಿ.ಟಿ.ಒ ವೃತ್ತದಿಂದ ಡಿಕನ್ಸ್‌ನ್ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಕಡೆ
- ಕಬ್ಬನ್ ರಸ್ತೆಯಲ್ಲಿ ಕಾಮರಾಜ ರಸ್ತೆ ಜಂಕ್ಷನ್‌ನಿಂದ ಡಿಕನ್ಸನ್ ರಸ್ತೆ ಜಂಕ್ಷನ್‌ವರೆಗೆ ಬಿ.ಎಂ.ಟಿ.ಸಿ ಬಸ್‌ಗಳನ್ನು ಹೊರತುಪಡಿಸಿ ಇತರೆ ಎಲ್ಲಾ ವಾಹನಗಳ ನಿಲುಗಡೆ ನಿಷೇಧ
- ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ, ಕ್ಯಾಶ್ ಫಾರ್ಮಸಿ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತದವರೆಗೆ
- ಮ್ಯೂಸಿಯಂ ರಸ್ತೆಯಲ್ಲಿ, ಎಂ.ಜಿ ರಸ್ತೆಯಿಂದ ಸೆಂಟ್ ಮಾರ್ಕ್ಸ್ ರಸ್ತೆವರೆಗೆ ಹಾಗೂ ಆಶೀರ್ವಾದಂ ವೃತ್ತದವರೆಗೆ
- ಕಸ್ತೂರಬಾ ರಸ್ತೆಯಲ್ಲಿ ಕ್ವೀನ್ಸ್ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಹಾಗೂ ಮಲ್ಯ ಆಸ್ಪತ್ರೆ ರಸ್ತೆಯಲ್ಲಿ ಸಿದ್ದಲಿಂಗಯ್ಯ ವೃತ್ತದಿಂದ ಆರ್.ಆರ್.ಎಂ.ಆರ್ ವೃತ್ತದವರೆಗೆ
- ಕಬ್ಬನ್ ಪಾರ್ಕ್ ಒಳಭಾಗದ ಕಿಂಗ್ ರಸ್ತೆ, ಪ್ರೆಸ್ ಕ್ಲಬ್ ಮುಂಭಾಗ, ಬಾಲಭವನ ಮುಂಭಾಗ, ಫೌಂಟೇನ್ ರಸ್ತೆ
- ಲ್ಯಾವೆಲ್ಲೆ ರಸ್ತೆಯಲ್ಲಿ, ಕ್ವೀನ್ಸ್ ವೃತ್ತದಿಂದ ವಿಠಲ್ ಮಲ್ಯ ರಸ್ತೆ ಜಂಕ್ಷನ್ ವರೆಗೆ ವಿಠಲ್ ಮಲ್ಯ ರಸ್ತೆ, ಸಿದ್ದಲಿಂಗಯ್ಯ ವೃತ್ತದಿಂದ ಸೈಂಟ್ ಮಾರ್ಕ್ಸ್ ರಸ್ತೆಯ ಬಿಷಪ್ ಕಾಟನ್ ಬಾಲಕಿಯರ ಶಾಲೆಯವರೆಗೆ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ.

ಪಾರ್ಕಿಂಗ್ ಸ್ಥಳಗಳು...

- ಸೇಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲ್ ಮೈದಾನ, ಯುಬಿ ಸಿಟಿ ಪಾರ್ಕಿಂಗ್ ಸ್ಥಳ
- ಬಿಎಂಟಿಸಿ ಬಸ್ ನಿಲ್ದಾಣದ ಮೊದಲನೇ ಮಹಡಿ ಮತ್ತು ಓಲ್ಡ್ ಕೆಜಿಐಡಿ ಬಿಲ್ಡಿಂಗ್
- ಕಿಂಗ್ಸ್ ರಸ್ತೆ (ಕಬ್ಬನ್ ಪಾರ್ಕ್ ಒಳಭಾಗ)
- ಸೇಂಟ್ ಜೋಸೆಫ್ಸ್ ಬಾಯ್ಸ್ ಹೈಸ್ಕೂಲ್, ಬೇಸ್‌ಮೆಂಟ್ ಪಾರ್ಕಿಂಗ್

ಪಿಕ್‌ಅಪ್– ಡ್ರಾಪ್ ಸ್ಥಳ

- ಕಬ್ಬನ್ ರಸ್ತೆ (ಬಿಆರ್‌ವಿ ಜಂಕ್ಷನ್‌ನಿಂದ ಸಿಟಿಒ ವೃತ್ತದವರೆಗೆ ಮಾತ್ರ)

'ಪರಿಷತ್ತಿಗೆ ಅತಿ ಹಿಂದುಳಿದವರ ಆಯ್ಕೆ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ವಿಧಾನ ಪರಿಷತ್ತಿನ ನಾಲ್ಕು ಸ್ಥಾನಗಳು ತೆರವಾಗಿದ್ದು, ಅತಿಹಿಂದುಳಿದ ವರ್ಗ-ಸಮುದಾಯದವರನ್ನು ಆಯ್ಕೆ ಮಾಡಬೇಕು' ಎಂದು ಆಲ್ ಇಂಡಿಯಾ ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಆ ಸ್ಥಾನಗಳಲ್ಲಿ ಈ ಹಿಂದೆ ಇದ್ದ ಪ್ರಬಲ ಪಕ್ಷ, ಜಾತಿ-ಸಮುದಾಯಗಳ ನಾಯಕರು ತಮ್ಮನ್ನು ಮತ್ತೆ ಆಯ್ಕೆ ಮಾಡುವಂತೆ ಒತ್ತಡ ಹೇರುತ್ತಿರುವುದರ ಬಗ್ಗೆ ವರದಿಯಾಗಿದೆ. ಆದರೆ ವಿಧಾನ ಪರಿಷತ್ತಿನಲ್ಲಿ ಈವರೆಗೂ ಪ್ರಾತಿನಿಧ್ಯ ಸಿಗದ ನೂರಾರು ಸಣ್ಣ ಸಮುದಾಯಗಳಿಗೆ ಅವಕಾಶ ನೀಡಬೇಕು' ಎಂದಿದ್ದಾರೆ.

'ಚುನಾವಣೆ ಎದುರಿಸಲು ಹಣ ಬಲವಾಗಲಿ, ಜನ ಬಲವಾಗಲಿ ಈ ಸಮುದಾಯಗಳಿಗೆ ಇಲ್ಲ. ಅಂತಹವರನ್ನು ನಾಮನಿರ್ದೇಶನ ಮಾಡಿದರೆ, ಸಾಮಾಜಿಕ ನ್ಯಾಯ ಒದಗಿಸಿದಂತಾಗುತ್ತದೆ ಎಂದು ಮಾರಸಂದ್ರ ಮುನಿಯಪ್ಪ ಕೋರಿದ್ದಾರೆ.

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕೊಠಡಿ ಸಂಖ್ಯೆ: 207, 2ನೇ ಮಹಡಿ, ಜಿಲ್ಲಾ ಸಂಕೀರ್ಣ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ,
ದೂರವಾಣಿ: 080–29787452, ಇ–ಮೇಲ್: dhobangalorerural@gmail.com

ಸಂಖ್ಯೆ: ಸಿಬ್ಬಂದಿ(4)/02/2025–26 ದಿನಾಂಕ: 01.04.2025

ಟೆಂಡರ್ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಜಿಲ್ಲಾ/ತಾಲ್ಲೂಕು ಕಛೇರಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ ಮತ್ತು ವಾಹನ ಚಾಲಕರನ್ನು ಒದಗಿಸಲು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದೆ. ಟೆಂಡರ್ ದಾಖಲೆಗಳನ್ನು http://kppp.karnataka.gov.in ನಿಂದ ದಿ: 01.04.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ದಿ: 15.04.2025 ರ ಸಂಜೆ 05:30 ರ ಒಳಗಾಗಿ ಸಲ್ಲಿಸುವುದು.

ಟೆಂಡರ್‌ನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗೆ ಕೆಳಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾ.ಸಾ.ಸಂ.ಇ/ವಾಪ್ರ/7/ಎಸ್‌ಎಸ್‌ಸಿ/2025–26

ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ರಾಮನಗರ.

ಸಂಖ್ಯೆ : ಸ.ಅ.ಸಂ./ಹೊರ ಗುತ್ತಿಗೆ/ಇ-ಟೆಂಡರ್/ಸಿಆರ್–04/2024–25
ದಿನಾಂಕ : 29–03–2025

ಟೆಂಡರ್ / ವರ್ಗೀಕೃತ ಜಾಹೀರಾತು

ಸಾರ್ವಜನಿಕರಿಗೆ ಹಾಗೂ ಈ ಮೂಲಕ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ತಿಳಿಯಪಡಿಸುವುದೇನೆಂದರೆ, 2025–26 (01–04–2025 ರಿಂದ 31–03–2026) ನೇ ಸಾಲಿನ ಹೊರ ಗುತ್ತಿಗೆ ನೌಕರರ ವೇತನ ಪಾವತಿಗೆ ಸಂಬಂಧಿಸಿದಂತೆ ಗಣಕಯಂತ್ರ ನಿರ್ವಾಹಕರು ಮತ್ತು ವಾಹನ ಚಾಲಕರ ವೇತನ ಸಂಬಂಧ ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಕರೆಯಲಾಗಿದೆ.

ಟೆಂಡರ್‌ದಾರರು ದಿನಾಂಕ : 09–04–2025 ರ ಅಪರಾಹ್ನ 4.00 ಗಂಟೆಯವರೆಗೆ ಇ–ಪೋರ್ಟಲ್ ಇ-ಟೆಂಡರ್ ಮೂಲಕ ಭಾಗವಹಿಸಬಹುದಾಗಿದೆ. ಇ–ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 10–04–2025 ರ ಸಂಜೆ 4.30 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ : 11–04–2025 ರ ಸಂಜೆ 5.00 ಗಂಟೆಗೆ ತೆರೆಯಲಾಗುವುದು. ಒಂದು ವೇಳೆ ದಿನಾಂಕ : 29–03–2025 ರಂದು ಇ–ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಎರಡನೇ ಬಾರಿ ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಸ್ವಯಂ ವಿಸ್ತರಣೆ 06 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ, (ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ).

ಆಸಕ್ತಿಯುಳ್ಳವರು ಈ ಕೆಳಗಿನ ಅನುಸೂಚಿಯಲ್ಲಿರುವ ಕಾಮಗಾರಿಗಳಿಗೆ ಟೆಂಡರ್ ಹಾಕಿ ಪಡೆದುಕೊಳ್ಳಬಹುದಾಗಿದೆ. ಇತರೇ ಮಾಹಿತಿ ಬೇಕಾದಲ್ಲಿ ಕರ್ನಾಟಕ ಸರ್ಕಾರದ ಅಂತರ್ಜಾಲದ ವೆಬ್‌ಸೈಟ್ ವಿಳಾಸ : https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಟೆಂಡರ್ ಆಹ್ವಾನ ಪ್ರಾಧಿಕಾರ,
ಸಾಮಾಜಿಕ ಅರಣ್ಯ ಉಪ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/05/ಮಣಿಪಾಲ್/2025–26

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/01/2025–26 ದಿನಾಂಕ: 01–04–2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ–1 ಹೋಬಳಿ, ಹೊಸಹಳ್ಳಿಪಾಳ್ಯ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಕೆ. ಕೃಷ್ಣಮೂರ್ತಿ ಬಿನ್ ಲೇಟ್ ಕೆ. ಕೇಶವಮೂರ್ತಿ	ಬೆಂಗಳೂರು ಉತ್ತರ / ದಾಸನಪುರ–1 / ಹೊಸಹಳ್ಳಿಪಾಳ್ಯ	14/3	00-18½	ವ್ಯವಸಾಯ	ವಸತಿ

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ದ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/10/ಅಡ್ವರ್ಟೋರ್/2025–26

ಮಯೂರ ಸುಧಾ ಓದಿರಿ

PUBLIC NOTICE

Our client intends to purchase an industrial land bearing Plot No. 86 & 85-Part-1 totally measuring **4739 square meters** situated at **Antarasanahalli Industrial Area** formed out of Survey Nos. 5 & 7 of **Lingapura Village, Kasaba North Hobli, Tumkur Taluk, Tumkur District** from its owners, namely, (i) Lakshmi Umesh Gupta (ii) T. V. Vishwanath Gupta (iii) T. V. Jayawanth (iv) T. V. Mukund (v) N. Prashanth (vi) G. Ravi Shankar (vii) Vinutha Shekar (viii) Jagannath Suman and (ix) Jagannath Chetna **('Owners')**.

The Owners have represented that the Schedule Property is not the subject matter of any subsisting & valid mortgage, lien or charge in favour of anyone else & that there are no subsisting & valid agreements for sale or the like executed by the Owners in respect of the Schedule Property.

If any person has any right to, interest in, or claim against the Schedule Property including but not limited to any encumbrance thereon by way of a charge, mortgage or lien or being a party to any Agreement for Sale or the like in respect of the Schedule Property or any part thereof, may within 15 (**fifteen**) days hereof, submit to us such claim together with documentary proof in support thereof, failing which it shall be presumed that there are no encumbrances, charges or lien or any valid & subsisting Agreements for Sale or the like in respect of the Schedule Property.

SCHEDULE PROPERTY

Plot No. 86 & 85-Part-1 totally measuring **4739 square meters** situated at **Antarasanahalli Industrial Area** formed out of Survey Nos. 5 & 7 of **Lingapura Village, Kasaba North Hobli, Tumkur Taluk, Tumkur District,** bounded on the:

East by : Plot No. 85-Part-2,
West By : Plot No. 87,
North by : K.I.A.D.B Road,
South By : Plot No. 94-B.

Smitha R.B (Partner)
KING & PARTRIDGE, ADVOCATES
NO. 48 LAVELLE ROAD
BANGALORE - 560 001.
(PH: 080 22212341/42)
Date: 01st April, 2025 Place: Bengaluru

ಸೋಲಾರ್ ವಿದ್ಯುತ್ ಪಂಪ್‌ಗೆ ಚಾಲನೆ

ಸೋಲಾರ್ ಪವರ್‌ಪಂಪ್‌ಗೆ ಶಾಸಕ ಎಸ್‌.ಆರ್‌.ವಿಶ್ವನಾಥ್ ಚಾಲನೆ ನೀಡಿದರು

ಯಲಹಂಕ: ವಿದ್ಯುತ್ ವೆಚ್ಚ, ಸಮಯ, ಪರಿಶ್ರಮ ತಗ್ಗಿಸಲು ಅರಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ (ಸುರಧೇನು ಪುರ ಗೇಟ್) ಬಸವಲಿಂಗಪ್ಪ ಬಡಾವಣೆಯಲ್ಲಿ ಸ್ಥಾಪಿಸಿರುವ ಸ್ವಯಂ ಚಾಲಿತ ಸೋಲಾರ್ ಪವರ್ ಪಂಪ್ ಘಟಕವನ್ನು ಲೋಕಾರ್ಪಣೆಗೊಳಿಸಲಾಯಿತು.

ಸೋಲಾರ್ ಪವರ್ ಪಂಪ್ ಅಳವಡಿಕೆಯಿಂದ ಪಂಚಾಯಿತಿಗೆ ₹8 ಸಾವಿರ ವಿದ್ಯುತ್ ಬಿಲ್ ಹೊರೆ ತಗ್ಗಲಿದೆ. ಸ್ವಯಂ ಚಾಲನಾ ವ್ಯವಸ್ಥೆ ಅಳವಡಿಸಿದ್ದು, ಗ್ರಾಮಗಳಿಗೆ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗುವುದಿಲ್ಲ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲಜೀವನ್ ಮಿಷನ್, ಅಕ್ವಾ ಶೈನ್ ಟೆಕ್ನಾಲಜೀಸ್ ಪ್ರೈ.ಲಿ., ಸಂಸ್ಥೆ ಹಾಗೂ ಅಮೆರಿಕ ಮೂಲದ ಎನ್‌ಜಿಒ ಸಂಸ್ಥೆಯ ಸಹಭಾಗಿತ್ವದಲ್ಲಿ ಈ ವ್ಯವಸ್ಥೆ ಅಳವಡಿಸಲಾಗಿದೆ.

ಘಟಕಕ್ಕೆ ಚಾಲನೆ ನೀಡಿದ ಶಾಸಕ ಎಸ್.ಆರ್.ವಿಶ್ವನಾಥ್, 'ಈ ಸೌರ ಘಟಕದಲ್ಲಿ ಉತ್ಪತ್ತಿಯಾಗುವ ಹೆಚ್ಚುವರಿ ವಿದ್ಯುತ್ ಅನ್ನು ಬೆಸ್ಕಾಂಗೆ ಮಾರಲಾಗುತ್ತದೆ. ರಾಜ್ಯದಲ್ಲಿ ಮೊದಲಿಗೆ ಅರಕೆರೆ ಪಂಚಾಯಿತಿಯಲ್ಲಿ ಈ ವ್ಯವಸ್ಥೆ ಅಳವಡಿಸಿದೆ' ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಆಂಜಿನಮ್ಮ, ಉಪಾಧ್ಯಕ್ಷ ಎಸ್. ಮಂಜುನಾಥ್, ಮುಖಂಡ ಕೆ.ಆರ್. ತಿಮ್ಮೇಗೌಡ ಇದ್ದರು.

ನಿಧನ ವಾರ್ತೆ

ಸಂಪತ್ ಕುಮಾರ್ ಎಂ

ಬೆಂಗಳೂರು: ಮಾಗಡಿ ರಸ್ತೆಯ ಅಶ್ವತ್ಥನಗರದ ನಿವಾಸಿ ಸಂಪತ್ ಕುಮಾರ್ ಎಂ (63) ಮಂಗಳವಾರ ಅನಾರೋಗ್ಯದಿಂದ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12ಕ್ಕೆ ಮೈಸೂರು ರಸ್ತೆಯ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರು, ದಿ ಪ್ರಿಂಟರ್ಸ್ (ಮೈಸೂರು) ಸಂಸ್ಥೆಯ ಧಾರವಾಡದ ಪ್ರೊಡಕ್ಷನ್ ವಿಭಾಗದಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

PRAKASH POWER PLANNING Pvt Ltd.
SUPERGRADE ELECTRICAL CONTRACTORS
BANGALORE-560 076
www.prakashpower.net
WANTED
HARDWORKING, ENTHUSIASTIC ENGINEERS, TECHNICIANS, SAFETY OFFICERS, HELPERS
QUALIFICATION
Diploma/degree In Electrical Engineering, ITI Qualified Electricians, Welders, Nebosh Certified Safety Officers, SSSLC Pass/Fail Helpers, Experience Minimum 2 years
SALARY
negotiable comparable with peers
SEND YOUR CV TO:
satya.m@prakashpower.net
balaji.m@prakashpower.net
on whatsapp number
63638 87845

COUNTER SALESMAN, (Males) 2/ 3 years experience. Boys, 10th pass, for The Raymond Shop, Jayanagar. Call: 22454458/ 26656934

WANTED FOR Filling Boys In HPCL Prtrol Bunk In Devanahalli Contact Mob: 7619371131 080-23902062

Teachers/ Professors

PRIMARY KANNADA Teacher needed for Chitrakoota CBSE school in Nagarbhavi Kengeri Ring Road. Immediately. Contact: 6361522604

WANTED ENGLISH and SOCIAL STUDIES TEACHERS for High School Salary Negotiable. Walk-in-Interview on working days 'JNANADEEPTHI ENGLISH SCHOOL' #56, 6th Main Avalahalli, BDA Layout, Girinagar Bangalore-85. Phone: 26748056 (Near pushpak-10 Last Bus-stop)

WANTED FRESHER/ Experience Teachers/ Academic Co-ordinators ENGLISH/ MATHS/ SOCIAL/ PHYSICS/ CHEMISTRY/ BIOLOGY/ HINDI/ COMPUTER TEACHERS/ PHYSICAL EDUCATION Salary Rs. 20000 to 35000/- PM ESI, PF WALK-IN INTERVIEW ALL WORKING DAYS Between 10.30 AM TO 4.00 PM MATHA'S INTERNATIONAL SCHOOL ICSE AFFILIATION CODE KA470 (Google Map location MATHA'S ENGLISH HIGH SCHOOL) #55/2 B, 11th K.M.Hosur Main Road, Garuve Bhavipalya, Bommanahalli post, Bangalore- 560068 M: 9449814917,8277258609

ST.CHARLES HIGH SCHOOL#1086 1st Block,3rd Stage Adarsha Layout Basaveshwaranagar Bangalore-79. Phone:080-23235220/ 9449150749. Invites the Applications from Trained and Experienced English Medium-Teachers for Nursery,Primary,and High School to teach all the Subjects including-Computer, CP.Ed and Drawing.Qualification required:NTT,TCH D.Ed,B.Sc B.Ed,BA B.Ed.

HERITAGE PUBLIC SCHOOL Konanakunte requires HIGH SCHOOL TEACHERS for Maths Physics Chemistry Biology and Social. PRIMARY TEACHERS for Maths EVS English and KG TEACHERS. Salary is not a constraint for deserving candidates Resume can be sent through WhatsApp or email Mob: 9901733776. Ph:080 26322111. Email: heritagepublicschoolkk@gmail.com

WANTED TEACHERS A leading educational institution at Bangalore is in urgent requirement of teachers for all classes and faculties from LKG to PUC.Apply within 7days to:The Chairman Crescent High School & PU College,#28 Sultan Road, Briand Square Bangalore-02 superscribing the envelopment with the post applied for. Emoluments & Perks commensurate with qualification and experience. Email: mmacrescent@gmail.com Contact: 9071120120.

ST. MARTIN'S HIGH SCHOOL, 7th Cross Behind Anjan Theatre, Magadi Road, Bangalore-23 Requires HM, Administrative Officer, Academic Supervisor, Librarian. Qualified and trained Teachers for Nursery, Primary and High School to teach all the subjects including Computers, PT, Drawing. Contact 080-23101999/ 9591990199.

REQUIRED FEMALE Nursery/Primary Co-ordinator with 5 years Experience and also N.T.T./B.A., M.A./B.Ed/B.Sc., M.Sc./B.Ed. for English, Maths, Science, Hindi & Social Science. Contact Max Muller Public School, Mahalakshmi Layout, B'lore-96. Ph:23376049/50. E.mail- maxmullerpublicschool.mlayout@gmail.com

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9886213331

Accounts & Finance

WANTED ACCOUNT ASSISTANT (Male)Bommanahalli, Bangalore, Send Resume to: starsilks@gmail.com

WANTED Senior Accountant & Junior Accountant Contact: 9686198499 or email: info@arkamachineries.com

Drivers

V&V GROUP Behind IIM Bannerghatta Road. Wanted immediately CAR DRIVER knowing English. Good Salary. Call Mobile: 98450-15353

Factory

A LEADING bakery equipment manufacturer in Jigani is looking for experienced professionals: 1). Sales & Marketing Manager (6-8 years' experience) 2). Production Manager (CNC machine shop & fabrication expertise 8-10 Years' Experience) Assistant Manager in Stores and Purchase Contact: 9686198499 or email: info@arkamachineries.com

Wanted

WANTED APARTMENTS' Customer detailing man with good English/ Telugu/ Kannada. No Targets. No Travel. Place: nearer to Doddakallasandra Metro, Kanapura Road, Anika Builders:- 9342247637.

Multiple Vacancy

MINIMINES CLEANTECH Solutions Pvt Ltd. Doddaballpura, Bangalore 562103. We Urgently Required below positions: 1) Store & Logistics Executive/Manager. 2) Purchase Officer Experience: 2-3 years in manufacturing Industry, Any Degree, Knowledge to handle E2E Stores, Purchase, Logistics. Expert in Vendor Management, Payment Request Raising etc. 3) Mechanical/Chemical Engineer with 2-3 years experience. 4) BSC Chemistry with 2-3 Year Experience. 5) MBA Marketing Candidates for Business Development position 3-5 years experience, 6) Need CA, CFA candidate for Financial Strategy Roll. Email: hr@m-mines.com (WhatsApp) 7899216286

HRD & Admin

WANTED FEMALE Office Assistant Any Degree Fluent in English, Kannada, Hindi, Location: Rajajinagar. Contact: 9108458798/ 9845579620

CARING & Mature Human Relations Executive Stress Free Meaningful Work BANJARA ACADEMY Call 8861421666 banjarahh@gmail.com

BUSINESS

Business Offers

Finance

URGENT LOAN AVAIL @ 3.5% per annum Personal, Business, Housing take over all types loan. Shivganga Finance. Phone: 8826494700.

REAL ESTATE SELLING

Flat

Kanakapura Road

POSH FLATS 3 BHK/ 2 BHK at Kanakapura Road near Forum Mall/ Doddakallasandra Metro with Swimming pool, Car parks, Cauvery water, Generator, Vasthu, Narayannagar. Dr.Swamy- 9342247637. Promoters: Anika Projects.

ADMISSION CORNER

B.B.U.L. Jain Vidyalaya
(Managed by: Shree Mahaveer Jain Shikshan Sangh)
Affiliated to CBSE, Delhi.
Admissions Open for
Nursery (3 Years)
LKG (4 Years) | UKG (5 Years)
Few Seats Available
080 2242 2936 / 080 4155 4379, Mob: +91 77954 82 145
E-Mail: enquiry.bbuljv@gmail.com | Website: bbuljainvidyalaya.org
For further details contact the School Office:
#84, K.R. Road, Shankarapuram, Bangalore - 560 004
Timings: Mon - Fri : 9.00AM to 1.00PM; Sat : 9.00AM to 12.00Noon

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Announcements

ANNOUNCEMENT
I, **SUBRAMONEY BHARTHI P** R/at No. 111, 8th Main, 5th Cross, B. Narayanapura, Dooravaninagar, Bengaluru - 560016, declare that in my daughter's P.S. Nithyasri's CBSE 10th Marks Statement my name is mentioned as **P. Subramani Bharathi**, correct name is **SUBRAMONEY BHARTHI P** vide affidavit dated 01-04-2025, before XXIX Addl. Chief Judicial Magistrate, Bengaluru.

Change of Name

CHANGE OF NAME
I, **Saipreeth M,** residing at No.47/3, 6th Cross, Lavelle Road, Shivaji Nagar, Bengaluru-560001, have changed my name to **SAIPREETH MURALIDHARAN** vide affidavit dated 01-04-2025, sworn before Notary Sivakumara M.N., Bengaluru.

ಶಿಕ್ಷಕಿಯ ಒಂದು ಮುತ್ತಿನ ಕಥೆ, ಮಧುಬಲೆಗೆ ಬಿದ್ದ ವಿದ್ಯಾರ್ಥಿನಿಯ ತಂದೆ

ಮುತ್ತು ಕೊಟ್ಟು ₹50 ಸಾವಿರ ವಸೂಲಿ

ಪ್ರಜಾವಾಣಿ ವಾರ್ತೆ

ಶ್ರೀದೇವಿ ರೂಢಗಿ

ಬೆಂಗಳೂರು: ಪ್ರಿ-ಸ್ಕೂಲ್‌ಗೆ ಬರುತ್ತಿದ್ದ ಪುತ್ರಿಯ ತಂದೆಗೇ ಮುತ್ತು ಕೊಟ್ಟು ಮಧುಬಲೆಗೆ ಬೀಳಿಸುವುದರ ಜತೆಗೆ ಹಣ ಸುಲಿಗೆ ಮಾಡಿದ್ದ ಖಾಸಗಿ ಶಾಲಾ ಶಿಕ್ಷಕಿ, ರೌಡಿ ಶೀಟರ್ ಸೇರಿದಂತೆ ಮೂವರನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಅವರನ್ನು ತಮ್ಮ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಕಲಾಸಿಪಾಳ್ಯದ ಜಾಲಿ ಮೊಹಲ್ಲಾದಲ್ಲಿ ಉದ್ಯಮ ನಡೆಸುತ್ತಿರುವ ಮಹಾಲಕ್ಷ್ಮಿ ಲೇಔಟ್‌ನ ನಿವಾಸಿ(34) ನೀಡಿದ ದೂರು ಆಧರಿಸಿ ಖಾಸಗಿ ಶಾಲೆಯ ಶಿಕ್ಷಕಿ ಶ್ರೀದೇವಿ ರೂಢಗಿ(25), ಅವರ ಪ್ರಿಯಕರ ಸಾಗರ್ ಮೋರೆ (28) ಮತ್ತು ರೌಡಿ ಶೀಟರ್ ಗಣೇಶ್ ಕಾಳೆ (38) ಅವರನ್ನು ಬಂಧಿಸಲಾಗಿದೆ. ಗಣೇಶ್ ಕಾಳೆಯ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಒಂಬತ್ತು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

‘ದೂರುದಾರರಿಗೆ ಮೂವರು ಮಕ್ಕಳಿದ್ದಾರೆ. ಅವರ ಕೊನೆಯ ಮಗಳನ್ನು ಶ್ರೀದೇವಿ ರೂಢಗಿ ನಡೆಸುತ್ತಿದ್ದ ಪ್ರಿ-ಸ್ಕೂಲ್‌ಗೆ ಸೇರಿಸಿದ್ದರು. ಅಲ್ಲದೇ ಮೂರು ಮಕ್ಕಳು ಸಹ ಶ್ರೀದೇವಿ ಅವರ ಬಳಿಯೇ ಡಾನ್ಸ್ ಕಲಿಯುವುದಕ್ಕೆ ಹಾಗೂ ಮನೆಪಾಠಕ್ಕೆ ತೆರಳುತ್ತಿದ್ದರು. ಆ ಸಂದರ್ಭದಲ್ಲಿ ಶಿಕ್ಷಕಿ ಹಾಗೂ ದೂರುದಾರರ ನಡುವೆ ಪರಿಚಯವಾಗಿತ್ತು. ಶಾಲೆಯ ನಿರ್ವಹಣೆಗೆಂದು ಶ್ರೀದೇವಿ ಅವರು ದೂರುದಾರರ ಬಳಿ ₹4 ಲಕ್ಷ ಪಡೆದುಕೊಂಡಿದ್ದರು. 2024ರ ಮಾರ್ಚ್‌ನಲ್ಲಿ ಹಣ ವಾಪಸ್ ಕೊಡುವುದಾಗಿ ತಿಳಿಸಿದ್ದರು. ಆದರೆ, ಹಣ ವಾಪಸ್ ಕೇಳಿದಾಗ ಕೊಟ್ಟಿರಲಿಲ್ಲ. ‘ಸದ್ಯದ ಪರಿಸ್ಥಿತಿಯಲ್ಲಿ ತುಂಬಾ ಕಷ್ಟ ಇದೆ. ಈಗ ಹಣವನ್ನು ಕೊಡಲು ಆಗುವುದಿಲ್ಲ. ನೀವೂ ಶಾಲೆಯ ನಿರ್ವಹಣೆಗೆ ಪಾಲುದಾರರು ಆಗಿ’ ಎಂದು ಆರೋಪಿ ಕೋರಿಕೆ ಇಟ್ಟಿದ್ದರು. ಇದಕ್ಕೆ ದೂರುದಾರರು ಒಪ್ಪಿರಲಿಲ್ಲ’ ಎಂದು ತನಿಖಾ ಮೂಲಗಳು ತಿಳಿಸಿವೆ.

‘ಕೆಲವು ದಿನಗಳು ಕಳೆದ ಬಳಿಕ, ಹಣ ವಾಪಸ್ ನೀಡಲು ಸಾಧ್ಯವಾಗುತ್ತಿಲ್ಲ. ವ್ಯವಹಾರವನ್ನು ಒಂದೇ ಸಲಕ್ಕೆ ಮುಗಿಸೋಣ. ನೀವು ಹೇಳಿದಂತೆ ನಾನು ಮಾಡಲು ಸಿದ್ಧ. ₹15 ಲಕ್ಷ ನೀಡಿದರೆ ತಮ್ಮೊಂದಿಗೆ ಸಲುಗೆಯಿಂದ ಇರುವುದಾಗಿ ಆರೋಪಿ ಹೇಳಿಕೊಂಡಿದ್ದರು. ಅದಕ್ಕೆ ದೂರುದಾರರು ಒಪ್ಪಿರಲಿಲ್ಲ. ಅದೇ ದಿನ ಶಿಕ್ಷಕಿ, ಒಂದು ಮುತ್ತನ್ನು ಕೊಟ್ಟು ₹50 ಸಾವಿರ ವಸೂಲಿ ಮಾಡಿದ್ದರು’ ಎಂದು ದೂರುದಾರ ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಶ್ರೀದೇವಿ ಜತೆಗೆ ಸಂಪರ್ಕ ಸಾಧಿಸಲು ದೂರುದಾರ ಸಹ ಹೊಸ ಮೊಬೈಲ್ ಹಾಗೂ ಸಿಮ್ ಖರೀದಿಸಿದ್ದರು. ಅದಾದ ಮೇಲೆ ಪದೇ ಪದೇ ಹಣಕ್ಕೆ ಬೇಡಿಕೆ ಇಟ್ಟಿದ್ದರಿಂದ ಖರೀದಿಸಿದ್ದ ಮೊಬೈಲ್ ಹಾಗೂ ಸಿಮ್ ಅನ್ನು ಎಸೆದು ನಾಶಪಡಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ₹1 ಕೋಟಿ ಹಣ ಕೇಳಿದ ಆರೋಪಿಗಳು
- ಆರೋಪಿ ಜತೆ ಮಾತುಕತೆಗೆಂದೇ ಪ್ರತ್ಯೇಕ ಸಿಮ್ ಖರೀದಿಸಿದ್ದ ದೂರುದಾರ
- ಪದೇ ಪದೇ ಹಣ ಕೇಳಿದ್ದರಿಂದ ಬೇಸತ್ತಿದ್ದ ಉದ್ಯಮಿ

ಸಾಗರ್

ಗಣೇಶ್ ಕಾಳೆ

ಟಿ.ಸಿ ಕೊಡುವುದಾಗಿ ಹೇಳಿದ್ದ ಆರೋಪಿ

‘ಕಳೆದ ಮಾರ್ಚ್ 12ರಂದು ದೂರುದಾರರ ಪತ್ನಿಗೆ ಕರೆ ಮಾಡಿದ್ದ ಶಿಕ್ಷಕಿ, ಪುತ್ರಿಯ ವರ್ಗಾವಣೆ ಪತ್ರವನ್ನು(ಟಿ.ಸಿ) ಕೊಡುವುದಾಗಿ ತಿಳಿಸಿ, ಪತಿಯನ್ನು ಶಾಲೆಗೆ ಕಳುಹಿಸುವಂತೆ ಕೇಳಿದ್ದರು. ದೂರುದಾರ ಶಾಲೆಗೆ ತೆರಳಿದ್ದರು. ಅಲ್ಲಿ ಶ್ರೀದೇವಿ ಜೊತೆಗಿದ್ದ ಆರೋಪಿಗಳಾದ ಸಾಗರ್ ಹಾಗೂ ಗಣೇಶ್ ಬೆದರಿಕೆ ಹಾಕಿದ್ದರು. ‘ಸಾಗರ್ ಜೊತೆಗೆ ಶ್ರೀದೇವಿ ನಿಶ್ಚಿತಾರ್ಥವಾಗಿದೆ. ಆದರೆ, ನೀನು ಆಕೆಯ ಜೊತೆಗೆ ಸಲುಗೆ ಬೆಳೆಸಿಕೊಂಡಿದ್ದೀಯಾ’ ಎಂದು ಆರೋಪಿ ಗಣೇಶ್ ಬೆದರಿಕೆ ಹಾಕಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಈ ವಿಷಯವನ್ನು ಯಾರಿಗೂ ಹೇಳಬಾರದೆಂದರೆ ₹1 ಕೋಟಿ ಹಣ ನೀಡಬೇಕು ಎಂಬುದಾಗಿ ಆರೋಪಿಗಳು ಬ್ಲ್ಯಾಕ್‌ಮೇಲ್ ಮಾಡಿದ್ದರು. ಹಣ ನೀಡದೆ ಇದ್ದರೆ ಪರಿಚಯವಿರುವ ಡಿವೈಎಸ್‌ಪಿಯೊಬ್ಬರಿಗೆ ಮಾಹಿತಿ ನೀಡಿ ಜೈಲಿಗೆ ಕಳುಹಿಸುತ್ತೇವೆ ಎಂದು ಬೆದರಿಕೆ ಹಾಕಿದ್ದರು. ನಂತರ, ಕಾರಿನಲ್ಲಿ ದೂರುದಾರರನ್ನು ಕರೆದೊಯ್ದು ನಗರದ ಹಲವು ಕಡೆ ಸುತ್ತಾಟ ನಡೆಸಿದ್ದರು. ತಮ್ಮ ಬಳಿ ಹಣವಿಲ್ಲ ಎಂದಾಗ, ಕೊನೆಯದಾಗಿ ಆರೋಪಿಗಳು ₹20 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಅಷ್ಟೂ ಹಣವಿಲ್ಲ ಎಂದಾಗ ₹1.90 ಲಕ್ಷ ಪಡೆದು ಬಿಟ್ಟು ಕಳುಹಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಉಳಿದ ಹಣವನ್ನು ನೀಡುವಂತೆ ಬೇರೆ ಬೇರೆ ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿ ಬೆದರಿಕೆ ಹಾಕುತ್ತಿದ್ದರು. ನಂತರ, ಬ್ಲ್ಯಾಕ್‌ಮೇಲ್‌ಗೆ ಒಳಗಾದ ವ್ಯಕ್ತಿ ಬಂದು ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ವಿಮಾನ ನಿಲ್ದಾಣದ ವೆಬ್‌ಸೈಟ್ ಕನ್ನಡೀಕರಣ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕೃತ ವೆಬ್‌ಸೈಟ್‌ನಲ್ಲಿ ಇನ್ನು ಮುಂದೆ ಕನ್ನಡ ಭಾಷೆಯಲ್ಲಿಯೂ ಮಾಹಿತಿ ದೊರೆಯಲಿದೆ.

ಕನ್ನಡ ಭಾಷೆಗೆ ಆದ್ಯತೆ ನೀಡುವ ಜೊತೆಗೆ ಪ್ರಾದೇಶಿಕ, ಸಾಂಸ್ಕೃತಿಕ ಮೌಲ್ಯ ಎತ್ತಿಹಿಡಿಯುವ ನಿಟ್ಟಿನಲ್ಲಿ ಕೆಂಪೇಗೌಡ ಜಾಲತಾಣದಲ್ಲಿ ಕನ್ನಡ ಭಾಷೆಯ ಆಯ್ಕೆಯನ್ನು ಹೊಸದಾಗಿ ಪರಿಚಯಿಸುವ ಮೂಲಕ ಪ್ರಯಾಣಿಕ ಸ್ನೇಹಿಯಾಗಲು ಕೆಐಎ ಮುಂದಾಗಿದೆ. ವಿಮಾನಗಳ ಹಾರಾಟದ ನಿರ್ಗಮನ, ಆಗಮನ ಮತ್ತು ವಿಳಂಬದ ಕುರಿತು ಕನ್ನಡ ಭಾಷೆಯಲ್ಲಿಯೇ ಮಾಹಿತಿ ದೊರೆಯಲಿದೆ. ವಿಮಾನಗಳಲ್ಲಿ ಸೀಟ್ ಕಾಯ್ದಿರಿಸುವುದು, ಟ್ಯಾಕ್ಸಿ ಸೇವೆ ಸೇರಿದಂತೆ ನಿಲ್ದಾಣದ ವಿವಿಧ ಸೌಲಭ್ಯಗಳ ಕುರಿತು ಪ್ರಯಾಣಿಕರಿಗೆ ತಿಳಿಸುವ ಕೆಲಸ ಮಾಡಲಾಗಿದೆ.

ಭದ್ರತಾ ಕಾರ್ಯವಿಧಾನ, ಬ್ಯಾಗೇಜ್ ನಿಯಮ, ಪ್ರಯಾಣಕ್ಕೆ ಬೇಕಾದ ಅನುಕೂಲತೆಯ ಮಾಹಿತಿಗಳು ಸೇರಿದಂತೆ ಹಲವು ವಿಚಾರಗಳು ಕನ್ನಡ ಭಾಷೆಯಲ್ಲಿ ದೊರೆಯಲಿದೆ.

ಸಾಮಾನ್ಯವಾಗಿ ಪದೇ ಪದೇ ಕೇಳುವ ಪ್ರಶ್ನೆಗಳಿಗೆ ಕನ್ನಡ ಭಾಷೆಯಲ್ಲಿ ಸುಲಭವಾಗಿ ಉತ್ತರ ಸಿಗಲಿದ್ದು, ಪ್ರಯಾಣಿಕರ ಸಾಕಷ್ಟು ಗೊಂದಲಗಳು ಪರಿಹಾರವಾಗಲಿವೆ.

ವೆಬ್‌ಸೈಟ್: https://www.bengaluruairport.com/kn/

ಪಿಕಪ್ ವಾಹನ ಚಾಲಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರದ ರಸ್ತೆ ಬದಿಯಲ್ಲಿ ಕುಳಿತಿದ್ದ ಪಿಕಪ್ ವಾಹನದ ಚಾಲಕನನ್ನು ಆರೋಪಿಗಳು ಕೊಲೆ ಮಾಡಿ ಪರಾರಿ ಆಗಿದ್ದಾರೆ.

ಮೈಸೂರಿನ ನಿಖಿಲ್ (33) ಕೊಲೆಯಾದ ಚಾಲಕ. ‘ಕೊಲೆಗೆ ಕಾರಣ ಗೊತ್ತಾಗಿಲ್ಲ. ಆರೋಪಿಗಳ ಪತ್ತೆ ಕಾರ್ಯ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಸಂಭಲ್ ಗಲಭೆ ಆರೋಪಿ ಬಂಧನ

ಸಂಭಲ್ (ಪಿಟಿಐ): ಸಂಭಲ್‌ನಲ್ಲಿ ಕಳೆದ ವರ್ಷ ನಡೆದಿದ್ದ ಹಿಂಸಾಚಾರ ಕೃತ್ಯದಲ್ಲಿ ಪ್ರಮುಖವಾಗಿ ಭಾಗಿಯಾಗಿದ್ದ ‘ಶಾರಿಕ್ ಸಾತಾ’ ತಂಡದ ಸದಸ್ಯನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತ ದಿಲೀಪ್ ಅಲಿಯಾಸ್ ಹರೀಶ್ ಅಪರಾಧ ಕೃತ್ಯಗಳಲ್ಲಿ 30 ವರ್ಷಗಳಿಂದ ಸಕ್ರಿಯನಾಗಿದ್ದ ಎಂದು ಹೇಳಿದ್ದಾರೆ.

397 ವಾಹನಗಳು ಜಪ್ತಿ, 68 ಪೋಷಕರ ವಿರುದ್ಧ ಪ್ರಕರಣ ದಾಖಲು

ವ್ಹೀಲಿ: ವಿವಿಧೆಡೆ 324 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಸುರಕ್ಷತಾ ನಿಯಮ ಉಲ್ಲಂಘಿಸಿ, ನಗರದಲ್ಲಿ ವ್ಹೀಲಿ ನಡೆಸುತ್ತಿರುವ ದ್ವಿಚಕ್ರ ವಾಹನ ಸವಾರರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರೆಸಿರುವ ಸಂಚಾರ ಪೊಲೀಸರು, ಮಾರ್ಚ್‌ನಲ್ಲಿ 398 ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ವಿರುದ್ಧ ಕ್ರಮ ಕೈಗೊಂಡಿದ್ದಾರೆ.

ಮಾರ್ಚ್ 1ರಿಂದ 31ರವರೆಗೆ ವಿವಿಧ ಸಂಚಾರ ಠಾಣೆಗಳ ವ್ಯಾಪ್ತಿಗಳಲ್ಲಿ ಕಾರ್ಯಾಚರಣೆ ಕೈಗೊಂಡು, 397 ವಾಹನ ಜಪ್ತಿ ಮಾಡಿದ್ದಾರೆ.

ಪಶ್ಚಿಮ ಸಂಚಾರ ವಿಭಾಗದ ಕಾಮಾಕ್ಷಿಪಾಳ್ಯ, ವಿಜಯನಗರ, ಮಾಗಡಿ ರಸ್ತೆ, ಜ್ಞಾನಭಾರತಿ, ಕೆಂಗೇರಿ, ಬ್ಯಾಟರಾಯನಪುರ, ಸದಾಶಿವನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಯಿತು ಎಂದು ಸಂಚಾರ ಪೊಲೀಸರು ತಿಳಿಸಿದರು.

ವ್ಹೀಲಿ ಮಾಡಿದ ಆರೋಪಿ

ಒಂದು ತಿಂಗಳ ಅವಧಿಯಲ್ಲಿ 324 ಆರೋಪಿಗಳನ್ನು ಬಂಧಿಸಲಾಗಿದೆ. ಆ ಪೈಕಿ 82 ಬಾಲಕರು ಇದ್ದಾರೆ. ಮಕ್ಕಳಿಗೆ ಬೈಕ್ ನೀಡಿದ್ದ 68 ಪೋಷಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, 40 ಮಂದಿಯ ಚಾಲನಾ ಪರವಾನಗಿ ಹಾಗೂ 197 ಆರ್.ಸಿ(ವಾಹನ ನೋಂದಣಿ) ರದ್ದುಪಡಿಸುವಂತೆ ಕೋರಿ ಸಾರಿಗೆ ಇಲಾಖೆಗೆ ಪತ್ರ ಬರೆಯಲಾಗಿದೆ. ಬಾಲಾಪರಾಧ ಕಾಯ್ದೆ ಅಡಿ 32 ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

‘ವ್ಹೀಲಿಯಲ್ಲಿ ಭಾಗಿಯಾದ ಆರೋಪಿಗಳನ್ನು ತಪಾಸಣೆಗೆ ಒಳಪಡಿಸಲಾಗಿದ್ದು, ಡ್ರಗ್ಸ್ ತೆಗೆದುಕೊಂಡು ವ್ಹೀಲಿ ನಡೆಸುತ್ತಿರುವುದು ಕಂಡುಬಂದಿದೆ. ಕೆ.ಜಿ.ಹಳ್ಳಿ, ಮಡಿವಾಳ, ಅಶೋಕನಗರ, ಕಾಮಾಕ್ಷಿಪಾಳ್ಯ, ವಿಜಯನಗರ ಭಾಗದಲ್ಲಿ ಈ ರೀತಿಯ ಪ್ರಕರಣಗಳು ಹೆಚ್ಚಾಗಿ ಪತ್ತೆಯಾಗಿವೆ. ಕೆಲವು ತಿಂಗಳ ಹಿಂದೆ ಮಾರಕಾಸ್ತ್ರ ತೋರಿಸುತ್ತಾ ವ್ಹೀಲಿ ನಡೆಸುತ್ತಿದ್ದ ಆರೋಪಿಗಳನ್ನು ರೌಡಿಪಟ್ಟಿಗೆ ಸೇರ್ಪಡೆ ಮಾಡಲಾಗಿದೆ. ಆರೋಪಿಗಳ ವಿರುದ್ಧ ಮಾದಕ ದ್ರವ್ಯ ನಿಗ್ರಹ ಕಾಯ್ದೆ ಅಡಿ(ಎನ್‌ಡಿಪಿಎಸ್) ಹಾಗೂ ಶಸ್ತ್ರಾಸ್ತ್ರ ಕಾಯ್ದೆಗಳ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಸಂಚಾರ ವಿಭಾಗ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ತಿಳಿಸಿದರು.

ಯತ್ನಾಳ ಹೇಳಿಕೆ: ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟಿ ರನ್ಯಾ ರಾವ್ ಘನತೆಗೆ ಚ್ಯುತಿ ಉಂಟು ಮಾಡುವಂತಹ ಹೇಳಿಕೆ ನೀಡಿದ್ದಾರೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಯತ್ನಾಳ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ ಸಿಂಗ್ ಯೆರೂರು ಅವರು ಮಂಗಳವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ದೂರುದಾರರ ಪರ ಹೈಕೋರ್ಟ್ ವಕೀಲ ಎಲ್.ಮಹೇಶ್, ‘ಸಾರ್ವಜನಿಕ ವಲಯದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಅರ್ಜಿದಾರರು ಈ ರೀತಿ ಮನಬಂದಂತೆ ಮಹಿಳೆಯ ಬಗ್ಗೆ ಮಾತನಾಡಿರುವುದು ಒಪ್ಪುವಂತಹ ನಡವಳಿಕೆಯಲ್ಲ. ಇದರಿಂದಾಗಿ ಬಹುಭಾಷಾ ನಟಿಯ ಗೌರವ ಮತ್ತು ಚಾರಿತ್ರ್ಯಕ್ಕೆ ಧಕ್ಕೆ ಉಂಟಾಗಿದೆ. ಆದ್ದರಿಂದ, ಅವರ ವಿರುದ್ಧ ಸೂಕ್ತ ಕ್ರಮಕ್ಕೆ ನಿರ್ದೇಶಿಸಬೇಕು’ ಎಂದು ಕೋರಿದರು.

ಇದನ್ನು ಅಲ್ಲಗಳೆದ ಅರ್ಜಿದಾರರ ಪರ ವಕೀಲ ವೆಂಕಟೇಶ್ ಪಿ.ದಳವಾಯಿ, ‘ರನ್ಯಾ ರಾವ್ ಘನತೆಗೆ ಹಾನಿ ಉಂಟು ಮಾಡುವ ಉದ್ದೇಶವನ್ನು ಅರ್ಜಿದಾರರು ಹೊಂದಿರಲಿಲ್ಲ. ಇದೊಂದು ರಾಜಕೀಯ ಪ್ರೇರಿತ ದೂರು. ಆದ್ದರಿಂದ, ಇದನ್ನು ರದ್ದುಗೊಳಿಸಬೇಕು’ ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಆಕ್ಷೇಪಣೆ ಸಲ್ಲಿಸುವಂತೆ ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರಿಗೆ ಸೂಚಿಸಿ ಇದೇ 28ಕ್ಕೆ ವಿಚಾರಣೆ ಮುಂದೂಡಿತು.

ರನ್ಯಾ ಸಂಬಂಧಿ ಅಕುಲಾ ಅನೂರಾಧ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಯತ್ನಾಳ ಅವರ ವಿರುದ್ಧ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ ಕಲಂ 528ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಜಾಮೀನು: ರನ್ಯಾ ಹೈಕೋರ್ಟ್‌ಗೆ ಮೊರೆ

ಚಿನ್ನ ಕಳ್ಳಸಾಗಣೆ ಪ್ರಕರಣದ ಆರೋಪಿ ನಟಿ ರನ್ಯಾ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಾಗಿದೆ. ಜಾಮೀನು ಅರ್ಜಿಯನ್ನು ಆರ್ಥಿಕ ಅಪರಾಧ ಪ್ರಕರಣಗಳ ವಿಚಾರಣೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮಾರ್ಚ್ 14ರಂದು ವಜಾಗೊಳಿಸಿತ್ತು. ನಂತರ ಮಾರ್ಚ್ 27ರಂದು ಸೆಷನ್ಸ್ ಕೋರ್ಟ್ ಕೂಡ ಅರ್ಜಿ ವಜಾ ಮಾಡಿತ್ತು.

ದೃಶ್ಯಾವಳಿ ಸಂಗ್ರಹಕ್ಕೆ ಕೋರಿಕೆ: ಡಿಆರ್‌ಐಗೆ ನೋಟಿಸ್

ಬೆಂಗಳೂರು: ‘ಚಿನ್ನ ಕಳ್ಳಸಾಗಣೆ ಆರೋಪದಡಿ ನಟಿ ರನ್ಯಾ ಅಲಿಯಾಸ್ ಹರ್ಷವರ್ಧಿನಿ ಅವರನ್ನು ಡಿಆರ್‌ಐ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದ ದಿನವಾದ 2025ರ ಮಾರ್ಚ್ 3ರಿಂದ ಮಾರ್ಚ್ 4ರ ಬೆಳಗಿನ ಜಾವದ ತನಕ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಸಂಗ್ರಹಿಸಬೇಕು’ ಎಂದು ಕೋರಲಾದ ಅರ್ಜಿ ಸಂಬಂಧ ಕೇಂದ್ರ ಸರ್ಕಾರ ಹಾಗೂ ಡಿಆರ್‌ಐಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ರನ್ಯಾ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, ‘ದತ್ತಾಂಶ ಬುಧವಾರ (ಏ.2) ಸಂಜೆ ಡಿಲಿಟ್ ಆಗಲಿರುವ ಹಿನ್ನೆಲೆಯಲ್ಲಿ ಬುಧವಾರ (ಏ.2) ಬೆಳಿಗ್ಗೆ ಈ ಸಂಬಂಧ ಆದೇಶಿಸಲಾಗುವುದು’ ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ಎಚ್‌ಡಿಕೆ ಅರ್ಜಿ: ಆಕ್ಷೇಪಣೆ ಸಲ್ಲಿಕೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಬೆಂಗಳೂರು: ‘ಕೇತಗಾನಹಳ್ಳಿ ಸರ್ಕಾರಿ ಜಮೀನುಗಳ ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ರಾಮನಗರ ತಹಶೀಲ್ದಾರ್ ಅವರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ನೀಡಿರುವ ನೋಟಿಸ್ ಅನುಸಾರ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು’ ಎಂಬ ಈ ಹಿಂದಿನ ಆದೇಶವನ್ನು ಪುನಃ ವಿಸ್ತರಿಸಿರುವ ಹೈಕೋರ್ಟ್, ಈ ಸಂಬಂಧ ಹೆಚ್ಚುವರಿ ಆಕ್ಷೇಪಣೆ ಸಲ್ಲಿಸಿ ಎಂದು ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಈ ಕುರಿತಂತೆ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎನ್.ಎಸ್.ಸಂಜಯ ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಕುಮಾರಸ್ವಾಮಿ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರು, ‘ತಹಶೀಲ್ದಾರ್ ವಿಚಾರಣೆ ನಡೆಸದೆಯೇ ವರದಿ ಸಲ್ಲಿಸಿದ್ದಾರೆ. ರಿಟ್ ಅರ್ಜಿಯಲ್ಲಿ ಕೆಲ ಮಾರ್ಪಾಡು ಮಾಡಲಾಗಿದೆ’ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ತಿದ್ದುಪಡಿ ಅರ್ಜಿಯನ್ನು ಮಾನ್ಯ ಮಾಡಲಾಗಿದೆ. ಹೀಗಾಗಿ, ಮೂಲ ಅರ್ಜಿ ಮೇಲೆ ಹೆಚ್ಚುವರಿ ಆಕ್ಷೇಪಣೆ ಸಲ್ಲಿಸಿ’ ಎಂದು ರಾಜ್ಯ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರಿಗೆ ಸೂಚಿಸಿತು.

ಇದೇ ವೇಳೆ ‘ಸಮಾಜ ಪರಿವರ್ತನಾ ಸಮುದಾಯ’ದ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಎಸ್.ಬಸವರಾಜು, ‘ನಾವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ನಿಂದನೆ ಅರ್ಜಿಯಲ್ಲಿ ದೂರುದಾರರಾಗಿದ್ದೇವೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದನ್ನು ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 4ಕ್ಕೆ ಮುಂದೂಡಿತು. ಕುಮಾರಸ್ವಾಮಿ ಪರ ಹೈಕೋರ್ಟ್ ವಕೀಲ ಎ.ವಿ.ನಿಶಾಂತ್ ವಕಾಲತ್ತು ವಹಿಸಿದ್ದಾರೆ.

ಉರುಳಿದ ಕಾರು: ಮೂವರ ಸಾವು

ಮೊಳಕಾಲ್ಮುರು: ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ಒಳಗಿದ್ದ ಮೂವರು ಮೃತಪಟ್ಟು ಇಬ್ಬರು ಗಾಯಗೊಂಡಿರುವ ಘಟನೆ ಮಂಗಳವಾರ ಬೆಳಿಗ್ಗೆ ತಾಲ್ಲೂಕಿನ ರಾಂಪುರ ಸಮೀಪದ ಬೊಮ್ಮಕ್ಕನಹಳ್ಳಿ ಬಳಿ ನಡೆದಿದೆ.

ರಾಷ್ಟ್ರೀಯ ಹೆದ್ದಾರಿ 150 ‘ಎ’ನಲ್ಲಿ ಈ ಘಟನೆ ನಡೆದಿದ್ದು, ಬೆಂಗಳೂರಿನ ಕುರುಬರಹಳ್ಳಿಯ ನಿವಾಸಿಗಳಾದ ರೆಹಮಾನ್ (15), ಸಮೀರ್ (10) ಮತ್ತು ಚಾಲಕ ಮೌಲಾ (42) ಮೃತಪಟ್ಟಿದ್ದಾರೆ. ಫಾತೀಮಾ ಮತ್ತು ಸಲಿಮಾ ಬೇಗಂ ಗಾಯಗೊಂಡಿದ್ದಾರೆ.



ಬಿಬಿಎಂಪಿ: ವಲಯ ವರ್ಗೀಕರಣ • ವರ್ಗ ಯೂನಿಟ್ ದರ ರದ್ದು, ಎಲ್ಲ ವಲಯಗಳಿಗೆ ಒಂದೇ ಶುಲ್ಕ

ಕಟ್ಟಡಗಳಲ್ಲಿನ ಪಾರ್ಕಿಂಗ್ ಶುಲ್ಕ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ವಸತಿ ಮತ್ತು ವಸತಿಯೇತರ ಕಟ್ಟಡಗಳಲ್ಲಿರುವ ವಾಹನ ನಿಲ್ದಾಣ (ಪಾರ್ಕಿಂಗ್) ಪ್ರದೇಶಕ್ಕೆ ಶುಲ್ಕವನ್ನು ಮರುನಿಗದಿಪಡಿಸಿ ಕರಡು ಅಧಿಸೂಚನೆ ಹೊರಡಿಸಲಾಗಿದೆ.

ಯುನಿಟ್ ಏರಿಯಾ ವ್ಯಾಲ್ಯೂ (ಯುಎವಿ)ಯಂತೆ ಯೂನಿಟ್ ಶುಲ್ಕ ನಿಗದಿಪಡಿಸಿ, ಬಿಬಿಎಂಪಿ ಮುಖ್ಯ ಆಯುಕ್ತರು ಕರಡು ಅಧಿಸೂಚನೆಯನ್ನು ಮಾರ್ಚ್ 29ರಂದು ಹೊರಡಿಸಿದ್ದಾರೆ. ಆಕ್ಷೇಪಣೆ ಸಲ್ಲಿಸಲು ಏಳು ದಿನ ಅವಕಾಶ ನೀಡಲಾಗಿದೆ.

2016ರ ಮಾರ್ಚ್ 28ರ ಅಧಿಸೂಚನೆಯಂತೆ ವಲಯ ವರ್ಗೀಕರಣದಲ್ಲಿ ಯುಎವಿ ನಿರ್ಧರಿಸಲಾಗಿತ್ತು. ತೆರಿಗೆ ಸೂತ್ರದಂತೆ, ವಲಯ ವರ್ಗೀಕರಣ (ಎ,ಬಿ,ಸಿ,ಡಿ,ಇ ಎಫ್) ಹಾಗೂ ವರ್ಗದ (ಆರ್‌ಸಿಸಿ, ರೆಡ್ ಆಕ್ಸೈಡ್, ಶೀಟ್/ ಟೈಲ್) ಯೂನಿಟ್ ದರದ ಶೇ 50ರಷ್ಟನ್ನು ವಾಹನ ನಿಲುಗಡೆ ಶುಲ್ಕವಾಗಿ ಸಂಗ್ರಹಿಸಲಾಗುತ್ತಿತ್ತು. ಅದನ್ನು ಪರಿಷ್ಕರಿಸಿ ಎಲ್ಲ ವಲಯ ವರ್ಗೀಕರಣ ಹಾಗೂ ವರ್ಗದ ಸ್ವತ್ತುಗಳಿಗೂ ಒಂದೇ ರೀತಿಯ ವಾಹನ ನಿಲುಗಡೆ ಪ್ರದೇಶದ ದರಗಳನ್ನು ನಿಗದಿಪಡಿಸಲಾಗಿದೆ.

ವಸತಿ ಕಟ್ಟಡಗಳಲ್ಲಿ ಮುಚ್ಚಿದ ಮತ್ತು ಸ್ಟಿಲ್ಟ್ ವಾಹನ ನಿಲುಗಡೆ ಪ್ರದೇಶವನ್ನು ಸ್ವಂತ ಅಥವಾ ಬಾಡಿಗೆಗೆ ಉಪಯೋಗಿಸುತ್ತಿದ್ದರೆ ಪ್ರತಿ ಚದರಡಿಗೆ ₹2 ಪಾವತಿಸಬೇಕು. ವಸತಿಯೇತರ ಕಟ್ಟಡಗಳು ಪ್ರತಿ ಚದರಡಿಗೆ ₹3 ಪಾವತಿಸಬೇಕು ಎಂದು ಶುಲ್ಕವನ್ನು ಪರಿಷ್ಕರಿಸಲಾಗಿದೆ ಎಂದು ಕರಡು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಹೊಸ ಯುಎವಿ ದರಗಳ ಪ್ರಕಾರ, 150 ಚದರ ಅಡಿಯಷ್ಟು ವಾಹನ ನಿಲ್ದಾಣ ಪ್ರದೇಶವನ್ನು ಹೊಂದಿದ್ದರೆ, ವಸತಿ ಪ್ರದೇಶಕ್ಕೆ ಪ್ರತಿ ಚದರಡಿಗೆ ಪ್ರತಿ ತಿಂಗಳಿಗೆ ₹2ರಂತೆ ₹300 ಆಗುತ್ತದೆ. ತೆರಿಗೆ ಸೂತ್ರದಂತೆ ವರ್ಷಕ್ಕೆ ₹600 ಪಾವತಿಸಬೇಕಾಗುತ್ತದೆ. ವಸತಿಯೇತರ ಕಟ್ಟಡಗಳಿಗೆ ಶುಲ್ಕ ₹1,125ರಷ್ಟಾಗುತ್ತದೆ. ಈ ಶುಲ್ಕ ಈಗ ಪಾವತಿಸುತ್ತಿರುವುದಕ್ಕಿಂತ ಕಡಿಮೆಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ಪರಿಷ್ಕರಣೆಯಂತೆ ಶುಲ್ಕ ಇಳಿಕೆ: ಮುನೀಶ್ ಮೌದ್ಗಿಲ್


ಮುನೀಶ್ ಮೌದ್ಗಿಲ್

‘2016ರ ಮಾರ್ಚ್ 28ರ ಅಧಿಸೂಚನೆಯಂತೆ ಆಸ್ತಿ ತೆರಿಗೆ ನಿರ್ಧರಿಸುವ ಸಮಯದಲ್ಲಿ ವಾಹನ ನಿಲುಗಡೆ ಪ್ರದೇಶವನ್ನು ನಮೂದಿಸಿದವರಿಂದ ಈಗಾಗಲೇ ಆಸ್ತಿ ತೆರಿಗೆಯಲ್ಲೇ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತಿದೆ. ಹೊಸ ಪರಿಷ್ಕರಣೆಯಂತೆ ಈ ಶುಲ್ಕ ಕಡಿಮೆಯಾಗಲಿದೆ’ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

‘ವಾಹನ ನಿಲುಗಡೆಗೆ ಹೆಚ್ಚಿನ ಶುಲ್ಕ ವಿಧಿಸದೆ, ಎಲ್ಲ ಕಟ್ಟಡಗಳಲ್ಲೂ ವಾಹನ ನಿಲುಗಡೆ ಪ್ರದೇಶವನ್ನು ಹೊಂದಲು ಉತ್ತೇಜಿಸಬೇಕು. ಹೀಗಾಗಿ ಶುಲ್ಕ ಕಡಿಮೆ ಮಾಡಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದರು. ಅದರಂತೆ, ಶುಲ್ಕವನ್ನು ಪರಿಷ್ಕರಿಸಿ ಕರಡು ಅಧಿಸೂಚನೆ ಹೊರಡಿಸಲಾಗಿದೆ’ ಎಂದರು.

‘ವಾಹನ ನಿಲುಗಡೆ ಪ್ರದೇಶವನ್ನು ಈಗಾಗಲೇ ಆಸ್ತಿ ತೆರಿಗೆಯಲ್ಲಿ ನಮೂದಿಸಿರುವ ವಸತಿ ಕಟ್ಟಡ ಮಾಲೀಕರಿಗೆ ಶೇ 30ರಷ್ಟು ಶುಲ್ಕ ಕಡಿಮೆಯಾಗಲಿದೆ. ವಸತಿಯೇತರ ಕಟ್ಟಡಗಳ ಮಾಲೀಕರಿಗೆ ಶೇ 25ರಷ್ಟು ಕಡಿತವಾಗಲಿದೆ. ಒಟ್ಟಾರೆ ಬಿಬಿಎಂಪಿಗೆ ₹5 ಸಾವಿರ ಕೋಟಿ ಆಸ್ತಿ ತೆರಿಗೆಯಲ್ಲಿ ಸುಮಾರು ₹50 ಕೋಟಿ ಕಡಿಮೆಯಾಗಲಿದೆ’ ಎಂದು ಮಾಹಿತಿ ನೀಡಿದರು.

‘ವಾಹನಗಳ ನಿಲುಗಡೆ ಪ್ರದೇಶವನ್ನು ಆಸ್ತಿ ತೆರಿಗೆಯಲ್ಲಿ ನಮೂದಿಸದವರು ಈ ವರ್ಷದ ಆಸ್ತಿ ತೆರಿಗೆ ಪಾವತಿ ಸಂದರ್ಭದಲ್ಲಿ ನಮೂದಿಸಿಕೊಳ್ಳಬಹುದು’ ಎಂದರು.

ಇ–ಖಾತಾ, ಹೊಸ ಖಾತಾ ಸ್ಥಗಿತ

ಹೊಸ ಆರ್ಥಿಕ ವರ್ಷದಲ್ಲಿ ಶುಲ್ಕ, ತೆರಿಗೆಗಳನ್ನು ಹೆಚ್ಚಾಗಿ ಸಂಗ್ರಹಿಸುವ ಉದ್ದೇಶ ಹೊಂದಿರುವ ಬಿಬಿಎಂಪಿ, ಇ–ಖಾತಾ ಮತ್ತು ಹೊಸ ಖಾತಾ ವೆಬ್‌ಸೈಟ್‌ಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ‘ಆಸ್ತಿ ತೆರಿಗೆ ಆನ್‌ಲೈನ್ ವ್ಯವಸ್ಥೆಯಲ್ಲಿ ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಹೊಸ ಖಾತಾ ವ್ಯವಸ್ಥೆಯ ಸಾಫ್ಟ್‌ವೇರ್ ಅನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಏಪ್ರಿಲ್ 4ರ ನಂತರ ಸೇವೆ ಪುನರಾರಂಭವಾಗಲಿದೆ’ ಎಂದು ತಿಳಿಸಲಾಗಿದೆ.

‘ಇ–ಖಾತಾ, ಹೊಸ ಖಾತಾ ವ್ಯವಸ್ಥೆಯಲ್ಲಿ ಎಲ್ಲ ರೀತಿಯ ಡೇಟಾವನ್ನು ನಮೂದಿಸಿದ ಮೇಲೆ, ಸಂದೇಶ ಬರುತ್ತಿದೆ. ಸಾಫ್ಟ್‌ವೇರ್ ಕಾರ್ಯನಿರ್ವಹಿಸದಿದ್ದರೆ ಅಥವಾ ತಾತ್ಕಾಲಿಕವಾಗಿ ತಡೆ ಹಿಡಿದಿದ್ದರೆ, ಯಾವ ಡೇಟಾ ನಮೂದಿಸಲು ಬಿಡಬಾರದು. ಈ ಬಗ್ಗೆ ಮೊದಲೇ ತಿಳಿಸಬೇಕಿತ್ತು’ ಎಂದು ವಿಜಯನಗರದ ಚಂದ್ರಪ್ಪ ಹೇಳಿದರು.

ಪರಿಷ್ಕೃತ ವಾಹನ ನಿಲುಗಡೆ ವಾರ್ಷಿಕ ಶುಲ್ಕ (ತೆರಿಗೆ ಸೂತ್ರ)

ವಸತಿ	150 ಚದರಡಿ (ವಾಹನ ನಿಲುಗಡೆ ಪ್ರದೇಶ) ₹2 (ಪ್ರತಿ ಚದರಡಿಗೆ) 10 ತಿಂಗಳು= ₹3,000. ಈ ಮೊತ್ತದಲ್ಲಿ ಶೇ 20ರಷ್ಟು= ₹600
ವಸತಿಯೇತರ	150 ಚದರಡಿ (ವಾಹನ ನಿಲುಗಡೆ ಪ್ರದೇಶ) ₹3 (ಪ್ರತಿ ಚದರಡಿಗೆ) 10 ತಿಂಗಳು= ₹4,500. ಈ ಮೊತ್ತದಲ್ಲಿ ಶೇ 25ರಷ್ಟು= ₹1,125

* ಬಿಬಿಎಂಪಿ ಮಾಹಿತಿ

ಎಷ್ಟು ಉಳಿತಾಯ?

150 ಚದರಡಿ ವಾಹನ ನಿಲುಗಡೆ ಪ್ರದೇಶಕ್ಕೆ ವಾರ್ಷಿಕವಾಗಿ ಸುಮಾರು ₹780 ಪಾವತಿಸುತ್ತಿದ್ದರೆ, ಅಂತಹ ಕಟ್ಟಡ ಮಾಲೀಕರು ₹600 ಪಾವತಿ ಮಾಡಬೇಕಾಗುತ್ತದೆ.

ಆಸ್ತಿ ತೆರಿಗೆ ಪಾವತಿಗೆ ತಡೆ

ಪ್ರಸಕ್ತ ಆರ್ಥಿಕ ವರ್ಷದಲ್ಲೇ ಆಸ್ತಿ ತೆರಿಗೆಯಲ್ಲಿ ಕಸ ನಿರ್ವಹಣ ಸೇವಾ ಶುಲ್ಕ ಸೇರ್ಪಡೆ, ವಾಹನ ನಿಲುಗಡೆ ಶುಲ್ಕದಲ್ಲಿ ಪರಿಷ್ಕರಣೆ ಮಾಡುತ್ತಿರುವುದರಿಂದ ಬಿಬಿಎಂಪಿಯ ಆಸ್ತಿ ತೆರಿಗೆ ಪಾವತಿಸುವ ವ್ಯವಸ್ಥೆ ಸ್ಥಗಿತಗೊಂಡಿದೆ.

ಆನ್‌ಲೈನ್‌ನಲ್ಲಿ ಆಸ್ತಿ ತೆರಿಗೆ ಪಾವತಿಸುವ ವೆಬ್‌ಸೈಟ್‌ನಲ್ಲಿ ‘ಆರ್ಥಿಕ ವರ್ಷ 2024–25 ಮುಗಿದಿದೆ ಮತ್ತು ಹೊಸ ಆರ್ಥಿಕ ವರ್ಷ (2025–26) ಆರಂಭವಾಗುತ್ತಿದೆ. ಆನ್‌ಲೈನ್‌ನಲ್ಲಿ ಆಸ್ತಿ ತೆರಿಗೆ ಪಾವತಿಸುವ ವ್ಯವಸ್ಥೆ ಏಪ್ರಿಲ್ 3ರ ಸಂಜೆ 5ರಿಂದ ಕಾರ್ಯನಿರ್ವಹಿಸುತ್ತದೆ’ ಎಂಬ ಸಂದೇಶವನ್ನು ಪ್ರಕಟಿಸಲಾಗಿದೆ.

‘ಪ್ರಸ್ತಾವಿತ ಶುಲ್ಕಗಳನ್ನೆಲ್ಲ ಆಸ್ತಿ ತೆರಿಗೆ ಮೂಲಕವೇ ಸಂಗ್ರಹಿಸಲು ಆರ್ಥಿಕ ವರ್ಷ ಕೊನೆಗೊಳ್ಳುವ ಅಂತಿಮ ದಿನಗಳಲ್ಲಿ ನಿರ್ಧರಿಸಲಾಯಿತು. ಹೊಸ ಕಾಲಂ ಸೃಷ್ಟಿಸಬೇಕಾದ ಅಗತ್ಯವಿದೆ. ಹೀಗಾಗಿ, ಆಸ್ತಿ ತೆರಿಗೆ ವ್ಯವಸ್ಥೆಗೆ ತಡೆಯಾಗಿದೆ. ತೆರಿಗೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿ ಅವಧಿಯನ್ನು ಮುಂದೆ ತಿಳಿಸಲಾಗುತ್ತದೆ’ ಎಂದು ಅಧಿಕಾರಿಗಳು ತಿಳಿಸಿದರು.

ಸುದ್ದಿ 2 ನಿಮಿಷ

ಜನರ ಆಕ್ರೋಶಕ್ಕೆ ಬಿಜೆಪಿ ಕಿವಿಗೊಡಲಿ: ಪ್ರಿಯಾಂಕ್ ಖರ್ಗೆ

ಬೆಂಗಳೂರು: ‘ಬೆಲೆ ಏರಿಕೆಗೆ ಮೂಲ ಕಾರಣ ಕೇಂದ್ರ ಸರ್ಕಾರ. ಬಿಜೆಪಿ ನಾಯಕರು ಜನರ ಎದೆಗೆ ಕಿವಿಗೊಟ್ಟರೆ ಆ ಆಕ್ರೋಶ ಕೇಳಿಸಲಿದೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿರುವ ಪ್ರಿಯಾಂಕ್ ಅವರು, ‘ಕಳೆದೊಂದು ವರ್ಷದಲ್ಲಿ ಒಂದು ಸಾಮಾನ್ಯ ಸಸ್ಯಾಹಾರಿ ಊಟದ ಬೆಲೆ ಶೇ 57ರಷ್ಟು ದುಬಾರಿಯಾಗಿದೆ. ತರಕಾರಿ ಹಾಗೂ ಬೇಳೆಕಾಳುಗಳ ಬೆಲೆ ಒಂದೂವರೆ ಪಟ್ಟು ಹೆಚ್ಚಾಗಿವೆ. ಕಚ್ಚಾ ತೈಲದ ಬೆಲೆ ಶೇ 34ರಷ್ಟು ಇಳಿಕೆಯಾಗಿದ್ದರೂ ಕೇಂದ್ರ ಸರ್ಕಾರ ಪೆಟ್ರೋಲ್ ಹಾಗೂ ಡೀಸೆಲ್ ಮೇಲೆ ದುಬಾರಿ ಸುಂಕ, ತೆರಿಗೆಗಳನ್ನು ವಿಧಿಸಿ ₹ 36.58 ಲಕ್ಷ ಕೋಟಿ ಸಂಗ್ರಹಿಸಿದೆ’ ಎಂದು ಆರೋಪಿಸಿದ್ದಾರೆ.

‘ಕೇಂದ್ರ ಸರ್ಕಾರ ಜೀವ ವಿಮೆ, ಆರೋಗ್ಯ ವಿಮೆಗಳ ಮೇಲೆ ಶೇ 18 ಜಿಎಸ್‌ಟಿ ಹಾಕಿದೆ. ಮೊದಲ ಬಾರಿಗೆ ಕೃಷಿ ಉತ್ಪನ್ನಗಳಿಗೂ ಜಿಎಸ್‌ಟಿ ಹಾಕಲಾಗಿದೆ. ಏಪ್ರಿಲ್‌ನಿಂದ ಎಟಿಎಂ ಶುಲ್ಕಗಳನ್ನೂ ಏರಿಸುತ್ತಿದೆ. 2018ರಿಂದ 2024ರವರೆಗೆ ಕನಿಷ್ಠ ಠೇವಣಿ ನಿರ್ವಹಿಸದ ದಂಡವಾಗಿ ಬಡ ಜನರಿಂದ ₹ 43,500 ಕೋಟಿ ಲೂಟಿ ಮಾಡಿದೆ. ಅಕ್ಕಿ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯಲ್ಲಿ ಶೇ 70ರಿಂದ 80ರಷ್ಟು ದುಪ್ಪಟಾಗಿವೆ’ ಎಂದಿದ್ದಾರೆ.

‘ಗ್ಯಾಸ್ ಸಿಲಿಂಡರ್ ದರ ಒಲೆ ಹಚ್ಚದೆಯೇ ಜನರನ್ನು ಸುಡುವಂತಿದೆ. ಹೀಗೆ ಕೇಂದ್ರ ಸರ್ಕಾರದ ಕಳಪೆ ಆರ್ಥಿಕ ನೀತಿಯಿಂದಾಗಿ ಹಣದುಬ್ಬರವು ಗಣನೀಯ ಏರಿಕೆಯಾಗಿದೆ, ಇದಕ್ಕೆ ಸರಿ ಹೊಂದಿಸಲು ಅನಿವಾರ್ಯವಾಗಿ ನಮ್ಮ ಸರ್ಕಾರ ಕೆಲವು ಬೆಲೆಗಳನ್ನು ಪರಿಷ್ಕರಿಸಿದೆ’ ಎಂದು ಅವರು ಸಮರ್ಥಿಸಿದ್ದಾರೆ.

ಎನ್‌ಕೆಪಿಎಲ್ ಮೂಲಸೌಲಭ್ಯ: ಕರ್ನಾಟಕ ರೇರಾ ವಿಚಾರಣೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಗೆ (ಎನ್‌ಕೆಪಿಎಲ್) ಮೂಲಸೌಲಭ್ಯಗಳನ್ನು ಒದಗಿಸಿರುವ ಕುರಿತು ಎರಡೂವರೆ ವರ್ಷಗಳ ಬಳಿಕ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ–ರೇರಾ) ವಿಚಾರಣೆ ನಡೆಸಿತು.

ಬಡಾವಣೆಗೆ ಮೂಲಸೌಕರ್ಯ ಒದಗಿಸುವಲ್ಲಿ ವಿಳಂಬವಾಗುತ್ತಿದೆ ಎಂದು ಆರೋಪಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ವಿರುದ್ಧ ರೇರಾಗೆ ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ದೂರು ನೀಡಿದೆ.

ರೇರಾ ಅಧ್ಯಕ್ಷ ರಾಕೇಶ್ ಸಿಂಗ್ ಮಾತನಾಡಿ, ‘ಈಗಾಗಲೇ ಬಿಡಿಎ ಮೂಲಸೌಕರ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಿತ್ತು. ಆದರೆ, ನಿವೇಶನದ ಮಾಲೀಕರು ಸೌಕರ್ಯ ಪಡೆಯಲು ರೇರಾಕ್ಕೆ ಬರುವಂತೆ ಮಾಡಿದೆ’ ಎಂದು ಹೇಳಿದರು.

‘ಶೀಘ್ರವೇ ಮೂಲಸೌಕರ್ಯ ಒದಗಿಸಲಾಗುವುದು’ ಎಂಬ ಬಿಡಿಎ ಎಂಜಿನಿಯರ್‌ಗಳ ಉತ್ತರಕ್ಕೆ ಅಸಮಾಧಾನಗೊಂಡ ಅಧ್ಯಕ್ಷರು, ‘ಯೋಜನೆ ಯಾವಾಗ ಪೂರ್ಣಗೊಳ್ಳಲಿದೆ ಎಂಬುದರ ಬಗ್ಗೆ ಸಂಪೂರ್ಣ ವಿವರಗಳೊಂದಿಗೆ ಮುಂದಿನ ಸಭೆಗೆ ಹಾಜರಾಗಬೇಕು’ ಎಂದು ಹೇಳಿದರು.

ಏಪ್ರಿಲ್ 9ಕ್ಕೆ ವಿಚಾರಣೆ ಮುಂದೂಡಲಾಯಿತು.

ಬಿಡಿಎ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿ, ಕಾರ್ಯನಿರ್ವಾಹಕ ಎಂಜಿನಿಯರ್, ಸಹಾಯಕ ಎಂಜಿನಿಯರ್‌ಗಳು ಹಾಜರಿದ್ದರು.

27ರಂದು ಭೈರವಿ ರಾಗದಲ್ಲಿ ಗಾಯನ ಸ್ಪರ್ಧೆ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನವು ನಾದಯೋಗಿ ಶ್ರೀ ಭೈರವಿ ಕೆಂಪೇಗೌಡ ದತ್ತಿ ಆಶ್ರಯದಲ್ಲಿ ಭೈರವಿ ರಾಗದಲ್ಲಿ (ಉತ್ತರಾದಿ ಅಥವಾ ದಕ್ಷಿಣಾದಿ) ಗಾಯನ ಸ್ಪರ್ಧೆಯನ್ನು ಆಯೋಜಿಸಿದೆ.

ಇದೇ 27ರಂದು ನಡೆಯಲಿರುವ ಈ ಸ್ಪರ್ಧೆಯಲ್ಲಿ 15ರಿಂದ 20 ವರ್ಷ ವಯಸ್ಸಿನವರು ಪಾಲ್ಗೊಳ್ಳಬಹುದು. ಸ್ಪರ್ಧೆಗೆ ಹೆಸರು ನೋಂದಾಯಿಸಲು ಏ.22 ಕೊನೆಯ ದಿನ.

ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ ₹4 ಸಾವಿರ, ದ್ವಿತೀಯ ಬಹುಮಾನ ₹3 ಸಾವಿರ ಮತ್ತು ತೃತೀಯ ಬಹುಮಾನ ₹2 ಸಾವಿರ ನಗದಿನೊಂದಿಗೆ ಪ್ರಶಸ್ತಿಪತ್ರವನ್ನು ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಪಾಲ್ಗೊಂಡ ಎಲ್ಲರಿಗೂ ಪ್ರಮಾಣಪತ್ರಗಳನ್ನು ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕೆ.ಮೋಹನ್‌ದೇವ್ ಆಳ್ವ ಮತ್ತು ಎಂ.ಕೆ.ಶೈಲಜಾ ಆಳ್ವ ಅವರು ಈ ದತ್ತಿಯನ್ನು ಸ್ಥಾಪಿಸಿದ್ದಾರೆ. ಹೆಚ್ಚಿನ ವಿವರಗಳಿಗೆ 9972812127 ಸಂಪರ್ಕಿಸಬಹುದು.

ನಿಯಮ ಮೀರಿ ಪ್ರಭಾರ ಕುಲಪತಿ ನೇಮಕ

ಮಹಾರಾಣಿ ಕ್ಲಸ್ಟರ್ ವಿವಿ: ನಿರ್ದೇಶಕರ ಸೇವಾ ಹಿರಿತನ ಕಡೆಗಣನೆ; ರಚನೆಯಾಗದ ಶೋಧನಾ ಸಮಿತಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯ ಸರ್ಕಾರ ಹಾಗೂ ವಿಶ್ವವಿದ್ಯಾಲಯ ಕಳುಹಿಸಿದ ಸೇವಾಹಿರಿತನದ ಪಟ್ಟಿ ತಿರಸ್ಕರಿಸಿ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪ್ರಭಾರ ಕುಲಪತಿ ನೇಮಕ ಮಾಡಿದ್ದಾರೆ.

ವಿಶ್ವವಿದ್ಯಾಲಯದ ಪ್ರಥಮ ಕುಲಪತಿ ಎಲ್. ಗೋಮತಿದೇವಿ ಅವರ ಅವಧಿ ನವೆಂಬರ್ 2024ಕ್ಕೆ ಮುಕ್ತಾಯವಾಗಿತ್ತು. ನಂತರ ಗೃಹ ವಿಜ್ಞಾನ ವಿಭಾಗದ (ಸ್ಕೂಲ್) ನಿರ್ದೇಶಕರಾಗಿದ್ದ ಸಿ. ಉಷಾದೇವಿ ಅವರನ್ನು ಪ್ರಭಾರ ಕುಲಪತಿಯಾಗಿ ನೇಮಕ ಮಾಡಲಾಗಿತ್ತು. ಉಷಾದೇವಿ ಅವರ ಅವಧಿ ಈ ವರ್ಷದ ಮಾರ್ಚ್‌ಗೆ ಮುಗಿದಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2020ರ ನಿಯಮದಂತೆ ವಿವಿಧ ವಿಭಾಗಗಳ ನಿರ್ದೇಶಕರ (ಡೀನ್) ಸೇವಾ ಹಿರಿತದ ಆಧಾರದಲ್ಲಿ ಪ್ರಭಾರ ಕುಲಪತಿ ನೇಮಕ ಮಾಡುವಂತೆ ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ವಿಶ್ವವಿದ್ಯಾಲಯದ ಕುಲಸಚಿವರು ಕಳೆದ ಫೆಬ್ರುವರಿಯಲ್ಲೇ ರಾಜ್ಯಪಾಲರಿಗೆ ಪತ್ರ ಬರೆದಿದ್ದರು.

ಪತ್ರದ ಜತೆಗೆ ವಿಶ್ವವಿದ್ಯಾಲಯದ ಆರು ವಿಭಾಗಗಳ ನಿರ್ದೇಶಕರ ಸೇವಾ ವಿವರದ ಪಟ್ಟಿ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಸಿದ್ಧಪಡಿಸಿದ್ದ ಪಟ್ಟಿಯನ್ನು ಪತ್ರದೊಂದಿಗೆ ಲಗತ್ತಿಸಿದ್ದರು.

ಆ ಪ್ರಕಾರ ನಿರ್ದೇಶಕರ ಸೇವಾ ಹಿರಿತನದ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ಮಾನವಿಕ ಮತ್ತು ಮುಕ್ತ ಕಲೆಗಳ ವಿಭಾಗದ ನಿರ್ದೇಶಕ ಟಿ.ಎಂ. ಮಂಜುನಾಥ ಅವರನ್ನು ಪ್ರಭಾರ ಕುಲಪತಿ ಸ್ಥಾನಕ್ಕೆ ನೇಮಕ ಮಾಡಬೇಕಿತ್ತು. ಮಹಿಳೆಯರಿಗೆ ಪ್ರಾತಿನಿಧ್ಯ ಕೊಡುವುದಿದ್ದರೆ ಆರ್.ಕೆ. ವಾಣಿಶ್ರೀ ಅವರಿಗೆ ಆ ಸ್ಥಾನ ಲಭಿಸಬೇಕಿತ್ತು. ಆದರೆ, ವಿಶ್ವವಿದ್ಯಾಲಯ ಹಾಗೂ ಕಾಲೇಜು ಶಿಕ್ಷಣ ಇಲಾಖೆ ಕಳುಹಿಸಿದ ಪಟ್ಟಿಯಲ್ಲಿ ಹೆಸರೇ ಇಲ್ಲದ ಬಿ.ಕೆ. ಮೀರಾ ಅವರನ್ನು ಪ್ರಭಾರ ಕುಲಪತಿಯಾಗಿ ನೇಮಿಸಿ, ಆದೇಶ ಹೊರಡಿಸಲಾಗಿದೆ.

‘ಗೋಮತಿ ದೇವಿ ಅವರ ಅವಧಿ ಮುಗಿದಾಗ ಪ್ರಭಾರ ಕುಲಪತಿ ನೇಮಕದಲ್ಲಿ ವಿಶ್ವವಿದ್ಯಾಲಯಗಳ ಕಾಯ್ದೆ ಅನ್ವಯವೇ ರಾಜ್ಯಪಾಲರು ಕ್ರಮ ಕೈಗೊಂಡಿದ್ದರು. ಅಂದು ಕಳುಹಿಸಿದ್ದ ನಿರ್ದೇಶಕರ ಸೇವಾಹಿರಿತನದ ಪಟ್ಟಿಯಲ್ಲಿ ಮೊದಲ ಹೆಸರಿದ್ದ ಉಷಾದೇವಿ ಅವರು ಪ್ರಭಾರ ವಹಿಸಿಕೊಂಡಿದ್ದರು. ಈಗ ಆ ಪಟ್ಟಿಯನ್ನೇ ಕೈಬಿಟ್ಟು, ನಿರ್ದೇಶಕರಲ್ಲದವರನ್ನು ಪ್ರಭಾರ ಕುಲಪತಿಗಳಾಗಿ ನೇಮಿಸಲಾಗಿದೆ. ನೃಪತುಂಗ ವಿಶ್ವವಿದ್ಯಾಲಯಕ್ಕೆ ಪ್ರಭಾರ ಕುಲಪತಿ ನೇಮಕ ಮಾಡುವಾಗ ನಿಯಮ ಅನುಸರಿಸಲಾಗಿದೆ. ಮಹಾರಾಣಿ ಕ್ಲಸ್ಟರ್‌ನಲ್ಲಿ ಏಕೆ ಪಾಲಿಸಿಲ್ಲ’ ಎನ್ನುತ್ತಾರೆ ವಿಶ್ವವಿದ್ಯಾಲಯದ ಹಿರಿಯ ನಿರ್ದೇಶಕರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ

ಸರ್ಕಾರ ಕಳುಹಿಸಿದ್ದ ನಿರ್ದೇಶಕರ ಪಟ್ಟಿ

- ಸಿ. ಉಷಾದೇವಿ
- ಟಿ.ಎಂ. ಮಂಜುನಾಥ್
- ಗೋವಿಂದಪ್ಪ
- ಆರ್.ಕೆ. ವಾಣಿಶ್ರೀ
- ಕೆ.ವೈ. ನಾರಾಯಣಸ್ವಾಮಿ
- ಎಸ್.ಬಿ. ಅಶೋಕ

ಕುಲಪತಿ ನೇಮಕ ಪ್ರಕ್ರಿಯೆ ವಿಳಂಬ

ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನದಡಿ ಸಂಶೋಧನಾ ಚಟುವಟಿಕೆಗಳಿಗಾಗಿ 2019ರಲ್ಲಿ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ಸ್ಥಾಪಿಸಲಾಗಿತ್ತು.

ಅಗತ್ಯ ಮೂಲಸೌಕರ್ಯ, ಶ್ರೇಷ್ಠ ಅಧ್ಯಾಪಕ ವೃಂದ ಸೇರಿದಂತೆ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿಯಿಂದ (ನ್ಯಾಕ್) ಉನ್ನತ ಗ್ರೇಡ್ ಪಡೆದ ಹಾಗೂ ಮಹಿಳಾ ವಿದ್ಯಾರ್ಥಿಗಳನ್ನೇ ಒಳಗೊಂಡಿದ್ದ ದೇಶದ ಎರಡು ಕಾಲೇಜುಗಳಿಗೆ ಅಂದು ಕ್ಲಸ್ಟರ್ ವಿಶ್ವವಿದ್ಯಾಲಯದ ಸ್ಥಾನ ಸಿಕ್ಕಿತ್ತು. ರಾಜ್ಯ ಸರ್ಕಾರ 2018ರಲ್ಲಿ ಕಾಯ್ದೆ ರೂಪಿಸಿ, 2019ರಲ್ಲಿ ಅಸ್ತಿತ್ವಕ್ಕೆ ತಂದಿತ್ತು. ಮೊದಲ ಕುಲಪತಿಯ ಅವಧಿ ಕಳೆದ ನವೆಂಬರ್‌ಗೆ ಮುಕ್ತಾಯವಾಗಿದ್ದರೂ, ನಾಲ್ಕು ತಿಂಗಳಾದರೂ ನೂತನ ಕುಲಪತಿಗಳ ನೇಮಕ ಪ್ರಕ್ರಿಯೆ ಆರಂಭವಾಗಿಲ್ಲ. ಶೋಧನಾ ಸಮಿತಿ ರಚಿಸಿಲ್ಲ.

ದೂರಿನ ಪರಿಶೀಲನೆ ನಡೆಸಲು ಇಲಾಖೆಯ ಕಾರ್ಯದರ್ಶಿಗೆ ಸಚಿವ ರಾಮಲಿಂಗಾರೆಡ್ಡಿ ಸೂಚನೆ

‘ಸಾರಿಗೆ ಇಲಾಖೆ: ಅಕ್ರಮವಾಗಿದ್ದರೆ ಕ್ರಮ ತೆಗೆದುಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೋಟಾರು ವಾಹನ ನಿರೀಕ್ಷಕರ ಹುದ್ದೆಗೆ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಬಗ್ಗೆ ಪರಿಶೀಲನೆ ನಡೆಸಿ. ಲೋಪಗಳಾಗಿದ್ದರೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸಾರಿಗೆ ಇಲಾಖೆಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

‘ಮೋಟಾರು ವಾಹನ ನಿರೀಕ್ಷಕರ ಹುದ್ದೆಗೆ ನೇಮಕಾತಿಯಲ್ಲಿ ಅಕ್ರಮ ನಡೆದಿದೆ. ಇದು ತಾಂತ್ರಿಕ ಹುದ್ದೆಯಾಗಿದ್ದು, ಇಲಾಖೆಯ ಆಡಳಿತಾತ್ಮಕ ಹುದ್ದೆಗಳಲ್ಲಿ ಇರುವವರು ನಕಲಿ ಮತ್ತು ಅಕ್ರಮ ಪ್ರಮಾಣಪತ್ರಗಳ ಮೂಲಕ ಬಡ್ತಿ ಪಡೆದಿದ್ದಾರೆ. ಈ ಬಗ್ಗೆ ತನಿಖೆಯಾಗಬೇಕು’ ಎಂದು ಡಿಪ್ಲೊಮಾ/ಬಿ.ಇ ಆಟೊಮೊಬೈಲ್ ನಿರುದ್ಯೋಗಿ ಪದವೀಧರರ ಒಕ್ಕೂಟವು ಈಚೆಗೆ ರಾಜ್ಯಪಾಲರಿಗೆ ದೂರು ನೀಡಿತ್ತು.

ರಾಮಲಿಂಗಾರೆಡ್ಡಿ

ಅದರ ಬೆನ್ನಲ್ಲೇ ಸಚಿವ ರಾಮಲಿಂಗಾರೆಡ್ಡಿ, ‘ನೇಮಕಾತಿ ಸಂದರ್ಭದಲ್ಲಿ ಶೇ 95ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಮತ್ತು ಶೇ 5ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶವಿದೆ. ಮೋಟಾರು ವಾಹನ ನಿರೀಕ್ಷಕರ ಹುದ್ದೆಗೆ ನೇಮಕಾತಿ ಸಂದರ್ಭದಲ್ಲಿ ಈ ನಿಯಮ ಪಾಲಿಸಲಾಗಿದೆಯೇ ಮತ್ತು ಬಡ್ತಿ ಮೂಲಕ ತುಂಬಲಾದ ಹುದ್ದೆಗಳ ಪ್ರಮಾಣ ಶೇ 5ಕ್ಕಿಂತ ಹೆಚ್ಚು ಇದೆಯೇ ಎಂಬುದನ್ನು ಪರಿಶೀಲಿಸಿ’ ಎಂದು ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

‘ನಕಲಿ ಅಂಕಪಟ್ಟಿ ಮತ್ತು ಪ್ರಮಾಣಪತ್ರ ಸಲ್ಲಿಸಿ ಬಡ್ತಿ ಪಡೆದಿದ್ದಾರೆ ಎಂಬ ಆರೋಪದ ಬಗ್ಗೆಯೂ ತನಿಖೆ ನಡೆಸಬೇಕು. ಬಡ್ತಿ ಪಡೆದ ಸಿಬ್ಬಂದಿಯ ವಿದ್ಯಾರ್ಹತೆಯ ಪ್ರಮಾಣಪತ್ರಗಳನ್ನು ಶಿಕ್ಷಣ ಇಲಾಖೆ ಮತ್ತು ಸಂಬಂಧಿತ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಕಳುಹಿಸಿ, ಅವುಗಳ ನೈಜತೆಯನ್ನು ದೃಢಪಡಿಸಿಕೊಳ್ಳಬೇಕು’ ಎಂದಿದ್ದಾರೆ.

‘ಬಡ್ತಿ ನೀಡಿದಂತಹ ಪ್ರಕರಣಗಳಲ್ಲಿ ಲೋಪದೋಷಗಳು ಪತ್ತೆಯಾಗಿದ್ದರೆ, ಅದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು. ಈ ಸಂಬಂಧ 15 ದಿನಗಳ ಒಳಗೆ ವರದಿ ಸಲ್ಲಿಸಬೇಕು’ ಎಂದು ಸೂಚಿಸಿದ್ದಾರೆ.

‘ಅಕ್ರಮವಾಗಿಲ್ಲ’

‘ಮೋಟಾರು ವಾಹನ ನಿರೀಕ್ಷಕರ ಹುದ್ದೆಗೆ ಇಲಾಖೆಯ ಸಿಬ್ಬಂದಿಯನ್ನು ಬಡ್ತಿ ಮೂಲಕ ತುಂಬಿರುವುದರಲ್ಲಿ ಯಾವುದೇ ಅಕ್ರಮವಾಗಿಲ್ಲ’ ಎಂದು ಸಾರಿಗೆ ಇಲಾಖೆ ಆಯುಕ್ತ ಯೋಗೀಶ್ ಎ.ಎಂ. ಸ್ಪಷ್ಟನೆ ನೀಡಿದ್ದಾರೆ.

‘ನೇಮಕಾತಿಗೆ ಲಭ್ಯವಿರುವ ಒಟ್ಟು ಹುದ್ದೆಗಳಲ್ಲಿ ಶೇ 5ರಷ್ಟನ್ನು ಬಡ್ತಿ ಮೂಲಕ ತುಂಬಬಹುದಾಗಿದೆ. ಮೋಟಾರು ವಾಹನ ನಿರೀಕ್ಷಕರ ವೃಂದದಲ್ಲಿ 285 ಹುದ್ದೆಗಳು ಖಾಲಿ ಇದ್ದವು. ಇವುಗಳಲ್ಲಿ 9 ಹುದ್ದೆಗಳಿಗೆ ಮಾತ್ರ ಇಲಾಖೆಯ ಅರ್ಹ ಸಿಬ್ಬಂದಿಗೆ ಬಡ್ತಿ ನೀಡಿ ತುಂಬಲಾಗಿದೆ. ಈ ಸಿಬ್ಬಂದಿ ಪ್ರಮಾಣಪತ್ರಗಳ ನೈಜತೆಯನ್ನು ಸಂಬಂಧಿತ ತಾಂತ್ರಿಕ ಮಂಡಳಿ ಮತ್ತು ವಿಶ್ವವಿದ್ಯಾಲಯಗಳಿಂದ ದೃಢಪಡಿಸಿಕೊಂಡ ನಂತರವೇ ಅವರನ್ನು ಆಯ್ಕೆ ಮಾಡಲಾಗಿದೆ’ ಎಂದಿದ್ದಾರೆ.

‘ವಿದ್ಯಾರ್ಹತೆಯ ಪ್ರಮಾಣಪತ್ರ ಪಡೆಯಲು ಖಾಸಗಿ ಆಟೊಮೊಬೈಲ್ ಕಂಪನಿಗಳಲ್ಲಿ, ಗ್ಯಾರೇಜ್‌ಗಳಲ್ಲಿ ಹಾಗೂ ಸರ್ವಿಸ್ ಸೆಂಟರ್‌ಗಳಲ್ಲಿ ಒಂದು ವರ್ಷ ಕೆಲಸ ಮಾಡಿರಬೇಕು ಎಂಬುದು ಸತ್ಯಕ್ಕೆ ದೂರವಾದುದು. ಅಂತಹ ನಿಯಮ ಇಲ್ಲ’ ಎಂದಿದ್ದಾರೆ.

ಬೆಲೆ ಏರಿಕೆ: ರಾಜ್ಯದಾದ್ಯಂತ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆರಿಗೆ ಹಾಗೂ ಬೆಲೆ ಏರಿಸಿರುವುದನ್ನು ಖಂಡಿಸಿ ಆಮ್ ಆದ್ಮಿ ಪಾರ್ಟಿಯಿಂದ ರಾಜ್ಯದಾದ್ಯಂತ ಇದೇ 5ರಿಂದ ಬೃಹತ್ ಅಭಿಯಾನ ಕೈಗೊಳ್ಳಲಾಗುತ್ತಿದೆ ಎಂದು ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ಸೀತಾರಾಂ ಗುಂಡಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಾಲು, ವಿದ್ಯುತ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಸಿದೆ. ಮುದ್ರಾಂಕ ಶುಲ್ಕ, ವಾಹನಗಳ ನೋಂದಣಿ ಶುಲ್ಕವನ್ನು ಹೆಚ್ಚಿಸಿದೆ. ಜನಸಾಮಾನ್ಯರು ಜೀವನ ನಡೆಸುವುದೇ ಕಷ್ಟವಾಗಿದೆ. ಇದರ ವಿರುದ್ಧ ಪಕ್ಷ ಜನ ಜಾಗೃತಿ ಮೂಡಿಸಲಿದೆ’ ಎಂದರು.

‘ಬೆಂಗಳೂರಿನಿಂದ ಅಭಿಯಾನ ಆರಂಭವಾಗುತ್ತದೆ. ಪಕ್ಷದ ಕಾರ್ಯಕರ್ತರು ಮನೆ ಮನೆಗೆ ತೆರಳಿ ಜನರಲ್ಲಿ ಬೆಲೆ ಏರಿಕೆ ಕುರಿತು ಜಾಗೃತಿ ಮೂಡಿಸಲಿದ್ದಾರೆ’ ಎಂದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹವಾನಿ, ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ, ಬೆಂಗಳೂರು ನಗರ ಅಧ್ಯಕ್ಷ ಸತೀಶ್ ಕುಮಾರ್, ಹರಿಹರನ್, ಶಶಿಧರ್ ಆರಾಧ್ಯ, ಅನಿಲ್ ನಾಚಪ್ಪ, ಅಯೂಬ್ ಖಾನ್ , ಇರ್ಷಾದ್ ಖಾನ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಪೊಲೀಸ್ ಧ್ವಜ ದಿನಾಚರಣೆ: ಮುಖ್ಯ ಅತಿಥಿ: ಸಿದ್ದರಾಮಯ್ಯ, ಅಧ್ಯಕ್ಷತೆ: ಜಿ.ಪರಮೇಶ್ವರ, ಆಯೋಜನೆ: ರಾಜ್ಯ ಪೊಲೀಸ್ ಇಲಾಖೆ, ಸ್ಥಳ: ಕೆ.ಎಸ್.ಆರ್.ಪಿ ಪೆರೇಡ್ ಮೈದಾನ, ಕೋರಮಂಗಲ, ಬೆಳಿಗ್ಗೆ 8

ಸಿದ್ದರಾಮಯ್ಯ

ದೇವರ ದಾಸಿಮಯ್ಯ ಜಯಂತಿ: ಅಧ್ಯಕ್ಷತೆ: ದಯಾನಂದಪುರಿ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ದೇವಾಂಗ ಸಂಘ, ಸಂಪಂಗಿರಾಮನಗರ, ಬೆಳಿಗ್ಗೆ 9.30

ಬ್ರಹ್ಮ ರಥೋತ್ಸವ ಪ್ರಯುಕ್ತ ಗರುಡೋತ್ಸವ, ಅಷ್ಟಾವಧಾನ, ಭಜನಾ ಮಂಡಳಿಗಳ ಭಗವನ್ನಾಮ ಕೀರ್ತನೆ: ಆಯೋಜನೆ ಹಾಗೂ ಸ್ಥಳ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಕಾಕೋಳು ಕ್ಷೇತ್ರ, ಯಲಹಂಕ, ಬೆಳಿಗ್ಗೆ 10

ಹೆಜ್ಜೆಗೆಜ್ಜೆ–ಮಹಿಳಾ ಜಾನಪದ ಉತ್ಸವ: ಉದ್ಘಾಟನೆ: ಶಾಲಿನಿ ರಜನೀಶ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ ಹಾಗೂ ಸ್ಥಳ: ಸರ್ಕಾರಿ ಕಲಾ ಕಲೇಜು, ಬೆಳಿಗ್ಗೆ 10.30

32ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ರುದ್ರಪಟ್ಟಣಂ ಎನ್. ತ್ಯಾಗರಾಜನ್, ವಯೋಲಿನ್: ಎಸ್. ಪಿ.ಅನಂತ ಪದ್ಮನಾಭ, ಮೃದಂಗ: ಸುನಿಲ್ ಸುಬ್ರಹ್ಮಣ್ಯ: ಗಾಯನ: ಶ್ರೀವಾಣಿ ನಾಡಿಗ್, ವಯೋಲಿನ್: ಸಂಜೀವ್ ಭಾರದ್ವಾಜ್, ಮೃದಂಗ: ಎಲ್.ಮೊನ್ನಿ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15

ವಸಂತ ನವರಾತ್ರಿ ಶ್ರೀರಾಮೋತ್ಸವ: ಕಲಾಕ್ಷಿತಿ ತಂಡದಿಂದ ಭರತನಾಟ್ಯ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

25ನೇ ವರ್ಷದ ಪ್ರವಚನ ವಾಹಿನಿ: ವಿಷಯ: ರಾಮಚಂದ್ರ ರಾಮಾನುಜ, ಪ್ರವಚನ: ಗೋಪಾಲ ಅಯ್ಯಂಗಾರ್, ಸ್ಥಳ ಮತ್ತು ಆಯೋಜನೆ: ರಾಗಿಗುಡ್ಡ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, 9ನೇ ಬಡಾವಣೆ, ಜಯನಗರ, ಸಂಜೆ 6.30

ಆದ್ಯ ವಚನಕಾರ ಶ್ರೀ ದೇವರ ದಾಸಿಮಯ್ಯ ಜಯಂತಿ, ಉದ್ಘಾಟನೆ: ಸಿದ್ದರಾಮಯ್ಯ, ನೇತೃತ್ವ: ದಯಾನಂದಪುರಿ ಸ್ವಾಮೀಜಿ, ಉಪಸ್ಥಿತಿ: ನಿರ್ಮಾಲಾ ಸೀತಾರಾಮನ್, ಶೋಭಾ ಕರಂದ್ಲಾಜೆ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅಧ್ಯಕ್ಷತೆ: ಉದಯ ಬಿ. ಗರುಡಾಚಾರ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ: 6

ಶ್ರೀರಾಮನವಮಿ ಆನಂದನರ್ತನ ಉತ್ಸವ: ಪ್ರಕೃತಿ ಗುಮ್ಮ ಭರತನಾಟ್ಯ ಪ್ರದರ್ಶನ, ಆಯೋಜನೆ ಹಾಗೂ ಸ್ಥಳ: ಕಲಾನಿಧಿ ಆರ್ಟ್ಸ್ ಅಕಾಡೆಮಿ, ಸೂರ್ಯವಂಶಿ ಲೇಔಟ್, ಹಾರೋಹಳ್ಳಿ, ಸಂಜೆ 6

ಶ್ರೀರಾಮನವಮಿ–ರಾಮಾಯಣ ಪ್ರವಚನ: ನಾಗೇಂದ್ರಾಚಾರ್, ಆಯೋಜನೆ: ಗುರು ರಾಘವೇಂದ್ರ ಸೇವಾ ಸಮಿತಿ ಟ್ರಸ್ಟ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರ್.ಟಿ.ನಗರ, ಸಂಜೆ 6

ಶಕ್ತಿ ಕರುಮಾರಿಯಮ್ಮನವರ 59ನೇ ಜಾತ್ರಾ ಮಹೋತ್ಸವ, ಆಯೋಜನೆ ಮತ್ತು ಸ್ಥಳ: ಶಕ್ತಿ ಕರುಮಾರಿಯಮ್ಮ ದೇವಸ್ಥಾನ ಸಮಿತಿ, ವಿದ್ಯಾನಗರ ಕ್ರಾಸ್, ಯಲಹಂಕ, ರಾತ್ರಿ 7.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ

ಟೋಲ್ ಹೆಚ್ಚಳ: ಹೆದ್ದಾರಿ ಸವಾರಿ ಮತ್ತೆ ದುಬಾರಿ

ಪ್ರಜಾವಾಣಿ ವಾರ್ತೆ

ರಾಮನಗರ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ–275ರಲ್ಲಿ ಶೇ 5ರಿಂದ ಶೇ 10ರವರೆಗೆ ಟೋಲ್ ಹೆಚ್ಚಳ ಮಾಡಿದೆ. ಪರಿಷ್ಕೃತ ದರ ಮಂಗಳವಾರ ದಿಂದಲೇ (ಏಪ್ರಿಲ್ 1) ಜಾರಿಗೆ ಬಂದಿದೆ.

ಬೆಂಗಳೂರು ನಗರ ಜಿಲ್ಲೆಯ ಕಣಿಮಿಣಿಕೆ ಹಾಗೂ ರಾಮನಗರ ಜಿಲ್ಲೆಯ ಶೇಷಗಿರಿಹಳ್ಳಿ ಟೋಲ್ ಪ್ಲಾಜಾದಿಂದ ನಿಡಘಟ್ಟವರೆಗೆ ಶೇ 9ರಷ್ಟು ಹಾಗೂ ಮಂಡ್ಯ ಜಿಲ್ಲೆಯ ನಿಡಘಟ್ಟದಿಂದ ಶ್ರೀರಂಗಪಟ್ಟಣದ ಗಣಂಗೂರು ಟೋಲ್ ಪ್ಲಾಜಾವರೆಗೆ (ಮೈಸೂರುವರೆಗೆ) ಶೇ 5ರಷ್ಟು ಪರಿಷ್ಕರಿಸಲಾಗಿದೆ.

ಕಾರು, ವ್ಯಾನ್, ಜೀಪು, ಲಘು ವಾಹನ, ಮಿನಿ ಬಸ್, ಟ್ರಕ್, ಬಸ್, 2 ಆ್ಯಕ್ಸಲ್ ವಾಹನ, ಮೂರು ಆ್ಯಕ್ಸಲ್ ವಾಣಿಜ್ಯ ವಾಹನ, ಕಟ್ಟಡ ನಿರ್ಮಾಣ ಭಾರಿ ವಾಹನ (4–6 ಆಕ್ಸಲ್), 7 ಅಥವಾ ಅದಕ್ಕಿಂತ ಹೆಚ್ಚಿನ ಆ್ಯಕ್ಸಲ್ ವಾಹನದ ಟೋಲ್ ಪರಿಷ್ಕರಣೆಯಾಗಿದೆ.

ತಿಂಗಳ 50 ಏಕಮುಖ ಸಂಚಾರ ಪಾಸ್ ದರವೂ ಏರಿಕೆಯಾಗಿದೆ. ಕಾರು, ವ್ಯಾನ್ ಹಾಗೂ ಜೀಪುಗಳ ಸ್ಥಳೀಯ ಮಾಸಿಕ ಬಸ್ ದರದಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಹಣ ಪಾವತಿಸಿದ ಸಮಯದಿಂದ ಎಲ್ಲಾ ಮಾದರಿಯ ವಾಹನಗಳು 24 ತಾಸಿನೊಳಗೆ ಮರಳಿ ಸಂಚಾರ ಮಾಡಿದರೆ ಶೇ 25ರಷ್ಟು ಹಾಗೂ ಹಣ ಪಾವತಿಸಿದ ಸಮಯದಿಂದ ಒಂದು ತಿಂಗಳಲ್ಲಿ 50 ಸಲ ಪ್ರಯಾಣಿಸಿದಲ್ಲಿ ಶೇ 33ರಷ್ಟು ರಿಯಾಯಿತಿ ಸಿಗಲಿದೆ ಎಂದು ಪ್ರಾಧಿಕಾರ ಪ್ರಕಟಣೆಯಲ್ಲಿ ತಿಳಿಸಿದೆ.

2023ರ ಏಪ್ರಿಲ್ 1ರಿಂದ ಹೆದ್ದಾರಿಯಲ್ಲಿ ಟೋಲ್ ಸಂಗ್ರಹ ಆರಂಭಿಸಿದ್ದ ಪ್ರಾಧಿಕಾರ, ಅದಾದ ಎರಡೇ ತಿಂಗಳಲ್ಲಿ (2023 ಜೂನ್ 1) ಏಕಾಏಕಿಯಾಗಿ ಶೇ 22ರಷ್ಟು ಹೆಚ್ಚಿಸಿತ್ತು. ಈ ಕುರಿತು ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಹೆಚ್ಚಳ ನಿರ್ಧಾರ ಹಿಂದಕ್ಕೆ ಪಡೆದಿತ್ತು. ನಂತರ ಪ್ರತಿ ವರ್ಷ ಏಪ್ರಿಲ್ 1ರಿಂದ ವಾರ್ಷಿಕ ಶೇ 5ರಷ್ಟು ಟೋಲ್ ಹೆಚ್ಚಳ ಮಾಡುವುದಾಗಿ ಹೇಳಿತ್ತು.

ಬೆಂಗಳೂರು ನಗರ ಜಿಲ್ಲೆಯ ಕುಂಬಳಗೋಡಿನಿಂದ ಆರಂಭವಾಗುವ 118 ಕಿ.ಮೀ. ಉದ್ದದ ಹೆದ್ದಾರಿಯು ರಾಮನಗರ ಜಿಲ್ಲೆಯಲ್ಲಿ 55 ಕಿ.ಮೀ., ಮಂಡ್ಯದಲ್ಲಿ 58 ಕಿ.ಮೀ. ಹಾಗೂ ಮೈಸೂರು ಜಿಲ್ಲೆಯಲ್ಲಿ 5 ಕಿ.ಮೀ. ವ್ಯಾಪ್ತಿ ಹೊಂದಿದೆ.

ರಾಮನಗರ ಜಿಲ್ಲೆಯ ಶೇಷಗಿರಿಹಳ್ಳಿಯಲ್ಲಿರುವ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಟೋಲ್ ಸಂಗ್ರಹ ಕೇಂದ್ರ

50 ಏಕಮುಖ ಟ್ರಿಪ್‌ಗಳ ಮಾಸಿಕ ಪಾಸ್ (₹ಗಳಲ್ಲಿ)

ವಾಹನ ಮಾದರಿ	ಹಿಂದಿನ ದರ	ಪರಿಷ್ಕೃತ ದರ	ಏರಿಕೆ
ಕಾರು, ಜೀಪು, ವ್ಯಾನ್	5,715	5,945	230
ಲಘು ವಾಹನ, ಮಿನಿ ಬಸ್	9,230	9,605	375
2 ಆ್ಯಕ್ಸಲ್ ಟ್ರಕ್/ಬಸ್	19,345	20,130	785
3 ಆ್ಯಕ್ಸಲ್ ವಾಣಿಜ್ಯ ವಾಹನ	21,100	21,960	860
ಭಾರಿ ವಾಹನ (4–6 ಆ್ಯಕ್ಸಲ್)	30,335	31,565	1,230
ದೊಡ್ಡ ವಾಹನ (7ಕ್ಕಿಂತ ಹೆಚ್ಚು ಆ್ಯಕ್ಸಲ್)	36,930	38,430	1,500

ಬದಲಾದ ದರ ವಿವರ (₹ಗಳಲ್ಲಿ)

(ಕಣಿಮಿಣಿಕೆ–ಶೇಷಗಿರಿಹಳ್ಳಿ ಟೋಲ್ ಪ್ಲಾಜಾದಿಂದ ನಿಡಘಟ್ಟವರೆಗೆ)

ವಾಹನ	ಸಂಚಾರ	ಹಿಂದಿನ ದರ	ಪರಿಷ್ಕೃತ ದರ	ಏರಿಕೆ
ಕಾರು, ವ್ಯಾನ್, ಜೀಪು	ಏಕಮುಖ ಸಂಚಾರ	170	180	10
ಕಾರು, ವ್ಯಾನ್, ಜೀಪು	ದ್ವಿಮುಖ ಸಂಚಾರ	255	270	15
ಲಘು ವಾಹನ, ಮಿನಿ ಬಸ್	ಏಕಮುಖ ಸಂಚಾರ	275	290	15
ಲಘು ವಾಹನ, ಮಿನಿ ಬಸ್	ದ್ವಿಮುಖ ಸಂಚಾರ	415	430	15
ಟ್ರಕ್, ಬಸ್, 2 ಆ್ಯಕ್ಸಲ್ ವಾಹನ	ಏಕಮುಖ ಸಂಚಾರ	580	605	25
ಟ್ರಕ್, ಬಸ್, 2 ಆ್ಯಕ್ಸಲ್ ವಾಹನ	ದ್ವಿಮುಖ ಸಂಚಾರ	870	905	35
ಮೂರು ಆ್ಯಕ್ಸಲ್ ವಾಣಿಜ್ಯ ವಾಹನ	ಏಕಮುಖ ಸಂಚಾರ	635	660	25
ಮೂರು ಆ್ಯಕ್ಸಲ್ ವಾಣಿಜ್ಯ ವಾಹನ	ದ್ವಿಮುಖ ಸಂಚಾರ	950	990	40
ಕಟ್ಟಡ ನಿರ್ಮಾಣ ಭಾರಿ ವಾಹನ (4–6 ಆ್ಯಕ್ಸಲ್)	ಏಕಮುಖ ಸಂಚಾರ	910	945	35
ಕಟ್ಟಡ ನಿರ್ಮಾಣ ಭಾರಿ ವಾಹನ (4–6 ಆ್ಯಕ್ಸಲ್)	ದ್ವಿಮುಖ ಸಂಚಾರ	1,365	1,420	55
7 ಅಥವಾ ಅದಕ್ಕಿಂತ ಹೆಚ್ಚಿನ ಆ್ಯಕ್ಸಲ್ ವಾಹನ	ಏಕಮುಖ ಸಂಚಾರ	1,110	1,155	45
7 ಅಥವಾ ಅದಕ್ಕಿಂತ ಹೆಚ್ಚಿನ ಆ್ಯಕ್ಸಲ್ ವಾಹನ	ದ್ವಿಮುಖ ಸಂಚಾರ	1,660	1,730	70

ವಿಮಾನ ನಿಲ್ದಾಣ ರಸ್ತೆ ಟೋಲ್ ತುಟ್ಟಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಸಾದಹಳ್ಳಿ ಟೋಲ್ ಮತ್ತು ಹೊಸಕೋಟೆಯಿಂದ ದಾಬಸ್‌ಪೇಟೆವರೆಗೆ ನಿರ್ಮಾಣವಾಗಿರುವ ನೂತನ ಎಸ್‌ಟಿಆರ್‌ಆರ್ ರಾಷ್ಟ್ರೀಯ ಹೆದ್ದಾರಿಯ ಟೋಲ್ ಶುಲ್ಕ ಮಂಗಳವಾರ ಮಧ್ಯರಾತ್ರಿಯಿಂದಲೇ ಏರಿಕೆಯಾಗಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಏಪ್ರಿಲ್ 1ರಿಂದ ಟೋಲ್ ಶುಲ್ಕ ಹೆಚ್ಚಳ ಮಾಡಿದ್ದು, ನಿತ್ಯ ಓಡಾಡುವವರಿಗೆ ಬೆಲೆ ಏರಿಕೆ ಬಿಸಿ ತಟ್ಟಿದೆ. ಶುಲ್ಕ ಏರಿಕೆಯಿಂದಾಗಿ ವಿಮಾನ ನಿಲ್ದಾಣಕ್ಕೆ ಬರುವ ಪ್ರಯಾಣಿಕರ ಟ್ಯಾಕ್ಸಿ ಶುಲ್ಕ ಹೆಚ್ಚಳವಾಗಲಿದ್ದು, ಬಿಎಂಟಿಸಿ ವಾಯುವಜ್ರದ ಟಿಕೆಟ್ ದರ ಹೆಚ್ಚಳವಾಗಲಿದೆ.

ಸಾದಹಳ್ಳಿಯಿಂದ ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ 22.12 ಕಿ.ಮೀ. ರಸ್ತೆಗೆ ಇನ್ನು ಮುಂದೆ ಕಾರು, ಜೀಪು, ವ್ಯಾನ್ ಸೇರಿದಂತೆ ಲಘು ಮೋಟಾರ್ ವಾಹನಗಳು ಏಕಮುಖ ಸಂಚಾರಕ್ಕೆ ₹120 ಹಾಗೂ ಅದೇ ದಿನ ವಾಪಸ್ ಆದರೆ ದ್ವಿಮುಖ ಸಂಚಾರಕ್ಕೆ ₹180 ಪಾವತಿ ಮಾಡಬೇಕಿದೆ. 50 ಏಕಮುಖ ಸಂಚಾರದ ಮಾಸಿಕ ಪಾಸ್‌ಗೆ ₹3,970 ನಿಗದಿ ಮಾಡಲಾಗಿದೆ.

ಲಘು ವಾಣಿಜ್ಯ ವಾಹನ, ಮಿನಿ ಬಸ್ ಏಕಮುಖ ಸಂಚಾರಕ್ಕೆ ₹185 ಹಾಗೂ ಒಂದೇ ದಿನ ವಾಪಸ್ ಆದರೆ ದ್ವಿಮುಖ ಸಂಚಾರಕ್ಕೆ ₹275 ಪಾವತಿ ಶುಲ್ಕ ನಿಗದಿ ಮಾಡಲಾಗಿದೆ. 50 ಏಕ ಮುಖ ಸಂಚಾರದ ಮಾಸಿಕ ಪಾಸ್‌ಗೆ ₹6,100 ನಿಗದಿಪಡಿಸಲಾಗಿದೆ.

ವಾಹನ	ಏಕಮುಖ ಸಂಚಾರ	ದ್ವಿಮುಖ ಸಂಚಾರ	ಮಾಸಿಕ ಪಾಸ್ ಶುಲ್ಕ
ದೇವನಹಳ್ಳಿಯ ಸಾದಹಳ್ಳಿ ಟೋಲ್ ಪರಿಷ್ಕೃತ ಶುಲ್ಕ			
ಲಘು ವಾಹನಗಳು	₹120	₹180	₹3970
ಲಘು ವಾಣಿಜ್ಯ ವಾಹನಗಳು, ಮಿನಿ ಬಸ್	₹185	₹275	₹6100
ಟ್ರಕ್‌ಗಳು ಹಾಗೂ ಬಸ್	₹370	₹550	₹12,265
ನಲ್ಲೂರು ಎಸ್‌ಟಿಆರ್‌ಆರ್ ಟೋಲ್ ಪರಿಷ್ಕೃತ ಶುಲ್ಕ			
ಲಘು ವಾಹನ	₹85	₹125	₹3615
ಹುಲಿಕುಂಟೆ–ದೊಡ್ಡಬಳ್ಳಾಪುರ ಟೋಲ್ ಪರಿಷ್ಕೃತ ಶುಲ್ಕ			
ಲಘು ವಾಹನಗಳು	₹110	₹165	₹3615

18 ಶಾಸಕರ ಅಮಾನತು ಕೈಬಿಡಲು ಆಗ್ರಹ: ಅಶೋಕ– ವಿಜಯೇಂದ್ರ ಮುಸುಕಿನ ಗುದ್ದಾಟ ಬಯಲು

ಅಶೋಕ ಪತ್ರ: ಬಿಜೆಪಿಗೆ ಇಕ್ಕಟ್ಟು

ಪ್ರಜಾವಾಣಿ ವಾರ್ತೆ

ಆರ್‌.ಅಶೋಕ

ಬೆಂಗಳೂರು: ಬಿಜೆಪಿ ರಾಜ್ಯ ಘಟಕ ಬುಧವಾರದಿಂದ ರಾಜ್ಯವ್ಯಾಪಿ ಹಮ್ಮಿಕೊಂಡಿರುವ ಸರಣಿ ಹೋರಾಟಗಳ ಮಧ್ಯೆ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಅವರ ನಡುವಿನ ಮುಸುಕಿನ ಗುದ್ದಾಟ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ವಿಧಾನಸಭೆ ಅಧಿವೇಶನದ ವೇಳೆ ಸಭಾಧ್ಯಕ್ಷರ ಪೀಠದ ಬಳಿ ಗದ್ದಲ ಮಾಡಿದ್ದ ಪಕ್ಷದ 18 ಶಾಸಕರ ಅಮಾನತು ಕ್ರಮವನ್ನು ವಿರೋಧಿಸಿ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಬಿಜೆಪಿಯಿಂದ ಬುಧವಾರ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಈ ಮಧ್ಯೆ, ಅಶೋಕ ಅವರು ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ಪತ್ರ ಬರೆದು, 18 ಶಾಸಕರ ಅಮಾನತು ಕ್ರಮವನ್ನು ಕೈಬಿಡಬೇಕು ಎಂದು ಮನವಿ ಮಾಡಿದ್ದಾರೆ.' ಅಶೋಕ ಅವರ ಈ ಪತ್ರ ಪಕ್ಷದ ತೀರ್ಮಾನಕ್ಕೆ ವ್ಯತಿರಿಕ್ತವಾಗಿದೆ. ಹೋರಾಟದ ಸ್ಫೂರ್ತಿಗೆ ಹಿನ್ನಡೆ ಉಂಟು ಮಾಡಲಿದ್ದು, ಇದರಿಂದ ಪಕ್ಷ ಇಕ್ಕಟ್ಟಿಗೆ ಸಿಲುಕುವಂತಾಗಿದೆ' ಎಂಬ ಚರ್ಚೆ ಪಕ್ಷದ ವಲಯದಲ್ಲಿ ಆರಂಭವಾಗಿದೆ.

ಸಭಾಧ್ಯಕ್ಷರಿಗೆ ಅಶೋಕ ಪತ್ರದ ಸಾರಾಂಶ

'ಮಾರ್ಚ್ 23 ರಂದು ನಡೆದ ಘಟನೆ ಉದ್ದೇಶ ಪೂರ್ವಕವಲ್ಲ. ನಿಮ್ಮ ಪೀಠಕ್ಕೆ ಅಗೌರವ ತರುವ ಉದ್ದೇಶವೂ ಯಾವುದೇ ಶಾಸಕರಿಗೆ ಇರಲಿಲ್ಲ. ಸದನದ ಘನತೆ ಮತ್ತು ಗೌರವವನ್ನು ಉಳಿಸಬೇಕಾಗಿದೆ ಎಂಬ ತತ್ವದಲ್ಲಿ ನಂಬಿಕೆ ಇರಿಸಿ 18 ಶಾಸಕರ ಅಮಾನತು ಆದೇಶ ಹಿಂದಕ್ಕೆ ಪಡೆಯಬೇಕು' ಎಂದು ಆರ್‌.ಅಶೋಕ ಅವರು ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

'ಕಳೆದ ಎರಡು ವರ್ಷಗಳಲ್ಲಿ ತಾವು ಸದನದ ಕಲಾಪ ನಿರ್ವಹಿಸುವುದನ್ನು ನಾವು ಅತ್ಯಂತ ಹತ್ತಿರದಿಂದ ನೋಡಿದ್ದೇವೆ. ಸಂಸದೀಯ ಚರ್ಚೆಯ ಗುಣಮಟ್ಟ, ಭಾಷೆಯ ಬಳಕೆ, ಕಲಾಪಗಳಲ್ಲಿನ ನಿಯಮಗಳ ಪಾಲನೆ ಇತ್ಯಾದಿಗಳೆಲ್ಲವೂ ದಿನದಿಂದ ದಿನಕ್ಕೆ ಕುಸಿಯುತ್ತಿರುವ ಈ ದಿನಗಳಲ್ಲಿ ಯಾರಿಗೇ ಆಗಲಿ ಇದು ಅತ್ಯಂತ ಕಷ್ಟದ ಕೆಲಸ ಎಂಬುದು ಅರ್ಥವಾಗುತ್ತದೆ. ಅದಕ್ಕಾಗಿಯೇ ನಿಮ್ಮ ಬಗ್ಗೆ ನಮಗೆ ಅಪಾರ ಗೌರವವಿದೆ' ಎಂದು ಹೇಳಿದ್ದಾರೆ.

'ಒಂದು ವೇಳೆ ಆ ದಿನ ತಾವು ನಮ್ಮ ಎಲ್ಲ ಶಾಸಕರನ್ನು ತಮ್ಮ ಕೊಠಡಿಗೆ ಕರೆದು ವಿವರಣೆ ಕೇಳಿದ್ದರೆ ನಾವು ಈ ಘಟನೆ ಬಗ್ಗೆ ಸ್ಪಷ್ಟೀಕರಣ ಕೊಡುತ್ತಿದ್ದೆವು. ಅದಕ್ಕೆ ಅವಕಾಶ ಸಿಗಲಿಲ್ಲ. ಅಮಾನತಿನಿಂದಾಗಿ 18 ಶಾಸಕರು ಜನಪ್ರತಿನಿಧಿಯಾಗಿ ಕೆಲಸ ಮಾಡಲು ಹಲವು ನಿರ್ಬಂಧ ವಿಧಿಸಿದಂತಾಗಿದೆ. ಒಬ್ಬ ಜನಪ್ರತಿನಿಧಿಯಾಗಿ ಕೆಲಸ ಮಾಡಲು ಅವರಿಗೆ ಅವಕಾಶ ಕೊಡುವುದಕ್ಕಾಗಿ ಅಮಾನತು ಆದೇಶ ಹಿಂದಕ್ಕೆ ಪಡೆಯಬೇಕು' ಎಂದು ಮನವಿ ಮಾಡಿದ್ದಾರೆ.



ಬಿ.ವೈ. ವಿಜಯೇಂದ್ರ

ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಮುಂದೆ ಬುಧವಾರ ಬೆಳಿಗ್ಗೆ ಎಲ್ಲ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ಪದಾಧಿಕಾರಿಗಳು ಸೇರಿ ಪ್ರತಿಭಟನೆ ನಡೆಸುವುದಾಗಿ ಬಿ.ವೈ. ವಿಜಯೇಂದ್ರ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದರು. ಪ್ರತಿಭಟನೆ ಬಗ್ಗೆ ಯಾವುದೇ ಹೇಳಿಕೆ ನೀಡದೇ ಇರುವ ಅಶೋಕ ಅವರು ಮಂಗಳವಾರ ಸಂಜೆ ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ಪತ್ರ ಬರೆದಿದ್ದಾರೆ. ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರೂ ಇದಕ್ಕೂ ಮೊದಲು ಸಭಾಧ್ಯಕ್ಷರಿಗೆ ಬರೆದ ಪತ್ರದಲ್ಲಿ ಶಾಸಕರ ಅಮಾನತು ಕೈಬಿಡುವಂತೆ ಕೋರಿದ್ದರು.

ವಿರೋಧ ಪಕ್ಷದ ನಾಯಕರು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ವಿಜಯೇಂದ್ರ ಅವರು ಕೇಂದ್ರ ನಾಯಕರಿಗೆ ದೂರು ನೀಡಿದ್ದಾರೆ ಎಂಬ ವಿಚಾರವಾಗಿ ಅಶೋಕ ಅವರು ಈ ಹಿಂದೆ ಅತೃಪ್ತಿ ವ್ಯಕ್ತಪಡಿಸಿದ್ದರು. ಆ ಬಳಿಕ ವಿಜಯೇಂದ್ರ ಮತ್ತು ಅಶೋಕ ಅವರ ಮಧ್ಯೆ ಅಸಮಾಧಾನದ ಬಿರುಕು ಹೆಚ್ಚುತ್ತಲೇ ಇದೆ. ವಿಧಾನಸಭೆ ಕಲಾಪದ ವೇಳೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ವಿಚಾರದಲ್ಲಿ ಶಾಸಕರ ನಿಲುವಿಗೆ ಅಶೋಕ ಸ್ಪಂದಿಸುವುದಿಲ್ಲ. ಧರಣಿಗೆ ಹೊರಟರೆ ಅದಕ್ಕೆ ತಡೆ ಹಾಕುತ್ತಾರೆ ಎಂಬ ಅಸಮಾಧಾನವನ್ನೂ ಶಾಸಕರು ಹಲವು ಬಾರಿ ವ್ಯಕ್ತಪಡಿಸಿದ್ದಾರೆ.

'ಪಕ್ಷದ ವತಿಯಿಂದ ಹೋರಾಟ ಹಮ್ಮಿಕೊಳ್ಳಲಾಗಿದೆ. ಆದರೆ, ಅಶೋಕ ಅವರು ಪಕ್ಷದ ತೀರ್ಮಾನಕ್ಕೆ ಭಿನ್ನವಾಗಿ ನಡೆದುಕೊಂಡಿದ್ದಾರೆ. ಅವರು ಸಭಾಧ್ಯಕ್ಷರನ್ನು ಓಲೈಸುವಂತೆ ಪತ್ರ ಬರೆದಿದ್ದಾರೆ. ಒಂದು ವೇಳೆ ಸಭಾಧ್ಯಕ್ಷರು ಇದಕ್ಕೆ ಸ್ಪಂದಿಸಿ ತಮ್ಮ ಕ್ರಮವನ್ನು ಹಿಂದಕ್ಕೆ ಪಡೆದರೆ ನಿಶ್ಚಿತವಾಗಿ ಪಕ್ಷದ ಹೋರಾಟಕ್ಕೆ ಹಿನ್ನಡೆ ಆಗುತ್ತದೆ' ಎಂದು ಬಿಜೆಪಿ ಮುಖಂಡರೊಬ್ಬರು ಹೇಳಿದರು.

ವಿಧಾನಸಭೆ ಕಲಾಪದ ಸಂದರ್ಭದಲ್ಲೂ ಮಧುಬಲೆ ವಿಷಯದಲ್ಲಿ ಅಶೋಕ ಅವರು, ಸಚಿವರ ರಾಜೀನಾಮೆ ಮತ್ತು ತನಿಖೆಗೆ ಒತ್ತಾಯಿಸಲಿಲ್ಲ ಎಂದು ವಿ.ಸುನಿಲ್ ಕುಮಾರ್, ಎಸ್‌.ಆರ್. ವಿಶ್ವನಾಥ್ ಮತ್ತು ಇತರ ಶಾಸಕರು ಹರಿಹಾಯ್ದಿದ್ದರು.

'9 ಸುಳ್ಳು ಹೇಳಿದ ಇಂಧನ ಸಚಿವರು'

ಸ್ಮಾರ್ಟ್ ಮೀಟರ್ ಟೆಂಡರ್: ಅಶ್ವತ್ಥನಾರಾಯಣ ಆರೋಪ

ಪ್ರಜಾವಾಣಿ ವಾರ್ತೆ

ಸಿ.ಎನ್. ಅಶ್ವತ್ಥನಾರಾಯಣ

ಬೆಂಗಳೂರು: 'ಸ್ಮಾರ್ಟ್ ಮೀಟರ್ ಟೆಂಡರ್ ವಿಚಾರದಲ್ಲಿ ಇಂಧನ ಸಚಿವರು ಮತ್ತು ಅಧಿಕಾರಿಗಳು ಒಂಬತ್ತು ಸುಳ್ಳುಗಳನ್ನು ಹೇಳಿ ರಾಜ್ಯದ ಜನರ ದಾರಿ ತಪ್ಪಿಸಿದ್ದಾರೆ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ದೂರಿದರು.

'ಸಚಿವರು ಮತ್ತು ಅಧಿಕಾರಿಗಳು ನಾವು ಎತ್ತಿರುವ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ನೀಡುವಲ್ಲಿ ವಿಫಲರಾಗಿದ್ದಾರೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಆಪಾದಿಸಿದರು.

'ಪ್ರಿ-ಬಿಡ್‌ನಲ್ಲಿ ಯಾರೂ ಭಾಗವಹಿಸಿರಲಿಲ್ಲ ಎಂದೂ ಸಚಿವರು ಹೇಳಿದ್ದಾರೆ. ನಮಗಿರುವ ಮಾಹಿತಿಯ ಪ್ರಕಾರ 10 ಜನರು ಪ್ರಿ-ಬಿಡ್‌ನಲ್ಲಿ ಭಾಗವಹಿಸಿದ್ದರು ಮತ್ತು 117 ಜನ ಮಾಹಿತಿ ಕೇಳಿದ್ದರು. ಈ ಅಂಶವನ್ನು ಮರೆಮಾಚಿದ್ದಾರೆ. ಕೇಂದ್ರದ ಯಾವುದೇ ನಿಯಮಾವಳಿ ಪಾಲಿಸಿಲ್ಲ' ಎಂದು ಅವರು ಹೇಳಿದರು.

'ಕೇಂದ್ರದ ನಿಯಮಾವಳಿ ಪ್ರಕಾರ ಐಎಸ್ 16444 ಸ್ಟಾಂಡರ್ಡ್ ಇರುವ ಹತ್ತಕ್ಕೂ ಹೆಚ್ಚು ಜನ ರಾಜ್ಯದಲ್ಲಿ ಇದ್ದಾರೆ. ಅವರನ್ನು ಇಂಧನ ಇಲಾಖೆ ಪರಿಗಣಿಸಬೇಕಿತ್ತು. 1 ಲಕ್ಷ ಸ್ಮಾರ್ಟ್ ಮೀಟರ್ ಉತ್ಪಾದಿಸಿ ವಿತರಿಸಿದ ಅನುಭವ ಬೇಕಿತ್ತು. ಟೆಂಡರ್ ₹200 ಕೋಟಿಗಿಂತಲೂ ಹೆಚ್ಚು ಮೊತ್ತದ್ದಾದರೆ ಗ್ಲೋಬಲ್ ಟೆಂಡರ್ ಕರೆಯಬೇಕಿತ್ತು. ಪ್ರಿ-ಬಿಡ್ ವೇಳೆ ಈ ಅಂಶಗಳನ್ನು ಹೇಳಿದ್ದರೂ ಅದನ್ನು ಪರಿಗಣಿಸಿಲ್ಲ. ಸ್ಮಾರ್ಟ್ ಮೀಟರ್‌ಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಚಿಲ್ಲರೆ ಮಾರಾಟ ಮಳಿಗೆಯಲ್ಲಿ (ರಿಟೇಲ್ ಔಟ್‌ಲೆಟ್) 5 ವರ್ಷ ಅನುಭವ ಇರಬೇಕೆಂಬ ನಿಯಮವನ್ನೂ ಪರಿಗಣಿಸಿಲ್ಲ' ಎಂದು ಅಶ್ವತ್ಥನಾರಾಯಣ ದೂರಿದರು.

'ಮೀಟರ್ ಡೇಟಾ ಮ್ಯಾನೇಜ್‌ಮೆಂಟ್ ಸಲ್ಯೂಷನ್ ಅನ್ನು 'ಜಾಗತಿಕ'ವಾಗಿ ಪರಿಗಣಿಸಿಲ್ಲ. ಕಪ್ಪುಪಟ್ಟಿ ಸೇರಿದವರು ಅಥವಾ ಡಿಬಾರ್ ಆದವರನ್ನು ಪರಿಗಣಿಸಬಾರದು ಎಂಬ ನಿಯಮವೂ ಇದೆ. ಅದನ್ನೂ ಉಲ್ಲಂಘಿಸಿದ್ದಾರೆ. ಇವೆಲ್ಲವನ್ನೂ ಪರಿಗಣಿಸಿದಾಗ ಕೇಂದ್ರದ ನಿಯಮಾವಳಿಯಂತೆ ಟೆಂಡರ್ ಕರೆದಿದ್ದೇವೆ ಎಂಬುದು ಅಪ್ಪಟ ಸುಳ್ಳು' ಎಂದು ಹೇಳಿದರು.

'ಎಲ್ಲ ಗ್ರಾಹಕರಿಗೆ ಫೀಡರ್, ಟ್ರಾನ್ಸ್‌ಫಾರ್ಮರ್‌ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಿದ ಬಳಿಕವೇ ಹೊಸ ಗ್ರಾಹಕರಿಗೆ ಕಡ್ಡಾಯ ಮಾಡಬಹುದೆಂದು ಕೇಂದ್ರ ವಿದ್ಯುತ್ ಪ್ರಾಧಿಕಾರವು (ಸಿಇಎ) ತಿಳಿಸಿದೆ. ಈ ನಿಯಮವನ್ನೂ ಉಲ್ಲಂಘಿಸಿದ್ದಾರೆ' ಎಂದರು.

ಶಾಸಕ ಎಸ್‌.ಆರ್.ವಿಶ್ವನಾಥ್ ಮಾತನಾಡಿ, 'ನಮ್ಮ ಆರೋಪ ಹಿಟ್ ಅಂಡ್ ರನ್ ಅಲ್ಲ, ಮುಂದಿನ ಕ್ರಮಗಳ ಕುರಿತು ಈಗಾಗಲೇ ಚರ್ಚಿಸಿದ್ದೇವೆ' ಎಂದರು.

ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕೆಎಸ್‌ಐಸಿ ಕಾರ್ಖಾನೆಯಲ್ಲಿ ತಾತ್ಕಾಲಿಕ ನೌಕರರನ್ನು ಕೆಲಸದಿಂದ ಕೈಬಿಟ್ಟಿರುವುದನ್ನು ಖಂಡಿಸಿ ಹೊರಗುತ್ತಿಗೆ ಮತ್ತು ಇತರ ನೌಕರರ ಸಂಘದವರು ಮಂಗಳವಾರ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ಚಿತ್ರ

ರೇಷ್ಮೆ ಕಾರ್ಖಾನೆ ಕಾರ್ಮಿಕರ ಧರಣಿ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ (ಕೆಎಸ್‌ಐಸಿ) ಕಾರ್ಖಾನೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 700ಕ್ಕೂ ಹೆಚ್ಚಿನ ತಾತ್ಕಾಲಿಕ ನೌಕರರನ್ನು ಕೆಲಸದಿಂದ ಕೈಬಿಟ್ಟಿರುವುದನ್ನು ವಿರೋಧಿಸಿ ಪ್ರತಿಭಟನೆ ನಡೆಯಿತು.

ನಿಗಮದ ಈ ಕ್ರಮ ಖಂಡಿಸಿ ಹೊರಗುತ್ತಿಗೆ ಮತ್ತು ಇತರ ನೌಕರರ ಸಂಘದ ಸದಸ್ಯರು ಇಲ್ಲಿನ ಮಾನಂದವಾಡಿ ರಸ್ತೆಯಲ್ಲಿರುವ ಕಾರ್ಖಾನೆಯ ಎದುರು ಮಂಗಳವಾರ ಪ್ರತಿಭಟಿಸಿದರು.

ಶನಿವಾರ ರಾತ್ರಿಯೂ ಕಾರ್ಮಿಕರು ದಿಢೀರ್ ಪ್ರತಿಭಟಿಸಿದ್ದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಂದು ಸಮಸ್ಯೆ ಆಲಿಸಿದ್ದರು. 'ನೌಕರರಿಗೆ ತೊಂದರೆ ಆಗದಂತೆ ಕ್ರಮ ವಹಿಸಬೇಕು' ಎಂದು ಅಧಿಕಾರಿಗಳನ್ನು ಕೋರಿದ್ದರು. ಆದರೂ ಯಾವುದೇ ಕ್ರಮವಾಗದ ಕಾರಣದಿಂದ ನೌಕರರು ಪ್ರತಿಭಟನೆ ಮುಂದುವರಿಸಿದರು.

ಸಂಘಟನೆಯ ಅಧ್ಯಕ್ಷ ಬಿ.ವಿಜೇಂದ್ರ ಮಾತನಾಡಿ, 'ಕೆಎಸ್‌ಐಸಿಯ ವಿವಿಧ ಘಟಕಗಳಲ್ಲಿ 815ಕ್ಕೂ ಹೆಚ್ಚು ಕಾರ್ಮಿಕರು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆ. ಗುತ್ತಿಗೆ ಏಜೆನ್ಸಿ ಹಾಗೂ ಕೆಎಸ್‌ಐಸಿಯಿಂದ ಕನಿಷ್ಠ ಕೂಲಿ, ಗಳಿಕೆ ರಜೆ ಮೊದಲಾದವುಗಳನ್ನು ನೀಡದೇ ವಂಚಿಸುತ್ತಿದೆ. ಅನೇಕ ವರ್ಷಗಳಿಂದ ದುಡಿಯುತ್ತಿರುವವರನ್ನು ಕೆಲಸದಿಂದ ತೆಗೆದು ಹಾಕಿರುವುದರಿಂದ, ಈ ದುಡಿಮೆಯನ್ನೇ ನಂಬಿದ್ದ ಕುಟುಂಬಗಳು ಅತಂತ್ರವಾಗಿವೆ' ಎಂದು ತಿಳಿಸಿದರು.

'ನೋಟಿಸ್ ಕೂಡ ನೀಡದೇ ಹೊರಗುತ್ತಿಗೆ ನೌಕರರಿಗೆ ಕೆಲಸ ನಿರಾಕರಿಸುತ್ತಿರುವುದು ನಿಗಮವನ್ನು ವ್ಯವಸ್ಥಿತವಾಗಿ ಮುಗಿಸುವ ಹುನ್ನಾರವಾಗಿದೆ. ಇದನ್ನು ತಡೆಯಬೇಕು. ಕೆಎಸ್‌ಐಸಿಯನ್ನು ಉಳಿಸಬೇಕು' ಎಂದು ಕೋರಿದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಅನಿಲ್‌ಕುಮಾರ್. ಎಂ, ಕಾರ್ಯದರ್ಶಿ ಎಂ.ನಾಗೇಶ್, ಜಂಟಿ ಕಾರ್ಯದರ್ಶಿ ಎಸ್. ಧನರಾಜು, ಖಜಾಂಚಿ ರವಿನಂದನ್ ಎಂ.ಪಿ., ಓಂಕಾರ್ ಪ್ರಸಾದ್, ಜಿ.ಎನ್.ಆನಂದ ಭಾಗವಹಿಸಿದ್ದರು.

ಈ ಬಗ್ಗೆ ಪ್ರತಿಕ್ರಿಯೆಗೆ ಕಾರ್ಖಾನೆಯ ಅಧಿಕಾರಿಗಳು ನಿರಾಕರಿಸಿದರು.

ಆತಂಕ ಬೇಡ: ಶಾಸಕ: ಶಾಸಕ ಟಿ.ಎಸ್.ಶ್ರೀವತ್ಸ ಭೇಟಿ ನೀಡಿ ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಗುತ್ತಿಗೆದಾರರು ಬದಲಾದ್ದರಿಂದ ಏ.2ರಿಂದ ಕೆಲಸಕ್ಕೆ ಬರುವಂತೆ ತಿಳಿಸಿ ಕಾರ್ಖಾನೆ ಗೇಟ್‌ಗೆ ಬೀಗ ಹಾಕಿದ್ದರು. ಇದರಿಂದ ಆತಂಕಗೊಂಡ ನೌಕರರು ಪ್ರತಿಭಟಿಸಿದ್ದಾರೆ. ಹೊಸ ಗುತ್ತಿಗೆದಾರರು ಬಂದರೂ ಸೇವಾವಧಿ ಮುಂದುವರಿಸಲಾಗುತ್ತದೆ ಹಾಗೂ ವೇತನ ಹಿಂದಿನಂತೆಯೇ ಇರಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ನೌಕರರು ಆತಂಕಪಡುವ ಅಗತ್ಯವಿಲ್ಲ ' ಎಂದರು.

ಸಂಕ್ಷಿಪ್ತ ಸುದ್ದಿ

ದರ್ಶನ್ ಜಾಮೀನು ಪ್ರಶ್ನಿಸಿದ್ದ ಅರ್ಜಿ ಇಂದು ವಿಚಾರಣೆ

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರೆ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿರುವ ಆದೇಶ ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಬುಧವಾರ ನಡೆಸಲಿದೆ.

ದರ್ಶನ್, ಪವಿತ್ರಗೌಡ, ಲಕ್ಷ್ಮಣ್, ಪ್ರದೂಶ್, ನಾಗರಾಜು, ಅನುಕುಮಾರ್ ಹಾಗೂ ಜಗದೀಶ್ ಅವರಿಗೆ ಹೈಕೋರ್ಟ್ ನಿಯಮಿತ ಜಾಮೀನು ಮಂಜೂರು ಮಾಡಿತ್ತು. ಉಳಿದ ಹತ್ತು ಮಂದಿ ಆರೋಪಿಗಳಿಗೆ ವಿಚಾರಣಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಈ ನಿಯಮಿತ ಜಾಮೀನು ಆದೇಶಗಳನ್ನು ಪ್ರಶ್ನಿಸಿ ವಕೀಲ ಅನಿಲ್ ನಿಶಾನಿ ಅರ್ಜಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸುವಂತೆ ರಾಜ್ಯ ಸರ್ಕಾರದ ಪರ ವಕೀಲರು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಹಾಗೂ ಆರ್. ಮಹದೇವನ್ ದ್ವಿಸದಸ್ಯ ಪೀಠದೆದುರು ಮಂಗಳವಾರ ಪ್ರಸ್ತಾಪಿಸಿದರು. ವಿಚಾರಣೆಯನ್ನು ಬುಧವಾರ ನಡೆಸುವುದಾಗಿ ನ್ಯಾಯಪೀಠವು ತಿಳಿಸಿತು.

ಕೆಪಿಸಿಸಿ ಅಧ್ಯಕ್ಷರ ಬದಲು: ಹೈಕಮಾಂಡ್ ನಿರ್ಧಾರ– ಪರಮೇಶ್ವರ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಬದಲಾವಣೆ ವಿಚಾರ ನನಗೆ ಗೊತ್ತಿಲ್ಲ, ಹೈಕಮಾಂಡ್ ಆ ಬಗ್ಗೆ ನಿರ್ಧರಿಸಲಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಕರ್ನಾಟಕ ಭವನದ ನೂತನ ಕಟ್ಟಡ ಉದ್ಘಾಟನೆಗೆ ಮುಖ್ಯಮಂತ್ರಿ ದೆಹಲಿಗೆ ಹೋಗುತ್ತಿದ್ದಾರೆ. ಈ ಸಂದರ್ಭದಲ್ಲಿ ಸಚಿವ ಸಂಪುಟ ಪುನರ್‌ರಚನೆ ಕುರಿತು ಹೈಕಮಾಂಡ್ ನಾಯಕರ ಜೊತೆ ಅವರು ಚರ್ಚೆ ನಡೆಸಲಿದ್ದಾರೆಯೇ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದರು.

'ಸಚಿವ ಕೆ.ಎನ್. ರಾಜಣ್ಣ ಮೇಲಿನ ಹನಿ ಟ್ರ್ಯಾಪ್ ಪ್ರಕರಣ ಮತ್ತು ಆಡಿಯೊ ಕುರಿತು ತನಿಖೆ ನಡೆಯುತ್ತಿದೆ. ತನಿಖೆ ಸಂದರ್ಭದಲ್ಲಿ ಯಾವುದೇ ವಿಚಾರ ಬಹಿರಂಗಪಡಿಸುವುದಿಲ್ಲ. ತನಿಖೆಯ ವರದಿ ಬಂದ ಬಳಿಕ ಮಾಹಿತಿ ನೀಡುತ್ತೇನೆ' ಎಂದರು.

ಹೆಚ್ಚುವರಿ ಶುಲ್ಕ ವಸೂಲಿ ತಡೆಗೆ ಕ್ರಮ

ಬೆಂಗಳೂರು: ಹೆಚ್ಚುವರಿ ಶುಲ್ಕ ವಸೂಲಿ ಮಾಡುವ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕಾಲೇಜುಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಉನ್ನತ ಶಿಕ್ಷಣ ಇಲಾಖೆ ಮುಂದಾಗಿದೆ.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅಧಿಕಾರಿಗಳು ಮತ್ತು ಶುಲ್ಕ ನಿಯಂತ್ರಣ ಸಮಿತಿಯ ಅಧ್ಯಕ್ಷರು ಭಾಗವಹಿಸಿದ್ದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

ಹಲವು ಕಾಲೇಜುಗಳು ನಿಗದಿಗಿಂತ ಹೆಚ್ಚುವರಿ ಶುಲ್ಕ ಪಡೆಯುತ್ತಿರುವ ಕುರಿತು ಸಾಕಷ್ಟು ದೂರುಗಳು ದಾಖಲಾಗುತ್ತಿವೆ. ಆದರೂ, ಹೆಚ್ಚಿನ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಮಾಹಿತಿ ಇಲ್ಲ. ಅದಕ್ಕಾಗಿ ಕಾಲೇಜುಗಳು ನೀಡುವ ಪ್ರಕಟಣೆ ಹಾಗೂ ಶುಲ್ಕ ರಸೀದಿಯಲ್ಲೇ ಶುಲ್ಕ ನಿಯಂತ್ರಣ ಮತ್ತು ಪ್ರವೇಶ ಮೇಲ್ವಿಚಾರಣಾ ಸಮಿತಿಗಳ ಬಗ್ಗೆ ವಿವರ, ಸಹಾಯವಾಣಿ ನಮೂದಿಸುವುದನ್ನು ಕಡ್ಡಾಯಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. 2024-25 ಶೈಕ್ಷಣಿಕ ಸಾಲಿನಲ್ಲಿ ಹೆಚ್ಚುವರಿ ಶುಲ್ಕ ಪಡೆದ 174 ದೂರುಗಳು ಬಂದಿದ್ದವು.

ಕೊಲೆ ಯತ್ನ: ತನಿಖಾ ತಂಡ ಬದಲು

ಆರ್‌.ರಾಜೇಂದ್ರ ಹತ್ಯೆಗೆ ಸಂಚು: ಮಾಗಡಿ ಡಿವೈಎಸ್‌ಪಿಗೆ ತನಿಖೆಯ ಹೊಣೆ

ಪ್ರಜಾವಾಣಿ ವಾರ್ತೆ

ಆರ್‌.ರಾಜೇಂದ್ರ

ತುಮಕೂರು: ವಿಧಾನ ಪರಿಷತ್ ಸದಸ್ಯ ಆರ್. ರಾಜೇಂದ್ರ ಕೊಲೆ ಸಂಚು ಪ್ರಕರಣದ ತನಿಖಾ ತಂಡ ಬದಲಾಗಿದ್ದು, ಮಾಗಡಿ ಡಿವೈಎಸ್‌ಪಿ ಪ್ರವೀಣ್ ಅವರಿಗೆ ತನಿಖೆಯ ಹೊಣೆ ನೀಡಲಾಗಿದೆ.

ಈ ಮುಂಚೆ ಮಧುಗಿರಿ ಡಿವೈಎಸ್‌ಪಿ ಮಂಜುನಾಥ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿತ್ತು. ಶಿರಾ ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್ ರಾಘವೇಂದ್ರ, ಕ್ಯಾತ್ಸಂದ್ರ ಠಾಣೆಯ ಪಿಎಸ್‌ಐ ಚೇತನ್ ಅವರನ್ನು ಒಳಗೊಂಡ ತಂಡ ನೇಮಕ ಮಾಡಲಾಗಿತ್ತು. ಇದೀಗ ಹೊಸ ತಂಡ ರಚಿಸಲಾಗಿದೆ.

ಕ್ಯಾತ್ಸಂದ್ರ ಇನ್‌ಸ್ಪೆಕ್ಟರ್ ರಾಮ್‌ಪ್ರಸಾದ್, ಜಿಲ್ಲಾ ಪೊಲೀಸ್ ಕಚೇರಿಯ ಇನ್‌ಸ್ಪೆಕ್ಟರ್ ಅವಿನಾಶ್, ಶಿರಾ ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್ ರಾಘವೇಂದ್ರ ಅವರ ತಂಡ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ.

ನಾಲ್ವರ ವಿಚಾರಣೆ: 'ನನ್ನ ಕೊಲೆಗೆ ಸಂಚು ರೂಪಿಸಿದ್ದು, ತನಿಖೆ ನಡೆಸಿ ಅಗತ್ಯ ಕ್ರಮಕೈಗೊಳ್ಳಬೇಕು' ಎಂದು ಆರ್‌.ರಾಜೇಂದ್ರ ನೀಡಿದ ದೂರಿನ ಮೇರೆಗೆ ಸೋಮ, ಭರತ್, ಅಮಿತ್, ಗುಂಡಾ, ಯತೀಶ್ ಇತರರ ವಿರುದ್ಧ ಕ್ಯಾತ್ಸಂದ್ರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಎ-1 ಆರೋಪಿ ಸೋಮ ತಲೆ ಮರೆಸಿಕೊಂಡಿದ್ದಾನೆ. ಈತನ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಭರತ್, ಯತೀಶ್‌ರನ್ನು ವಶಕ್ಕೆ ಪಡೆದು ವಿಚಾರಣೆ ಮುಂದುವರಿಸಿದ್ದಾರೆ.

ರಾಜೇಂದ್ರ ಕೊಲೆಗೆ ಸಂಚು ರೂಪಿಸಿದ ಬಗ್ಗೆ ಸೋಮವಾರ ಆಡಿಯೊ ಹರಿದಾಡಿತ್ತು. ಪುಷ್ಪಾ ಮತ್ತು ರಾಕಿ ಎಂಬುವರ ಮಧ್ಯೆ ನಡೆದ ಸಂಭಾಷಣೆ ಸದ್ದು ಮಾಡಿತ್ತು. ಆಡಿಯೊದಲ್ಲಿ ಸೋಮ ಮತ್ತಿತರರು ರಾಜೇಂದ್ರ ಕೊಲೆಗೆ ಯತ್ನಿಸಿದ ಬಗ್ಗೆ ಪುಷ್ಪಾ ಮಾತನಾಡಿರುವುದು ದಾಖಲಾಗಿತ್ತು. ಪೊಲೀಸರು ಪುಷ್ಪಾ ಮತ್ತು ಯಶೋಧ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

ಸೋಮನ ಜತೆ ಜೈಲು ಸೇರಿದ್ದ ಪುಷ್ಪಾ: ಸೋಮನ ವಿರುದ್ಧ ಕೊಲೆ ಯತ್ನದ ಆರೋಪ ಮಾಡಿರುವ ಪುಷ್ಪಾ 2023ರಲ್ಲಿ ಡಕಾಯಿತಿ ಪ್ರಕರಣದಲ್ಲಿ ಸೋಮನ ಜತೆಗೆ ಜೈಲು ಸೇರಿದ್ದರು. 63 ವರ್ಷದ ವೃದ್ಧೆಯ ಬಾಯಿಗೆ ಬಟ್ಟೆ ತುರುಕಿ ₹2 ಲಕ್ಷ ಮೌಲ್ಯದ 60 ಗ್ರಾಂ ಮಾಂಗಲ್ಯ ಸರ ದೋಚಿದ್ದ ಆರೋಪ ಎದುರಿಸುತ್ತಿದ್ದಾರೆ.

ತುಮಕೂರಿನ ಕೃಷ್ಣ ನಗರದಲ್ಲಿ ಈ ಕೃತ್ಯ ವೆಸಗಿದ್ದರು. 2023ರ ಸೆ. 20ರಂದು ಬಟ್ಟೆ ಹೊಲಿಸುವ ನೆಪದಲ್ಲಿ ಚಂದ್ರಮ್ಮ ಎಂಬುವರ ಮನೆಗೆ ಹೋಗಿ ಸರ ಕಿತ್ತಿದ್ದರು. ಚಂದ್ರಮ್ಮ ಕೈ ಕಟ್ಟಿ ಹಾಕಿ, ಬಾಯಿಗೆ ಬಟ್ಟೆ ತುರುಕಿ ಚಿನ್ನಾಭರಣ ಕಿತ್ತುಕೊಂಡು ಹೋಗಿದ್ದರು. ಎನ್‌ಇಪಿಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಕುರಿತು ತನಿಖೆ ನಡೆಸಿದ ಪೊಲೀಸರು ಇಬ್ಬರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು.

ಪುಷ್ಪಾ ಈ ಹಿಂದೆ ಕೆಲ ಸ್ಥಳೀಯ ಮುಖಂಡರನ್ನು 'ಮಧುಬಲೆ'ಗೆ ಬೀಳಿಸಿದ ಉದಾಹರಣೆಗಳಿವೆ. ರೈಲು ನಿಲ್ದಾಣ ರಸ್ತೆಯ ಉಪ್ಪಾರಹಳ್ಳಿ ಕೆಳ ಸೇತುವೆ ಬಳಿ ಹೋಟೆಲ್ ನಡೆಸುತ್ತಿದ್ದರು. ಸೋಮನ ಆಪ್ತ ಬಣದಲ್ಲಿ ಗುರುತಿಸಿಕೊಂಡಿದ್ದ ಪುಷ್ಪಾ ಆತನ ವಿರುದ್ಧವೇ ಆರೋಪ ಮಾಡಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ಮಧುಬಲೆ ತನಿಖೆ: ಸಿ.ಎಂ ವಿವೇಚನೆಗೆ ಬಿಟ್ಟದ್ದು– ರಾಜಣ್ಣ

ತುಮಕೂರು: ಮಧುಬಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಸೇರಿದಂತೆ ಯಾವ ರೀತಿಯ ತನಿಖೆ ನಡೆಸಬೇಕು ಎಂಬುದು ಮುಖ್ಯಮಂತ್ರಿ, ಗೃಹ ಸಚಿವರ ವಿವೇಚನೆಗೆ ಬಿಟ್ಟದ್ದು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪ್ರಕರಣದ ತನಿಖೆ ನಡೆಯುತ್ತಿದೆ. ಈಗ ಏನು ಮಾತನಾಡುವುದು. ನೋಟಿಸ್ ಕೊಟ್ಟರೆ ಕೊಡಲಿ. ಯಾವ ತನಿಖೆ ಆಗುತ್ತದೋ ಆಗಲಿ. ಕೆಲವು ವಿಚಾರ ಹೇಳಲು ಆಗುವುದಿಲ್ಲ' ಎಂದರು.

'ಮಧುಬಲೆಗೆ ನಮ್ಮ ಪಕ್ಷ, ಬೇರೆ ಪಕ್ಷದವರು ಪ್ರಯತ್ನ ಮಾಡಿರಬಹುದು. ಬೆಂಗಳೂರು, ಮುಂಬೈನವರೂ ಇರಬಹುದು. ರಾಜಕೀಯೇತರ ವ್ಯಕ್ತಿಗಳು ಮಾಡಿರಬಹುದು. ಯಾರೇ ಮಾಡಿದರೂ ಇದು ಖಂಡನಾರ್ಹ. ಕಾನೂನು ಬಾಹಿರ ಕ್ರಮಕ್ಕೆ ಕುಮ್ಮಕ್ಕು ನೀಡಿದವರಿಗೆ, ಪ್ರಯತ್ನಿಸಿದವರಿಗೆ ದೇವರು ಒಳ್ಳೆಯದು ಮಾಡಲ್ಲ. ಅಂಥವರು ಸಾರ್ವಜನಿಕ ಜೀವನದಲ್ಲಿ ಇರಬಾರದು' ಎಂದರು.

ಅಂಕಿತ ಹಾಕದಿದ್ದರೆ ರಾಜ್ಯಪಾಲರ ವಿರುದ್ಧ 'ಸುಪ್ರೀಂ'ಗೆ– ಪ್ರಿಯಾಂಕ್

ಬೆಂಗಳೂರು: 'ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕದೇ ಇದ್ದರೆ ತಮಿಳುನಾಡಿನ ರೀತಿ ನಾವು ಕೂಡಾ ಸುಪ್ರೀಂ ಕೋರ್ಟ್ ಮೊರೆ ಹೋಗುತ್ತೇವೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾಜ್ಯಪಾಲರು ಮಸೂದೆಗಳನ್ನು ವಾಪಸ್ ಮಾಡುವುದು ಹೊಸತೇನೂ ಅಲ್ಲ. ತಮಿಳುನಾಡಿನಲ್ಲೂ ಇದೇ ರೀತಿ ಮಾಡಿದ್ದಾರೆ. ಮಸೂದೆ ಗಳಿಗೆ ಸ್ಪಷ್ಟನೆ ಕೇಳಿದರೆ ಕೊಡುತ್ತೇವೆ' ಎಂದರು.

ಪರಿಷತ್ ಸ್ಥಾನದ ಚರ್ಚೆ: 'ನವದೆಹಲಿಯಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲಿರುವ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ, ಪರಿಷತ್ ಸ್ಥಾನದ ಕುರಿತು ಚರ್ಚೆ ನಡೆಸಲಿದ್ದಾರೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಸಂಪುಟ ಪುನರ್‌ರಚನೆ ವಿಚಾರದ ಕುರಿತು ಚರ್ಚಿಸುವ ಬಗ್ಗೆ ಗೊತ್ತಿಲ್ಲ' ಎಂದು ಪ್ರಿಯಾಂಕ್ ಹೇಳಿದರು.

ರಾಜ್ಯಪಾಲರ ಕ್ರಮ ಸರಿಯಲ್ಲ: 'ಎಲ್ಲ ಮಸೂದೆಯನ್ನು ರಾಜ್ಯಪಾಲರು ವಾಪಸ್ ಕಳುಹಿಸುತ್ತಾರೆಂದರೆ ಏನರ್ಥ? ಅವರ ಈ ಕ್ರಮ ಸರಿಯಲ್ಲ' ಎಂದು ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಹೇಳಿದರು.

'ವಿರೋಧ ಪಕ್ಷಗಳು ಸದನದಲ್ಲಿ ಮಾಡಲು ಸಾಧ್ಯ ಆಗದಿರುವುದನ್ನು ರಾಜ್ಯಪಾಲರ ಮೂಲಕ ಮಾಡಿಸುತ್ತಿವೆ. ಪ್ರತಿಪಕ್ಷಗಳು ದೂರು ನೀಡಿದ ತಕ್ಷಣ ಅವರು ಮಸೂದೆಗಳನ್ನು ವಾಪಸ್ ಕಳುಹಿಸುತ್ತಾರೆ. ರಾಜ್ಯಪಾಲರ ಈ ನಡೆಯ ವಿರುದ್ಧ ಕೋರ್ಟ್‌ಗೆ ಹೋಗುವುದು ಅನಿವಾರ್ಯವಾಗಿದೆ' ಎಂದರು.

'ಕೇರಳ, ಪಶ್ಚಿಮ ಬಂಗಾಳ ಸರ್ಕಾರಗಳು ಅಲ್ಲಿನ ರಾಜ್ಯಪಾಲರ ವಿರುದ್ಧ ಈಗಾಗಲೇ ಕೋರ್ಟ್ ಮೆಟ್ಟಿಲೇರಿವೆ. ಕೋರ್ಟ್ ಕೂಡ ರಾಜ್ಯಪಾಲರ ನಡೆಗೆ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದೆ' ಎಂದರು.

'ಕೇಂದ್ರದಿಂದ ಸಾಮರಸ್ಯ ವಿರೋಧಿ ನಡವಳಿಕೆ'

ಬೆಂಗಳೂರು: 'ಕೇಂದ್ರ ಸರ್ಕಾರವು ಸಮುದಾಯ ವಿರೋಧಿ ನೀತಿಯನ್ನು ಕೈಬಿಟ್ಟು ಪ್ರಜಾಪ್ರಭುತ್ವದ ಆಶಯಗಳಿಗೆ ಪೂರಕವಾಗಿ ವರ್ತಿಸಬೇಕು' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

'ಶಾಸನಬದ್ಧವಾಗಿ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿರುವ ನಮ್ಮ ದೇಶದಲ್ಲಿ ಎಲ್ಲ ಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡುವುದು ಅಗತ್ಯ ಮತ್ತು ಕಾಯ್ದೆಗಳನ್ನು ರೂಪಿಸುವಾಗ ಏಕಪಕ್ಷೀಯವಾಗಿ ನಿರ್ಧರಿಸುವುದು ಸರಿಯಲ್ಲ. ಚರ್ಚೆ ನಡೆಸಿದ ನಂತರವಷ್ಟೇ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು' ಎಂದಿದ್ದಾರೆ.

'ಸಮುದಾಯಗಳ ಮೇಲಿನ ದ್ವೇಷದ ಮನಸ್ಥಿತಿಯಿಂದ ಪ್ರಜಾಪ್ರಭುತ್ವದ ಆಶಯಗಳನ್ನು ಗಾಳಿಗೆ ತೂರಿ ವರ್ತಿಸುತ್ತಿರುವ ಕೇಂದ್ರ ಸರ್ಕಾರ, ದೇಶದ ಮೂಲ ಆಶಯವಾದ ಸಾಮರಸ್ಯವನ್ನು ಮರೆತು ವರ್ತಿಸುತ್ತಿರುವುದು ಖಂಡನೀಯ' ಎಂದೂ ಅವರು ಹೇಳಿದ್ದಾರೆ.



1. ಭೂಕಂಪಕ್ಕೂ ಮುನ್ನ ಸ್ಕೈ ವಿಲ್ಲಾ ಕಟ್ಟಡ
2. ಭೂಕಂಪದ ನಂತರ ಕುಸಿದುಬಿದ್ದಿರುವ ಸ್ಕೈ ವಿಲ್ಲಾ ಕಟ್ಟಡ

ಇಸ್ರೊದಿಂದ ಭೂಕಂಪದ ಚಿತ್ರ ಬಿಡುಗಡೆ

ಬೆಂಗಳೂರು (ಪಿಟಿಐ): ಈಚೆಗೆ ತೀವ್ರ ಭೂಕಂಪಕ್ಕೆ ಗುರಿಯಾದ ಮ್ಯಾನ್ಮಾರ್‌ನ ಮ್ಯಾಂಡಲೇ ಮತ್ತು ಸಗಾಇಂಗ್ ನಗರಗಳ ಉಪಗ್ರಹ ಚಿತ್ರಗಳನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮಂಗಳವಾರ ಬಿಡುಗಡೆ ಮಾಡಿದೆ.

ಇಸ್ರೊವಿನ 'ಕಾರ್ಟೊಸ್ಯಾಟ್-3' ಉಪಗ್ರಹವು ಈ ನಗರಗಳ ಚಿತ್ರಗಳನ್ನು ಸೆರೆಹಿಡಿದಿದೆ. ಭೂಕಂಪಕ್ಕೂ ಮುನ್ನ (ಮಾರ್ಚ್ 18) ಮತ್ತು ಭೂಕಂಪದ ನಂತರ (ಮಾರ್ಚ್ 29ರಂದು) ತೆಗೆಯಲಾದ ಹಲವು ಚಿತ್ರಗಳನ್ನು ಇಸ್ರೊ ಬಿಡುಗಡೆ ಮಾಡಿದೆ.

ಮಾಂಡಲೆ ನಗರದ ಸ್ಕೈ ವಿಲ್ಲಾ, ಫಯಾನಿ ಪಗೋಡಾ, ಮಹಾಮುನಿ ಪಗೋಡಾ, ಆನಂದ ಪಗೋಡಾ, ಮಾಂಡಲೆ ವಿಶ್ವವಿದ್ಯಾಲಯ, ಸಗಾಇಂಗ್ ವಿವಿಧ ಕಟ್ಟಡಗಳ ಚಿತ್ರಗಳು ಇದರಲ್ಲಿ ಸೇರಿವೆ. ಈ ಚಿತ್ರಗಳು ಇಸ್ರೊ ಜಾಲತಾಣದಲ್ಲಿ ಲಭ್ಯವಿವೆ.

'ನಕ್ಸಲರಿಗೆ ವಿಶೇಷ ಕೋರ್ಟ್ ಸ್ಥಾಪಿಸಿ'

ಬೆಂಗಳೂರು: ಶರಣಾದ ನಕ್ಸಲರ ಮೇಲಿನ ಪ್ರಕರಣಗಳ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸುವ ಪ್ರಕ್ರಿಯೆಗೆ ವೇಗ ನೀಡಬೇಕು. ಎಲ್ಲರಿಗೂ ಜಾಮೀನು ಸಿಗುವಂತಾಗಬೇಕು. ಕಾನೂನು ಹಾಗೂ ವೈದ್ಯಕೀಯ ನೆರವು ಒದಗಿಸಬೇಕು ಎಂದು ಶಾಂತಿಗಾಗಿ ನಾಗರಿಕರ ವೇದಿಕೆ ಒತ್ತಾಯಿಸಿದೆ.

ನಕ್ಸಲರನ್ನು ಮುಖ್ಯವಾಹಿನಿಗೆ ತರಲು ಅಗತ್ಯ ಕ್ರಮಕೈಗೊಳ್ಳಬೇಕು. ಸಮಾಜದಲ್ಲಿ ಗೌರವಯುತ ಬದುಕು ಕಟ್ಟಿಕೊಳ್ಳಲು ಬೇಕಾದ ಮೂಲಸೌಕರ್ಯ ಒದಗಿಸಬೇಕು. ನಕ್ಸಲ್ ಪ್ರಭಾವಿತ ಪ್ರದೇಶದ ಅಭಿವೃದ್ಧಿಗೆ ವಿಶೇಷ ಗಮನ ನೀಡಬೇಕು. ಅವರ ಎಲ್ಲಾ ಬೇಡಿಕೆ ಈಡೇರಿಸಬೇಕು ಎಂದು ವೇದಿಕೆಯ ತಾರಾ ರಾವ್, ನಗರಗೆರೆ ರಮೇಶ, ವಿ.ಎಸ್. ಶ್ರೀಧರ ಒತ್ತಾಯಿಸಿದ್ದಾರೆ.

ಕರ್ನಾಟಕದ ನಕ್ಸಲರನ್ನು ಮುಖ್ಯವಾಹಿನಿಗೆ ತರುವಲ್ಲಿ ಮಹತ್ತರ ಪಾತ್ರವಹಿಸಿದ ಕರ್ನಾಟಕದ ನಕ್ಸಲ್ ನಿಗ್ರಹ ಪಡೆ ಮತ್ತು ಗುಪ್ತವಾರ್ತೆ ಘಟಕದ 22 ಪೊಲೀಸರಿಗೆ ಮುಖ್ಯಮಂತ್ರಿಗಳ ಪದಕವನ್ನು ಘೋಷಿಸಿರುವುದು ಸ್ವಾಗತಾರ್ಹ. 'ಸರ್ಕಾರಗಳು ಮಾತುಕತೆ ಮೂಲಕ ಪರಿಹಾರ ಕಂಡುಕೊಳ್ಳಬೇಕೇ ಹೊರತು ಬಂದೂಕಿನಿಂದ ಅಲ್ಲ' ಎಂದು ಹೇಳಿದ್ದಾರೆ.

ನನ್ನ ಹೋರಾಟ ಹಿಂದುತ್ವ, ಉತ್ತರ ಕರ್ನಾಟಕದ ಅಭಿವೃದ್ಧಿ ಪರ: ಯತ್ನಾಳ

'ಪ್ರಾದೇಶಿಕ ಪಕ್ಷ ಕಟ್ಟಿದವರ ಸಾಲಿಗೆ ಸೇರಿಸಬೇಡಿ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಈ ಹಿಂದೆ ಪ್ರಾದೇಶಿಕ ಪಕ್ಷ ಕಟ್ಟಿದವರ ಸಾಲಿನಲ್ಲಿ ನನ್ನನ್ನು ಸೇರಿಸಬೇಡಿ. ನನ್ನ ಹೋರಾಟ ಹಿಂದುತ್ವ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿ ಪರ. ಹೀರೋ ಅಥವಾ ಜೀರೋ ಆಗಲು ನಾನು ಸಿದ್ಧ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

'ಕೆಲವರಿಗೆ ನಾನು ಜೋಕರ್ ಆಗಿರಬಹುದು. ಆದರೆ, ಇದೇ ಜೋಕರ್ ಮುಂದೆ ರಾಜ್ಯ ಆಳುತ್ತಾನೆ ನೆನಪಿರಲಿ. 2015ರ ಚುನಾವಣೆಯಲ್ಲಿ ಯತ್ನಾಳ ಕಥೆ ಮುಗಿಯಿತು ಎಂದಿದ್ದರು. ಆದರೆ, ಚುನಾವಣೆಯಲ್ಲಿ ಗೆದ್ದು ಬಂದೆ. ಮುಂದೆಯೂ ಇದೇ ರೀತಿ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಮಾಯಣದಲ್ಲಿ ರಾಮ, ಮಹಾಭಾರತದಲ್ಲಿ ಪಾಂಡವರಿಗೆ ಕಿರುಕುಳ ತಪ್ಪಲಿಲ್ಲ. ದುರ್ಯೋಧನ ಕೆಲ ವರ್ಷ ರಾಜ್ಯಭಾರ ಮಾಡಿದ್ದ. ಆದರೆ, ಕೊನೆಯಲ್ಲಿ ಜಯ ದಕ್ಕಿದ್ದು ರಾಮ ಮತ್ತು ಪಾಂಡವರಿಗೆ. ಕೆಲವರು ವಿಜಯೇಂದ್ರ ನನ್ನು ಮುಖ್ಯಮಂತ್ರಿಯನ್ನಾಗಿ ಮಾಡುವ ಆಸೆ ಹೊಂದಿದ್ದಾರೆ. ಅದು ಈಡೇರಲ್ಲ' ಎಂದರು.

'ಬಿಜೆಪಿ ವರಿಷ್ಠರಿಗೆ ನನ್ನ ಬಗ್ಗೆ ಅಸಮಾಧಾನವಿಲ್ಲ. ಆದರೆ, ಅವರಿಗೆ ಕೆಲವರು ನನ್ನ ಬಗ್ಗೆ ಇಲ್ಲಸಲ್ಲದ ಸಂಗತಿಗಳನ್ನು ಹೇಳಿದ್ದಾರೆ. ಬಿಜೆಪಿಯಲ್ಲಿ ಒಂದು ದುಷ್ಟ ಕುಟುಂಬವಿದ್ದು, ಅದನ್ನು ಕಿತ್ತು ಬಿಸಾಡುವವರೆಗೆ ಪಕ್ಷ ಬೆಳೆಸಲು ಆಗದು' ಎಂದು ಅವರು ತಿಳಿಸಿದರು.

ರಾಜ್ಯ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ವಿರುದ್ಧ ಹರಿಹಾಯ್ದ ಅವರು, '2008ರಲ್ಲಿ ದೇವರಹಿಪ್ಪರಗಿಯಲ್ಲಿ ಹಣ ಹಂಚಿ, ನನ್ನನ್ನು ಸೋಲಿಸಿದರು. ಆದರೆ, ಜನ ತಿರಸ್ಕರಿಸಿಲ್ಲ. ಸುಳ್ಳು ಹೇಳುವ ಜೊತೆಗೆ ಚಿನ್ನದ ಅರಮನೆ ಕಟ್ಟಿಸುವ ಭರವಸೆ ನೀಡಿ, ಜನರಿಗೆ ನಡಹಳ್ಳಿ ವಂಚಿಸಿದರು' ಎಂದರು.

'ಕಳೆದ ವಿಧಾನಸಭೆ ಚುನಾವಣೆಯಲ್ಲಿ ವಿಜಯಪುರ ಜಿಲ್ಲೆಯ 7 ಬಿಜೆಪಿ ಅಭ್ಯರ್ಥಿಗಳ ಸೋಲಿಗೆ ಯತ್ನಾಳ ಕಾರಣ ಎಂದು ಕೆಲವರು ಆರೋಪಿಸುತ್ತಾರೆ. ಪಕ್ಷವು ಜಿಲ್ಲೆಯಲ್ಲಿ ನನ್ನನ್ನು ಕೇಳಿ ಒಂದೂ ಟಿಕೆಟ್ ನೀಡಿಲ್ಲ. ನನ್ನ ವಿರುದ್ಧ ಆರೋಪಿಸುವ ನೈತಿಕತೆ ಯಾರಿಗೂ ಇಲ್ಲ. ಜಿಲ್ಲೆಯಲ್ಲಿ ನಿಮ್ಮ ಸೋಲಿಗೆ ನೀವೇ ಕಾರಣ' ಎಂದು ಹೇಳಿದರು.

ವಿಜಯೇಂದ್ರ ದುಬೈ, ಮಾರಿಷಸ್‌ನಲ್ಲಿ ಆಸ್ತಿ ಮಾಡಿದ್ದು, ನಾನು ಆಸ್ತಿ ಸಂಪಾದನೆ ಮಾಡಿಲ್ಲ. ನನಗೆ ರಾಜ್ಯದಾದ್ಯಂತ ಬೆಂಬಲಿಗರಿದ್ದಾರೆ. ಜನರೇ ನನ್ನ ಆಸ್ತಿ

ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಬಿಜೆಪಿಗೆ ಮರಳುತ್ತಾರೆ ಹೊರತು ಹೊಸ ಪಕ್ಷ ಕಟ್ಟಲ್ಲ. ನಾವು ಯಾರೂ ಬಿಜೆಪಿ ಬಿಟ್ಟು ಹೋಗುವುದಿಲ್ಲ

ರಮೇಶ ಜಾರಕಿಹೊಳಿ, ಶಾಸಕ

'ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿ'

ರೇಣುಕಾಚಾರ್ಯ

ದಾವಣಗೆರೆ: 'ಬಸನಗೌಡ ಪಾಟೀಲ ಯತ್ನಾಳ ಅವರು ಹೊಸ ಪಕ್ಷ ಸ್ಥಾಪಿಸಲು ಮುಂದಾದರೆ ಸ್ವಾಗತಿಸುತ್ತೇನೆ. ಅದಕ್ಕೂ ಮೊದಲು ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಮರು ಚುನಾವಣೆ ಎದುರಿಸಲಿ. ಚುನಾವಣೆಯಲ್ಲಿ ಅವರು ಠೇವಣಿ ಕಳೆದುಕೊಳ್ಳುತ್ತಾರಷ್ಟೇ' ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೇರೆಯವರು ಹೇಳಿದ್ದನ್ನೇ ಕೇಳಿದರೆ ಬಲಿಪಶು ಆಗುತ್ತೀರಿ ಎಂದು ಅವರಿಗೆ ಮೊದಲೇ ಹೇಳಿದ್ದೆ. ಅದರಂತೆ ಯತ್ನಾಳ ಬಲಿಪಶು ಆದರು. ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಲು ಅವರು ಹಿಂದುತ್ವ ಎನ್ನುತ್ತಿದ್ದಾರೆ. ಆಚಾರದಲ್ಲಿ ಹಿಂದುತ್ವ ಇರಬೇಕೇ ವಿನಾ ಸುಮ್ಮನೇ ಬೊಗಳೆ ಬಿಡಬಾರದು. ಇನ್ನಾದರೂ ಅವರು ಸರ್ವಾಧಿಕಾರಿ ಧೋರಣೆ ಬಿಡಬೇಕು' ಎಂದು ಮನವಿ ಮಾಡಿದರು.

'ಅವರು ಹೊಸ ಪಕ್ಷ ಕಟ್ಟಿದರೆ, ಚುನಾವಣೆಯಲ್ಲಿ ಅವರಿಗೆ ಅಭ್ಯರ್ಥಿಗಳೇ ಸಿಗುವುದಿಲ್ಲ. ಹಗಲುಗನಸು ಕಾಣುವುದನ್ನು ಬಿಡಲಿ' ಎಂದರು.

ಉದ್ಯೋಗ ವಾಣಿ

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ನಂ.30, 15ನೇ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು-560011
ದೂರವಾಣಿ ಸಂಖ್ಯೆ: 2663 2783, 2663 3566
ಇ-ಮೇಲ್: ceo@bcbbank.in

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಬ್ಯಾಂಕಿನಲ್ಲಿ ಖಾಲಿ ಇರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿ/ಕಾರ್ಯದರ್ಶಿ ಹುದ್ದೆಗೆ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ದಿನಾಂಕ 12.03.2025ರಂದು ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27.03.2025 ನಿಗದಿಪಡಿಸಲಾಗಿತ್ತು, ಆಡಳಿತ ಮಂಡಳಿಯ ತೀರ್ಮಾನದಂತೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 30.04.2025ರ ವರೆಗೆ ವಿಸ್ತರಿಸಲಾಗಿದೆ.
ದಿನಾಂಕ 12.03.2025ರ ಪ್ರಕಟಣೆಯಲ್ಲಿ ತಿಳಿಸಿರುವ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆಡಳಿತ ಮಂಡಳಿ ಪರವಾಗಿ
ಸಹಿ/-
ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ.

ಸ್ಥಳ: ಬೆಂಗಳೂರು
ದಿನಾಂಕ: 28.03.2025

ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿ.

ನೇಮಕಾತಿಗೆ ಅರ್ಜಿ ಆಹ್ವಾನ

ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿ., ಹೊಸಪೇಟೆ ಇವರು ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು, ಆಸಕ್ತ ಅಭ್ಯರ್ಥಿಗಳು ದಿನಾಂಕ 15.04.2025 ರೊಳಗೆ ನಿಗದಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ (ಗೂಗಲ್ ಫಾರ್ಮ್) ಅರ್ಜಿ ಸಲ್ಲಿಸಬೇಕು.

ಹುದ್ದೆಗಳ ವಿವರಗಳು

ಕ್ರಮಾಂಕ	ಹುದ್ದೆಗಳು	ಹುದ್ದೆಗಳು
1	ಕಾರ್ಯಾಲಯ ಕಾರ್ಯದರ್ಶಿ (ಅಧ್ಯಕ್ಷರು & ಎಂ. ಡಿ. ಕಛೇರಿ) (Secretariate)	2
2	ಶಾಖಾ ವ್ಯವಸ್ಥಾಪಕರು/ಹಿರಿಯ ಅಧಿಕಾರಿ(Branch Manager/Sr. Officer)	15
3	ಲೆಕ್ಕ ಪರಿಶೋಧಕರು (Auditor)	2
4	ಕಾನೂನು ಅಧಿಕಾರಿ (Law officer)	2
5	ತಂತ್ರಜ್ಞಾನ ಅಧಿಕಾರಿ (IT)	2
6	ಪರಿಕ್ಷಾರ್ತ ಅಧಿಕಾರಿ (Prob. Officer)	30
7	ನಿರ್ವಹಣಾಧಿಕಾರಿ (ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್) (Maintenance officer)	2

ಮೇಲೆ ತಿಳಿಸಿದ ಹುದ್ದೆಗಳಿಗೆ ಅಗತ್ಯ ವಿದ್ಯಾರ್ಹತೆ, ವಯೋಮಿತಿ, ಅನುಭವ ಮತ್ತು ಪರಿಣಿತಿ ಇತ್ಯಾದಿ ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ www.vikasbank.com ನಲ್ಲಿ ಪ್ರಕಟಿಸಲಾಗಿದೆ.
'ಪರಿಕ್ಷಾರ್ಥ ಅಭ್ಯರ್ಥಿ' ಹುದ್ದೆಗೆ ನಿಗದಿಪಡಿಸಿದ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬೇಕು. ಪರಿಕ್ಷಾರ್ಥ ಅಭ್ಯರ್ಥಿಗಳ ಹುದ್ದೆಗೆ ಲಿಖಿತ ಪರೀಕ್ಷೆ ದಿನಾಂಕ 20.04.2025 ಭಾನುವಾರ.
ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನ ದಿ: 27.04.2025 ಭಾನುವಾರ.
ಉಳಿದ ಹುದ್ದೆಗಳ ಮೌಖಿಕ ಸಂದರ್ಶನದ ದಿನಾಂಕ ಅರ್ಹ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.

ಸ್ಥಳ: ಹೊಸಪೇಟೆ
ದಿನಾಂಕ: 02-04-2025

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

ತಂತ್ರಜ್ಞಾನ



ನಿಮ್ಮ 'ಜೀಬ್ಲೀ' ಚಿತ್ರ ಸಿದ್ಧವಾಯಿತೆ?

ಜೀಬ್ಲೀ ಶೈಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ 'ಎಕ್ಸ್'ನಲ್ಲಿ ಹಂಚಿಕೊಂಡ ಚಿತ್ರ

ಕಳೆದ ವಾರದಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಜೀಬ್ಲೀ ಶೈಲಿಯ ಎಐ ಚಿತ್ರಗಳ ಸಂಚಲನ. ಈ ಟ್ರೆಂಡ್ ಹೇಗೆ ಹುಟ್ಟಿತು? ನಿಮ್ಮ ಚಿತ್ರವನ್ನು ಜೀಬ್ಲೀ ಶೈಲಿಗೆ ಹೇಗೆ ಪರಿವರ್ತಿಸಬಹುದು?

ಅವಿನಾಶ್ ಬಿ.

ಕಳೆದೊಂದು ವಾರದಿಂದ ಸಾಮಾಜಿಕ ಮಾಧ್ಯಮಗಳಲ್ಲೆಲ್ಲಾ ವಿನೂತನ ಚಿತ್ರಗಳದ್ದೇ ಸದ್ದು. ತಮ್ಮ ತಮ್ಮ ಸೆಲ್ಫಿ ಚಿತ್ರಗಳನ್ನು, ಕುಟುಂಬದ ಚಿತ್ರಗಳನ್ನೆಲ್ಲ ಸುಂದರವಾದ, ಮೃದು ಭಾವ ಹೊಮ್ಮಿಸುವ ಆ್ಯನಿಮೇಷನ್ ರೂಪಕ್ಕೆ ಪರಿವರ್ತಿಸಿ ಹಂಚಿಕೊಂಡಿದ್ದಾರೆ. ಅಷ್ಟೇಕೆ, ದೇಶದ ಪ್ರಧಾನಿಯೂ ತಮ್ಮ ಆಡಳಿತದ ಪ್ರಮುಖ ಘಟ್ಟಗಳನ್ನು ಬಿಂಬಿಸುವ ಚಿತ್ರಗಳನ್ನು ಎಕ್ಸ್ ಖಾತೆಯಲ್ಲಿ ಶೇರ್ ಮಾಡಿಕೊಂಡಿದ್ದಾರೆ. ಸಚಿನ್ ತೆಂಡೂಲ್ಕರ್, ಅಮಿತಾಭ್ ಬಚ್ಚನ್ ಮುಂತಾದ ಸೆಲೆಬ್ರಿಟಿಗಳಿಗೂ ಈ ಚಿತ್ರದ ಮೋಹದ ಜಾಲದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಇದುವೇ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಹೊಸ ಟ್ರಂಡ್ - ಜೀಬ್ಲೀ!

ಏನಿದು ಜೀಬ್ಲೀ/ ಘಿಬ್ಲೀ?

Ghibli ಪದವನ್ನು ಜಪಾನೀ ಭಾಷೆಯಲ್ಲಿ 'ಜೀಬ್ಲೀ' ಎಂದೂ, ಅಮೆರಿಕನ್ ಇಂಗ್ಲಿಷ್‌ನಲ್ಲಿ 'ಘಿಬ್ಲೀ' ಎಂದೂ ಉಚ್ಚರಿಸಲಾಗುತ್ತದೆ. 'ಜೀಬ್ಲೀ ಸ್ಟುಡಿಯೊ' ಎಂಬುದು ಜಪಾನ್‌ನ ಜನಪ್ರಿಯ ಮತ್ತು ಪ್ರಸಿದ್ಧ ಆ್ಯನಿಮೇಶನ್ ಸ್ಟುಡಿಯೊ. ಜೀಬ್ಲೀ ಶೈಲಿಯ ವಿಕಟಚಿತ್ರಗಳು ಅಥವಾ ವಿಡಂಬನಾತ್ಮಕ ಚಿತ್ರಗಳ ಮೂಲಕವೇ ಈ ಸ್ಟುಡಿಯೊ ಹಲವಾರು ಆ್ಯನಿಮೇಟೆಡ್ ಚಲನಚಿತ್ರಗಳನ್ನು ನಿರ್ಮಿಸಿದೆ. ಜೀಬ್ಲೀಶೈಲಿಯ ಚಿತ್ರಗಳು ಹಯಾವೊ ಮಿಯಾಝುಕಿ ಎಂಬ ಚಿತ್ರ ನಿರ್ದೇಶಕನ ಸುದೀರ್ಘ ಪರಿಶ್ರಮದ ಫಲ. ಇತರ ಹೈಟೆಕ್ ಶೈಲಿಯ ಆ್ಯನಿಮೇಟೆಡ್ ಚಿತ್ರಗಳಿಗಿಂತ ನೋಡಲು ಸರಳವಾಗಿಯೂ, ಹೆಚ್ಚು ಆಪ್ತವಾಗಿಯೂ ಆಕರ್ಷಕವಾಗಿಯೂ, ಅದಕ್ಕೂ ಹೆಚ್ಚಿನದಾಗಿ ಜೀವಂತಿಕೆಯ ಕಳೆಯೊಂದಿಗೆ ಜೀಬ್ಲೀ ಗಮನ ಸೆಳೆಯುತ್ತದೆ. ಒಂದರ್ಥದಲ್ಲಿ ಕನಸಿನ ಪಾತ್ರಗಳಂತೆ ಕಣ್ಣಿಗೆ ಕಟ್ಟುತ್ತವೆ. ಒಂದೊಂದು ಚಿತ್ರವನ್ನು ತಯಾರಿಸಬೇಕಿದ್ದರೆ ಕಲಾವಿದರು ಹಲವಾರು ಗಂಟೆಗಳನ್ನೇ ವ್ಯಯಿಸಬೇಕಾಗುತ್ತಿತ್ತು. ಈಗ ಎಐ ಬಂದಿದೆ, ಕೆಲವೇ ಕ್ಷಣಗಳು ಸಾಕು. ಇದು ಕಲಾವಿದರ ಬೌದ್ಧಿಕ ಆಸ್ತಿಯ ರಕ್ಷಣೆಗೆ ಬಂದ ಅತಿದೊಡ್ಡ ಅಪಾಯವೂ ಹೌದು. ವರ್ಷಾನುಗಟ್ಟಲೆ ಮಾಡಿದ ಪರಿಶ್ರಮವನ್ನು ಕೆಲವೇ ಸೆಕೆಂಡುಗಳಲ್ಲಿ ಈ ಕೃತಕ ಬುದ್ಧಿಮತ್ತೆ ನಿರ್ಮಿಸಿಕೊಡುತ್ತದೆ ಎಂಬುದು ಮೂಲ ಕಲಾವಿದರ ಆತಂಕಕ್ಕೂ ಕಾರಣವಾದ ಸಂಗತಿ.

ಜೀಬ್ಲೀ ಶೈಲಿಯಲ್ಲಿ ಸಚಿನ್ ತೆಂಡೂಲ್ಕರ್ 'ಎಕ್ಸ್'ನಲ್ಲಿ ಹಂಚಿಕೊಂಡ ಚಿತ್ರ

ದಿಢೀರ್ ಟ್ರೆಂಡ್ ಆಗಿದ್ದೇಕೆ?

ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಯುಗ ಇದು. ಅದರಲ್ಲಿಯೂ ಓಪನ್ ಎಐ ಕಂಪನಿ ರೂಪಿಸಿರುವ 'ಚಾಟ್‌ಜಿಪಿಟಿ' ಎಂಬ ಮಾಯಾಜಾಲದಲ್ಲಿ ಏನೆಲ್ಲ ದೊರೆಯುತ್ತದೆ ಎಂಬುದು ನಿಕಷಕ್ಕೊಳಗಾಗುತ್ತಲೇ ಇದೆ. ತತ್ಪರಿಣಾಮವಾಗಿ, ನಾವು ಹೇಳಿದ್ದನ್ನು ಹೇಳಿದಂತೆಯೇ ಚಿತ್ರ ತಯಾರಿಸಿಕೊಡಬಲ್ಲ ಚಾಟ್‌ಜಿಪಿಟಿಯ ಚಿತ್ರರಚನಾ ತಂತ್ರಜ್ಞಾನದ ವಿಭಾಗದಲ್ಲಿ ಹೊಸದಾಗಿ ಜೀಬ್ಲೀ ಶೈಲಿಯ ಚಿತ್ರರಚನೆಯ ವೈಶಿಷ್ಟ್ಯವನ್ನು ಪರಿಚಯಿಸಲಾಯಿತು, ಅಷ್ಟೇ. ಅದನ್ನು ತಕ್ಷಣ ಬಳಸಿದವರು ತಮಗಾದ ಸಂತೋಷವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚುತ್ತಹೋದರು.

ಮೊದಲ ಮೂರ್ನಾಲ್ಕು ದಿನ ಪಾವತಿ ಮಾಡಿದ ಚಂದಾದಾರರಿಗಷ್ಟೇ (ಪ್ರೀಮಿಯಂ ಆವೃತ್ತಿ) ಚಾಟ್‌ಜಿಪಿಟಿ ಮೂಲಕ ಲಭ್ಯವಿದ್ದ ಈ ವೈಶಿಷ್ಟ್ಯವನ್ನು, ಜನಪ್ರಿಯತೆ ಹೆಚ್ಚಾದಂತೆ ಮತ್ತು ಇದಕ್ಕೆ ಪ್ರತಿಸ್ಪರ್ಧಿಗಳೂ ಹುಟ್ಟಿಕೊಂಡಿದ್ದನ್ನು ಗಮನಿಸಿದ ಓಪನ್‌ಎಐ, ಉಚಿತವಾಗಿ ನೀಡಲಾರಂಭಿಸಿತು. 'ಎಕ್ಸ್' (ಹಿಂದಿನ ಟ್ವಿಟರ್) ತಾಣದಲ್ಲಿರುವ 'ಗ್ರಾಕ್' (Grok), ಫೇಸ್‌ಬುಕ್‌ನ ಮೆಟಾ ಎಐ ಚಾಟ್‌ಬಾಟ್ ಕೂಡ ಈ ವೈಶಿಷ್ಟ್ಯವನ್ನು ಉಚಿತವಾಗಿ ನೀಡಿತು. ಇದರೊಂದಿಗೆ ಗೂಗಲ್‌ನ ಜೆಮಿನಿ ಕೂಡ ತನ್ನ ಚಂದಾದಾರರಿಗೆ ಈ ವೈಶಿಷ್ಟ್ಯ ನೀಡಲು ಮುಂದಾಯಿತು. ಹೀಗಾಗಿ, ಬಳಕೆದಾರರ ಸಂಖ್ಯೆಯೂ ಹೆಚ್ಚಾಯಿತು. ಜನರಂತೂ ತಮ್ಮದೇ ಸೆಲ್ಫಿ, ಸ್ನೇಹಿತರ ಚಿತ್ರಗಳು, ಕುಟುಂಬಿಕರ, ನಾಯಿ-ಬೆಕ್ಕುಗಳ ಚಿತ್ರಗಳನ್ನೂ ಈ ಶೈಲಿಯಲ್ಲಿ ತಯಾರಿಸಿ, ತಮ್ಮ ಪ್ರೊಫೈಲ್, ಸ್ಟೇಟಸ್‌ಗೆ ಅಳವಡಿಸಿಕೊಳ್ಳುತ್ತಹೋದರು. ಅಷ್ಟೇ ಅಲ್ಲ, ಕೆಲವು ಬ್ರ್ಯಾಂಡ್‌ಗಳು ಜಾಹೀರಾತಿಗಾಗಿಯೂ ಈ ಜೀಬ್ಲೀ ಶೈಲಿಗೆ ಮಾರ್ಪಾಟುಗೊಳಿಸಿದ ಚಿತ್ರಗಳನ್ನು ಬಳಸಿಕೊಳ್ಳತೊಡಗಿದವು. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನ ಅಗಾಧ ಸಾಧ್ಯತೆಗಳ ಕಿರು ಅಂಶವನ್ನು ತೆರೆದಿಟ್ಟಿರುವ ಈ ಟ್ರೆಂಡ್, ಜೀಬ್ಲೀ ಶೈಲಿಯನ್ನೂ ಜನಸಾಮಾನ್ಯರಿಗೂ ಪರಿಚಯಿಸಿದಂತಾಯಿತು.

ಹೇಗೆ ಮಾಡುವುದು?

ತೀರಾ ತೀರಾ ಸುಲಭ. ಚಾಟ್‌ಜಿಪಿಟಿ, ಗ್ರಾಕ್, ಮೇಟಾ ಎಐ ಅಥವಾ ಜೆಮಿನಿ (ಪಾವತಿ) ಚಾಟ್‌ಬಾಟ್‌ಗಳನ್ನು ತೆರೆದು (ಇಮೇಲ್ ಮೂಲಕ ನೋಂದಾಯಿಸಿಕೊಂಡಿರಬೇಕು), ಅದರಲ್ಲಿ 'Convert this image in to Ghibli style art' ಎಂದು 'ಪ್ರಾಂಪ್ಟ್' ಟೈಪ್ ಮಾಡಿ, ನಮ್ಮ ಚಿತ್ರವನ್ನು ಅಲ್ಲೇ ಅಪ್‌ಲೋಡ್ ಮಾಡಿದರಾಯಿತು. ಕೆಲವೇ ಕ್ಷಣಗಳಲ್ಲಿ ಜೀಬ್ಲೀ ಶೈಲಿಗೆ ಪರಿವರ್ತನೆಗೊಂಡ ಆ ಚಿತ್ರವು ಲಭಿಸುತ್ತದೆ. ಏನಾದರೂ ಮಾರ್ಪಾಟುಗಳಿದ್ದರೆ ಅದನ್ನೂ ಚಾಟ್‌ಬಾಟ್‌ಗೆ ಹೇಳಿದರೆ, ಮಾರ್ಪಡಿಸಿದ ಚಿತ್ರವೂ ದೊರೆಯುತ್ತದೆ. ಹಾಗಿದ್ದರೆ, ತಡವೇಕೆ? ನಿಮ್ಮ ಜೀಬ್ಲೀ ಶೈಲಿಯ ಚಿತ್ರ ತಯಾರಿಸಿ, ಹಂಚಿಕೊಂಡು ಖುಷಿ ಪಡಿ.

ಆದರೆ...

ಅಂತರ್ಜಾಲದಲ್ಲಿದ್ದೇವೆ ಎಂದರೆ ನಮ್ಮ ಖಾಸಗಿತನದ ಬಗ್ಗೆ ಚಿಂತಿಸುವುದನ್ನು ಬಿಟ್ಟುಬಿಡಬೇಕು ಎಂಬಷ್ಟರ ಮಟ್ಟಿಗೆ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ನಡೆಯುತ್ತಿವೆ. ಇದುವರೆಗೆ ತಮ್ಮ ಹೆಸರು, ಊರು, ಇಮೇಲ್ ವಿಳಾಸ, ಫೋನ್ ನಂಬರ್ ಮುಂತಾದವನ್ನಷ್ಟೇ ಎಲ್ಲರೂ ಅಂತರ್ಜಾಲದಲ್ಲಿ ಹಂಚಿಕೊಳ್ಳುತ್ತಿದ್ದರು. ಈಗ ತಮ್ಮ ಚಿತ್ರಗಳನ್ನೂ ಈ ಕೃತಕ ಬುದ್ಧಿಮತ್ತೆಯ ದತ್ತಾಂಶ ಸಂಚಯಕ್ಕೆ (ಡೇಟಾಬೇಸ್) ಸೇರಿಸಿದೆವು. ಇದೆಲ್ಲ ತಕ್ಷಣಕ್ಕೆ ರಂಜನೀಯ ಎನಿಸಿದರೂ, ನಮ್ಮ ಮುಖದ ಗುರುತನ್ನು ಪೂರ್ತಿಯಾಗಿ ತಂತ್ರಜ್ಞಾನದ ಕೈಗೆ, ಅವರ ಡೇಟಾಬೇಸ್‌ಗೆ ಒಪ್ಪಿಸಿಬಿಟ್ಟಂತಾಗಿದೆ. ಒಂದು ಕಡೆಯಿಂದ ಪ್ರೈವೆಸಿ ಬಗ್ಗೆ ಧ್ವನಿ ಎತ್ತುತ್ತೇವೆ; ನಾವಾಗಿಯೇ ಪ್ರೈವೆಸಿಯನ್ನು ಬಿಟ್ಟುಕೊಡುತ್ತೇವೆ! ಬೇರೆಯವರನ್ನು ದೂರಿ ಪ್ರಯೋಜನ ಇಲ್ಲ. 'ನಮ್ಮ ಎಐ ಮಾಡೆಲ್‌ಗಳ ತರಬೇತಿಗಾಗಿ, ಬಳಕೆದಾರರು ಒದಗಿಸುವ ವೈಯಕ್ತಿಕ ಮಾಹಿತಿಯನ್ನು ಕಂಪನಿಯು ಸಂಗ್ರಹಿಸುತ್ತದೆ' ಎಂಬ ಪ್ರೈವೆಸಿ ಪಾಲಿಸಿಯಲ್ಲಿರುವ ಅಂಶಗಳನ್ನು ಓದದೆಯೇ ನಮ್ಮ ಖಾಸಗಿ ಮಾಹಿತಿಯನ್ನು ನಾವಾಗಿ ಧಾರೆ ಎರೆದಿರುತ್ತೇವೆ. ಚಿತ್ರದ ಮೂಲಕ ನಮ್ಮ ಮುಖಚಹರೆ, ಬಯೋಮೆಟ್ರಿಕ್ ಮಾಹಿತಿ, ನಮ್ಮ ಮುಖಾಭಿವ್ಯಕ್ತಿ, ಚಿತ್ರ ಸೆರೆಹಿಡಿದ ಸ್ಥಳ, ಅದರ ಪರಿಸರ, ನಿಮ್ಮ ಮಾನಸಿಕ ಭಾವಗಳು ಮುಂತಾದವನ್ನು ನಾವು ಅಂತರ್ಜಾಲಕ್ಕೆ ಕೊಟ್ಟಂತಾಗುತ್ತದೆ. ಹೀಗಾಗಿ, ನಮ್ಮ ಪ್ರೈವೆಸಿ ನಮ್ಮ ಕೈಯಲ್ಲೇ ಇದೆ ಎಂಬ ಎಚ್ಚರಿಕೆ ಅತ್ಯಗತ್ಯ.

ನಡಿಗೆಯಿಂದ ವಿದ್ಯುತ್ ಉತ್ಪಾದನೆ

ಇ.ಎಸ್. ಸುಧೀಂದ್ರ ಪ್ರಸಾದ್

ಜಲ, ಪವನ, ಸೌರಮೂಲಗಳನ್ನು ಹೊರತುಪಡಿಸಿ ಪರಿಸರಕ್ಕೆ ಹಾನಿಯಾಗದೆ ಇತರ ಯಾವ ಮೂಲದಿಂದ ವಿದ್ಯುತ್ ಉತ್ಪಾದನೆ ಸಾಧ್ಯ ಎಂಬ ವಿಷಯದ ಬಗ್ಗೆ ನಿರಂತರ ಚರ್ಚೆ ನಡೆಯುತ್ತಲೇ ಇದೆ. ದೊಡ್ಡ ಟರ್ಬೈನ್, ಶಾಖೋತ್ಪನ್ನ ಕೇಂದ್ರಗಳ ಬೃಹತ್ ಘಟಕ, ಅಪಾಯ ಒಡಲೊಳಗಿಟ್ಟುಕೊಂಡಿರುವ ಪರಮಾಣುಸ್ಥಾವರ, ಬೃಹತ್ ಪಂಕಗಳು ಸದ್ಯ ಬಳಕೆಯಲ್ಲಿವೆ. ಆದರೆ ಇವೆಲ್ಲವುಗಳಿಗಿಂತ ನಡೆದಾಡುವ ಹಾದಿಗಳೇ ವಿದ್ಯುತ್ತನ್ನು ಉತ್ಪಾದಿಸಿದರೆ ಹೇಗೆ?

ಹೀಗೊಂದು ತಂತ್ರಜ್ಞಾನ ಪ್ರಚಲಿತಕ್ಕೆ ಬಂದಿದ್ದು, ಅದನ್ನು ಅಳವಡಿಸಿಕೊಳ್ಳುವಲ್ಲಿ ಜಪಾನ್ ಮುಂದಡಿ ಇಟ್ಟಿದೆ. ಅತ್ಯಂತ ಗಿಜಿಗಿಡುವ ಟೋಕಿಯೊದ ಶಬುಯಾ ರೈಲ್ವೆ ನಿಲ್ದಾಣದಲ್ಲಿ ನಿತ್ಯ ಸಾವಿರಾರು ಜನ ನಡೆದಾಡುತ್ತಾರೆ. ಇಂಥ ಜನದಟ್ಟಣೆ ಪ್ರದೇಶದಲ್ಲಿ ವಿದ್ಯುತ್ತನ್ನು ಉತ್ಪಾದಿಸುವ 'ಪಿಯಾರ್ಝೋ-ಎಲೆಕ್ಟ್ರಿಕ್' ಟೈಲ್ಸ್‌ಗಳನ್ನು ಅಳವಡಿಸಿ, ಇಂಧನ ಸ್ವಾವಲಂಬಿಯನ್ನು ಸಾಧಿಸಲಾಗಿದೆ. ಜತೆಗೆ ನವೀಕರಿಸಬಹುದಾದ ಇಂಧನದ ಹುಡುಕಾಟದಲ್ಲಿ ಹೊಸ ಸಾಧ್ಯತೆಯನ್ನು ಸಾಕಾರಗೊಳಿಸಲಾಗಿದೆ.

2040ರ ಹೊತ್ತಿಗೆ ಜಾಗತಿಕ ವಿದ್ಯುತ್ ಬೇಡಿಕೆ ಶೇ 80ರಷ್ಟು ಹೆಚ್ಚಾಗಲಿದೆ ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆಗಳು ಅಂದಾಜಿಸಿವೆ. ಆದರೆ ಸದ್ಯ ಇರುವ ಯೋಜನೆಗಳ ಮೂಲಕ ವಿದ್ಯುತ್ ಉತ್ಪಾದನಾ ಪ್ರಮಾಣ ಶೇ 33ರಷ್ಟು ಹೆಚ್ಚಾಗಬಹುದು. ಏರುತ್ತಿರುವ ವಿದ್ಯುತ್ ಬೇಡಿಕೆ ಪೂರೈಕೆಗೆ ಮತ್ತು ಸುಸ್ಥಿರ ವಿದ್ಯುತ್ ಉತ್ಪಾದನೆ ನಿಟ್ಟಿನಲ್ಲಿ ನಿರಂತರವಾಗಿ ಸಂಶೋಧನೆಗಳೂ ನಡೆಯುತ್ತಿವೆ. ಇದಕ್ಕೊಂದು ಹೊಸ ಪ್ರವೇಶ ಪಿಯಾರ್ಝೋ-ಎಲೆಕ್ಟ್ರಿಕ್ ನೆಲಹಾಸು ತಂತ್ರಜ್ಞಾನ.

ಕಾರ್ಯವಿಧಾನ

'ಪಿಯಾರ್ಝೋ' ಎಂದರೆ ಒತ್ತಡ ಎಂದರ್ಥ. ಗ್ರೀಕ್‌ನ 'ಪೀಝೀನ್' ಎಂಬ ಪದದಿಂದ ಇದು ಬಂದಿದೆಯೆಂದೂ, ಇದರ ಮೂಲರೂಪ ಸಂಸ್ಕೃತದ 'ಪೀಡಯತಿ' ಎಂಬ ಪದ ಎಂದೂ ತಜ್ಞರು ಅಭಿಪ್ರಾಯಪಡುತ್ತಾರೆ. ಇಂಧನ ಉತ್ಪಾದನೆಯಲ್ಲಿ ಪರಿಸರ ಸಂರಕ್ಷಣೆ ಅಗತ್ಯ ಎಂಬ ಹಕ್ಕೊತ್ತಾಯ ವ್ಯಾಪಕವಾಗುತ್ತಿರುವಂತೆಯೇ ಪರಿಸರ ಸ್ನೇಹಿ ಇಂಧನ ಕೊಯ್ಲು ತಂತ್ರಜ್ಞಾನಗಳ ಅನ್ವೇಷಣೆಯೂ ಭರದಿಂದ ಸಾಗಿದೆ. ಪವನ ಹಾಗೂ ಸೌರ ವಿದ್ಯುತ್ ಕೋಶಗಳಂತೆಯೇ ಪಿಯಾರ್ಝೋ-ಎಲೆಕ್ಟ್ರಿಕ್, ಭರವಸೆ ಮೂಡಿಸಿರುವ ತಂತ್ರಜ್ಞಾನವಾಗಿದೆ.

ಯಾಂತ್ರಿಕ ಒತ್ತಡವನ್ನು ವಿದ್ಯುತ್ ಆಗಿ ಪರಿವರ್ತಿಸಬಲ್ಲ ತಂತ್ರಜ್ಞಾನವೇ ಪಿಯಾರ್ಝೋ-ಎಲೆಕ್ಟ್ರಿಕ್. ನಡೆಯುವಾಗ ನೆಲದ ಮೇಲೆ ಬೀಳುವ ಒತ್ತಡವನ್ನೇ ವಿದ್ಯುತ್ ಆಗಿ ಪರಿವರ್ತಿಸಬಲ್ಲ ತಂತ್ರಜ್ಞಾನ ಇದಾಗಿದೆ. ಈ ತಂತ್ರಜ್ಞಾನ ಆಧಾರಿತ ನೆಲಹಾಸುಗಳ ಮೇಲೆ ನಡೆದಾಗ ಒತ್ತಡ ಸೃಷ್ಟಿಯಾಗುತ್ತದೆ.

ಯಾವಾಗ ನೆಲಹಾಸಿನ ಮೇಲೆ ಹೆಜ್ಜೆಯ ಒತ್ತಡ ಸೃಷ್ಟಿಯಾಗುತ್ತದೋ ಆಗ ಅಲ್ಲಿ ಪಾಸಿಟಿವ್ ಚಾರ್ಜ್ ಸೃಷ್ಟಿಯಾಗುತ್ತದೆ. ಪಾದವು ನೆಲಕ್ಕೆ ತಾಗದೆ ಮೇಲಕ್ಕೆ ಉಬ್ಬಿರುವ ಕಡೆ ನೆಗೆಟಿವ್ ಚಾರ್ಜ್ ಸೃಷ್ಟಿಯಾಗುತ್ತದೆ. ಒಮ್ಮೆ ಒತ್ತಡ ನಿವಾರಣೆಯಾಗುತ್ತಿದ್ದಂತೆ ನೆಲಹಾಸಿನ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಿದ್ಯುತ್ ಪ್ರವಹಿಸಲಾರಂಭಿಸುತ್ತದೆ. ಹೀಗೆ ಇಂಥ ಪಿಯಾರ್ಝೋ-ಎಲೆಕ್ಟ್ರಿಕ್ ಟೈಲ್ಸ್‌ಗಳ ಮೇಲೆ ಸಾವಿರಾರು ಜನ ಓಡಾಡಿದಾಗ ಬಳಕೆಗೆ ಅಗತ್ಯವಿರುವ ವಿದ್ಯುತ್ ಉತ್ಪಾದನೆ ಆಗಲಿದೆ. ಟೋಕಿಯೊದ ಈ ರೈಲು ನಿಲ್ದಾಣದ ಬೃಹತ್ ಎಲ್‌ಇಡಿ ಪರದೆಗಳು, ಮಾಹಿತಿ ಫಲಕಗಳು ಮತ್ತು ಕಡಿಮೆ ಇಂಧನ ಬೇಡುವ ವಿದ್ಯುತ್ ಉಪಕರಣಗಳು ಪಿಯಾರ್ಝೋ-ಎಲೆಕ್ಟ್ರಿಕ್ ತಂತ್ರಜ್ಞಾನದಿಂದಲೇ ಕಾರ್ಯನಿರ್ವಹಿಸುತ್ತಿವೆ.

ಇದು ಈ ನಿಲ್ದಾಣದಲ್ಲಿ ಮಾತ್ರವಲ್ಲ, ಬದಲಿಗೆ ಅತಿ ಹೆಚ್ಚು ಜನ ಓಡಾಡುವ ಶಾಪಿಂಗ್ ಮಾಲ್, ವಿಮಾನ ನಿಲ್ದಾಣಗಳಲ್ಲೂ ಇದೇ ಮಾದರಿಯಲ್ಲಿ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಇದರಿಂದ ಸದ್ಯ ಇರುವ ಸಾಂಪ್ರದಾಯಿಕ ವಿದ್ಯುತ್ ಉತ್ಪಾದನಾ ವಿಧಾನಗಳ ಮೇಲಿನ ಅವಲಂಬನೆಯನ್ನು ತಗ್ಗಿಸುವತ್ತ, ನವೀಕರಿಸಬಹುದಾದ ಇಂಧನ ಉತ್ಪಾದನೆಯತ್ತ ಗಮನ ಹರಿಸಲಾಗುತ್ತಿದೆ.

ಸವಾಲುಗಳು

ನಡೆದಾಡಿದರೆ ವಿದ್ಯುತ್ ಉತ್ಪಾದಿಸುವ ಪಿಯಾರ್ಝೋಎಲೆಕ್ಟ್ರಿಕ್ ನವೀಕರಿಸಬಹುದಾದ ಇಂಧನ ಮೂಲಕ್ಕೆ ಮತ್ತೊಂದು ಕೊಡುಗೆ. ಇದರಿಂದ ನವೀಕರಿಸಲಾಗದ ಇಂಧನ ಮೂಲಗಳ ಮೇಲಿನ ಅವಲಂಬನೆ ತಗ್ಗಲಿರುವುದು ಒಂದು ಲಾಭವೇ ಹೌದು. ಆದರೆ ಈ ಮೂಲದಿಂದ ಉತ್ಪಾದಿಸುವ ವಿದ್ಯುತ್ ಪ್ರಮಾಣ ಕಡಿಮೆ ಇದೆ. ಮತ್ತೊಂದೆಡೆ ಇಂಥ ವಿದ್ಯುತ್ ಉತ್ಪಾದಿಸುವ ನೆಲಹಾಸು ತಯಾರಿಕೆಗೆ ತಗಲುವ ವೆಚ್ಚವೂ ದುಬಾರಿ ಇದೆ.

ಪಿಯಾರ್ಝೋ-ಎಲೆಕ್ಟ್ರಿಕ್ ಮೇಲೆ ಇನ್ನಷ್ಟು ಸಂಶೋಧನೆಗಳು ನಡೆಯಬೇಕಿದ್ದು, ಮುಂದಿನ ದಿನಗಳಲ್ಲಿ ಇದರ ಉತ್ಪಾದನಾ ವೆಚ್ಚವೂ ತಗ್ಗುವ ಸಾಧ್ಯತೆ ಇದೆ. ಭಾರತದಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶದಲ್ಲಿ ಇಂಥದ್ದೊಂದು ತಂತ್ರಜ್ಞಾನ ವಿದ್ಯುತ್ ಸ್ವಾವಲಂಬಿತನದೊಂದಿಗೆ, ಲಾಭವನ್ನೂ ತಂದುಕೊಡಬಹುದು ಎನ್ನುವುದು ತಜ್ಞರ ಅಂದಾಜು.



ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

PUC CET BIOLOGY

28. Which of the following hormones are secreted in large quantities during pregnancy in women?
(a) hCG, progesterone, estradiol and FSH
(b) hCG, hPL, progesterone, estrogen and LH
(c) LH, estrogen and estradiol
(d) hCG and hPL
Ans:b
Expl:- During the pregnancy placenta acts as an endocrine tissue and produces several hormones such as hCG (human Chorionic Gonadotropin), hPL (human Placental Lactogen), progestone, oestrogen, LH (Leuteinising Hormone), etc.

In the later phase of pregnancy, a hormone called relaxin is also secreted by the ovary.

29. The kind of coelom represented in the diagram given below is characteristic of



(a) Earthworm (b) cockroach
(c) Roundworm (d) tapeworm
Ans:C
Expl:- The coelom given in the diagram is of an animal roundworm (Ascaris) which belongs to the phylum-Aschelminthes. The body cavity in the diagram is not lined by mesoderm instead; the mesoderm is present in the form of scattered pouches in between the ectoderm and endoderm. Such a body cavity is called pseudocoelom and the animals possessing these cavities are called pseudcoelomates.

30. Injection of an antidote against a snakebite is an example of
a) auto immunity
b) innate immunity
c) active immunity
d) passive immunity
Ans: (d)
Expln:- The ability of the body to fight against the pathogen is called immunity.

The immunity which is developed after the direct exposure to the pathogen or antigen is called active immunity. In this immunity, a person's own cells produce antibodies in response to infection.

The immunity gained by an organism through vaccines or antidotes is known as passive immunity. In this type of immunity, there will be no exposure to the pathogen directly. Ready-made antibodies are directly injected into a person to protect the body against foreign agents such as the snake poison. Thus, injection of an antidote of a snake is an example of passive immunity.

When the immune system recognizes the body cells as a foreign substance and attacks one's own healthy body cells, such immunity is known as autoimmunity. The immunity that is present since the time of birth is called innate immunity. This type of immunity is inherited from the parents and protects the individual throughout his life.

31. Fossils are generally found in
a) Sedimentary rocks b) Igneous rocks
c) Metamorphic rocks d) Any type of rock
Ans:- a

32. For the MN-blood group system, the frequencies of M and N alleles are 0.7 and 0.3, respectively. The expected frequency of MN-blood group bearing organisms is likely to be
a) 42% b) 49%
c) 9% d) 58%
Ans:- a

33. Which type of selection is industrial melanism observed in moth, Biston bitularia –
a) stabilising b) directional
c) disruptive d) Artificial
Ans:- b

34. Certain tumours are called malignant, because
a) they are not neoplastic
b) they are confined to specific locations
c) they invade and damage surrounding tissues
d) they show contact inhibition
Ans: (c)
Expln:- The uncontrolled growth of cells is called tumour or neoplasm. Tumours are considered to be either malignant or benign. Those tumours that are stagnant at one part of the body and do not spread are called benign tumours. But certain tumours invade and damage the surrounding tissues. Such tumours are known as malignant tumours. Only malignant tumours are properly designated as cancerous. Normal cells show a property called contact inhibition. Due to this property, when they are in contact with other cells the cell proliferation ceases. Cancer cells do not show the property of contact inhibition. A phenomenon in which the cancerous cells spread to distant sites in the body is called metastasis.

35. The most accepted line of descent in human evolution is-
a) Australopithecus → Ramapithecus → Homo sapiens → homohabilis
b) Homo erectus→ homohabilis → Homo sapiens
c) Ramapithecus→homohabilis→Homo erectus → Homo sapiens
d) Australopithecus→Ramapithecus→Homo erectus → homohabilis → Homo sapiens
Ans:- c

36. Which of the following is an example for link species –
a) Lobe fish b) Dodo bird
c) Sea weed d) Tyrannosaurus rex
Ans:- a

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

NEET CHEMISTRY

8) One dm^3 solution containing 10^{-5} moles each of Cl^- ions and CrO_4^{-2} ions is treated with 10^{-4} mole of silver nitrate. Which one of the following observations is made?

$$[K_{SP}\ Ag_2CrO_4 = 4\times10^{-12}]$$
$$[K_{SP}\ AgCl = 1\times10^{-10}]$$

a) Silver chromate gets precipitated first
b) Precipitation does not occur
c) Both silver chromate and silver chloride starts precipitating simultaneously
d) Silver chloride gets precipitated first
Ans:- d;

9) The correct statement is ....
a) cyclohexadiene and cyclohexene cannot be isolated with ease during controlled hydrogenation of benzene
b) One mole each of benzene and hydrogen when reacted gives 1/3 mole of cyclohexene and 2/3 mole unreacted hydrogen
c) Hydrogenation of benzene to cyclohexene is an endothermic process
d) It is essier to hydrogenate benzene when compared to cyclohexene to cyclohexene.
Ans:-(a)
Expln:-during the hydrogenation of benzene, only cyclohexene can be isolated.



10)
For the reaction $2A \rightleftharpoons B + C$, $K_c = 4\times10^{-3}$. At a given time, the composition of reaction mixture is: $[A] = [B] = [C] = 2\times10^{-3}$ M.
Then, which of the following is correct?
(a) Reaction is at equilibrium.
(b) Reaction has a tendency to go in forward direction.
(c) Reaction has a tendency to go in backward direction.
(d) Reaction has gone to completion in forward direction.
Ans: (c)
Expln:-
$2A \rightleftharpoons B + C$, $K_c = 4\times10^{-3}$
At a given time t, Q_c is to be calculated and been compared with K_c.

$$Q_c = \frac{[B][C]}{[A]^2} = \frac{(2\times10^{-3})(2\times10^{-3})}{(2\times10^{-3})^2}$$

$Q_c = 1$
As $Q_c > K_c$, so reaction has a tendency to move backward.

11) Which one of the following statements is FALSE?
a) The ore is freed from almost all nonmetallic impurities
b) During roasting, moisture is removed from the ore
c) The concentrated zinz blende is subjected to calcinations during its extraction by pyrometallurgy
d) Calcination of ore is carried out in the absence of any blast of air.
Ans:- c;

12) Cryolite is...................
(a) Na_3A/F_6 and is used in the electrolysis of alumina for lowering the melting point of alumina only
(b) Na_3A/F_6 and is used in the electrolytic refining of alumina
(c) Na_3A/F_6 and is used in the electrolysis of alumina for decreasing electrical conductivity
(d) Na_3A/F_6 and is used in the electrolysis of alumina for lowering the melting point and increasing the conductivity of alumina.
Ans: (D) Na_3A/F_6 and is used in the electrolysis of alumina for lowering the melting point and increasing the conductivity of alumina.

13)
Match List I with List II.

	List-I (Process)		List-II (Conditions)
A.	Isothermal process	I.	No heat exchange
B.	Isochoric process	II.	Carried out at constant temperature
C.	Isobaric process	III.	Carried out at constant volume
D.	Adiabatic process	IV.	Carried out at constant pressure

Choose the correct answer from the options given below:
(a) A-IV, B-III, C-II, D-I
(b) A-IV, B-II, C-III, D-I
(c) A-I, B-II, C-III, D-IV
(d) A-II, B-III, C-IV, D-I
Ans:- (d)
Expln:
(A) Isothermal process ⇒ Temperature is constant throughout the process
(B) Isochoric process ⇒ Volume is constant throughout the process
(C) Isobaric process ⇒ Pressure is constant throughout the process
(D) Adiabatic process ⇒ No exchange of heat (q) between system and surrounding

14) Terylene is NOT a ....
a) Copolymer b) Polyester fiber
c) Chain growth polymer
d) Step growth polymer
Ans:- c; Chain growth polymer.

15) What amount of dioxygen (in gram) contains 1.8×10^{22} molecules?
(a) 0.960 (b) 96.0
(c) 0.0960 (d) 9.60
Ans: (a) 0.960
Expln:-6.022×10^{23} molecules are present in 32g.
$\therefore 1.8\times10^{22}$ molecules are present in

$$\frac{1.8\times10^{22}\times32}{6.022\times10^{23}} = 0.960.$$

(Contd.......)

₹2.50 ಲಕ್ಷ ಖರ್ಚು; ವಿದ್ಯಾರ್ಥಿಗಳಿಗೆ ಈದ್ ಕೊಡುಗೆ ನೀಡಿದ ಹೀನಾ ತಬಸುಮ್, ರಜಿಯಾ

ಶಿಕ್ಷಕಿಯರಿಂದ ಶಾಲೆಗೆ ಬೋರ್‌ವೆಲ್

• ಜೋಸೆಫ್.ಎಂ

ಕೊಳವೆಬಾವಿ ಕೊರೆಯುವ ಸ್ಥಳದಲ್ಲಿ ಶಿಕ್ಷಕಿಯರು, ವಿದ್ಯಾರ್ಥಿಗಳು ಪೂಜೆ ಸಲ್ಲಿಸಿದರು



ಆಲ್ದೂರು (ಚಿಕ್ಕಮಗಳೂರು): ಸಮೀಪದ ಮಾಚಗೊಂಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯರಾದ ಹೀನಾ ತಬಸುಮ್ ಮತ್ತು ರಜಿಯಾ ಸುಲ್ತಾನ ಅವರು ತಮ್ಮ ಸ್ವಂತ ಹಣ ₹2.50 ಲಕ್ಷ ಖರ್ಚು ಮಾಡಿ, ಕೊಳವೆಬಾವಿ ಕೊರೆಯಿಸುವ ಮೂಲಕ ಶಾಲೆಯ ವಿದ್ಯಾರ್ಥಿಗಳು ಎದುರಿಸುತ್ತಿದ್ದ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದಾರೆ.

ಈ ಶಾಲೆಯಲ್ಲಿ ಎಲ್‌ಕೆಜಿಯಿಂದ 7ನೇ ತರಗತಿಯವರೆಗೆ ಒಟ್ಟು 250 ವಿದ್ಯಾರ್ಥಿಗಳಿದ್ದಾರೆ. ಗ್ರಾಮ ಪಂಚಾಯಿತಿಯಿಂದ ಮೂರು ದಿನಗಳಿಗೊಮ್ಮೆ ಶಾಲೆಗೆ ಕುಡಿಯುವ ನೀರು ಪೂರೈಕೆ ಆಗುತ್ತಿದೆ. ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ವಿದ್ಯಾರ್ಥಿಗಳು, ಅಡುಗೆ ಸಿಬ್ಬಂದಿ, ಶಿಕ್ಷಕರು ತೊಂದರೆ ಅನುಭವಿಸುತ್ತಿದ್ದರು. ಶಾಲೆಯ ಬಿಸಿಯೂಟ, ಶೌಚಾಲಯ ಬಳಕೆಗೂ ನೀರಿಲ್ಲದೆ ತೊಂದರೆ ಆಗಿತ್ತು.

ಇದನ್ನು ಮನಗಂಡ ಶಿಕ್ಷಕಿಯರು ಕೊಳವೆಬಾವಿ ಕೊರೆಯಿಸಲು ಮುಂದೆ ಬಂದರು.

'ರಂಜಾನ್ ಮಾಸದಲ್ಲಿ ಸಮಾಜಮುಖಿ ಕಾರ್ಯಗಳನ್ನು ಮಾಡುವುದು ವಾಡಿಕೆ. ಈ ಶಾಲೆಯಲ್ಲಿ ಕಾರ್ಯನಿರ್ವಹಿಸಲು ತೊಡಗಿ 25 ವರ್ಷಗಳು ಕಳೆದಿವೆ. ಇಲ್ಲಿಂದ ವರ್ಗಾವಣೆಯಾಗುವ ಮುನ್ನ ಮಕ್ಕಳಿಗಾಗಿ ಕೊಡುಗೆ ನೀಡೋಣ ಎಂದು ಚಿಂತಿಸಿದೆ. ಕಳೆದ ವರ್ಷ ಈ ಶಾಲೆಗೆ ಶಿಕ್ಷಕಿಯಾಗಿ ವರ್ಗವಾಗಿ ಸೇರಿಕೊಂಡ ನನ್ನ ಸಹೋದ್ಯೋಗಿ ರಜಿಯಾ ಸುಲ್ತಾನ ಅವರೊಂದಿಗೆ ಚರ್ಚಿಸಿದೆ. ಎರಡೂ ಕುಟುಂಬದ ಸದಸ್ಯರ ಒಪ್ಪಿಗೆ ಪಡೆದು ಕೊಳವೆಬಾವಿ ಕೊರೆಯಿಸಿದೆವು' ಎಂದು ಶಿಕ್ಷಕಿ ಹೀನಾ ತಬಸುಮ್ ಹೇಳಿದರು.

'ಕೊಳವೆಬಾವಿ ಕೊರೆಯಿಸಲು ಗುರುತಿಸಿದ ಎರಡು ಪಾಯಿಂಟ್‌ಗಳು ವಿಫಲವಾದವು. ಮೂರನೆಯ ಪಾಯಿಂಟ್‌ನಲ್ಲಿ ಒಂದು ಇಂಚು ನೀರು ಲಭಿಸಿದೆ. ಸುಮಾರು ₹2 ಲಕ್ಷ ಖರ್ಚಾಗಿದೆ. ಮೋಟರ್ ಅಳವಡಿಕೆಗೆ ₹50 ಸಾವಿರ ವ್ಯಯವಾಗಿದೆ. ಶಾಲೆಯ ಮಕ್ಕಳ ಭವಿಷ್ಯಕ್ಕಾಗಿ ಚಿಂತಿಸುವ ಇಂತಹ ಶಿಕ್ಷಕರು ಸಿಗುವುದು ಅಪರೂಪ' ಎಂದು ಶಾಲೆಯ ಹಳೆಯ ವಿದ್ಯಾರ್ಥಿ ಹಾಗೂ ಎಸ್‌ಡಿಎಂಸಿ ಸದಸ್ಯ ಅಣ್ಣಪ್ಪ ಸಂತಸ ವ್ಯಕ್ತಪಡಿಸಿದರು.

'ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಹಲವು ಬಾರಿ ಸಕ್ಷಮರಿಗೆ, ಗ್ರಾಮ ಪಂಚಾಯಿತಿಗೆ ಮನವಿ ಮಾಡಿದರೂ ಯಾವುದೇ ಸ್ಪಂದನೆ ಲಭಿಸಿಲ್ಲ. ಶಿಕ್ಷಕಿಯರು ಮಕ್ಕಳ ಸಂಕಷ್ಟವನ್ನು ಅರಿತು ಕೊಳವೆಬಾವಿ ಕೊರೆಯಿಸಿರುವುದು ಬಹುದೊಡ್ಡ ಕಾರ್ಯ' ಎಂದು ಎಸ್‌ಡಿಎಂಸಿ ಅಧ್ಯಕ್ಷ ಲೋಕೇಶ್ ಎಸ್. ಹೇಳಿದರು.

ಮಾಹಿತಿ ವಿಳಂಬ: ಪಾಂಡವಪುರ ತಹಶೀಲ್ದಾರ್‌ಗೆ ₹25 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಎಸ್.ಸಂತೋಷ್

ಪಾಂಡವಪುರ (ಮಂಡ್ಯ ಜಿಲ್ಲೆ): ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿಗೆ ಮಾಹಿತಿ ಒದಗಿಸದೆ ವಿಳಂಬ ಮಾಡಿದ ಪಾಂಡವಪುರದ ತಹಶೀಲ್ದಾರ್ ಎಸ್. ಸಂತೋಷ್ ಅವರಿಗೆ ಕರ್ನಾಟಕ ಮಾಹಿತಿ ಆಯೋಗ ₹25ಸಾವಿರ ದಂಡ ವಿಧಿಸಿದೆ.

ದಂಡದ ಮೊತ್ತವನ್ನು ಏಕ ಕಂತಿನಲ್ಲಿ ಮುಂದಿನ ತಿಂಗಳ ಸಂಬಳದಲ್ಲಿ ಕಟಾಯಿಸಿ ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮಾ ಮಾಡಿ, ಅದಕ್ಕೆ ಸಂಬಂಧಿಸಿದ ರಶೀದಿಯೊಂದಿಗೆ ವರದಿ ಸಲ್ಲಿಸಲು ಪಾಂಡವಪುರ ಉಪ ವಿಭಾಗಾಧಿಕಾರಿ ಕೆ.ಆರ್. ಶ್ರೀನಿವಾಸ್ ಆಯೋಗ ನಿರ್ದೇಶಿಸಿದೆ. ತಪ್ಪಿದಲ್ಲಿ ನಾಗರಿಕ ಸೇವಾ ನಿಯಮಗಳ ಪ್ರಕಾರ ಶಿಸ್ತುಕ್ರಮಕ್ಕೆ ಶಿಫಾರಸು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಮಾಹಿತಿ ಒದಗಿಸಲು 240ಕ್ಕೂ ಹೆಚ್ಚು ದಿನ ವಿಳಂಬ ಆಗಿರುವುದರಿಂದ ಗಂಭೀರವಾಗಿ ಪರಿಗಣಿಸಿರುವ ಆಯೋಗವು ಅರ್ಜಿದಾರರಾದ ಎಲ್.ಎಂ. ಚಂದ್ರು ಅವರು ಅನುಭವಿಸಿರುವ ಕಷ್ಟ, ಇತರ ವೆಚ್ಚಗಳಿಗಾಗಿ ₹10ಸಾವಿರ ಪರಿಹಾರ ನೀಡುವಂತೆಯೂ ಆದೇಶಿಸಿದೆ. ಈ ಪರಿಹಾರ ಮೊತ್ತವನ್ನು 15 ದಿನಗಳೊಳಗೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಕ್ರಾಸ್ ಮಾಡಿದ ಡಿಡಿ ಪಡೆದು ಮೇಲ್ಮನವಿದಾರರಿಗೆ ನೀಡುವಂತೆ ಅಂಚೆ ಸ್ವೀಕೃತಿ ಮೂಲಕ ಕಳುಹಿಸುವಂತೆ ತಹಶೀಲ್ದಾರ್ ಸಂತೋಷ್ ಅವರಿಗೆ ಸೂಚಿಸಿದೆ.

ಮೇಲ್ಮನವಿದಾರರಿಗೆ ಮಾಹಿತಿ ಒದಗಿಸಿರುವ ಬಗ್ಗೆ ಆಯೋಗಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ವಿಚಾರಣೆಗೆ ಸತತವಾಗಿ ಗೈರುಹಾಜರಾಗಿ ಪ್ರಕರಣದ ಶೀಘ್ರ ವಿಲೇವಾರಿಗೆ ಅಡ್ಡಿಪಡಿಸುತ್ತಿರುವುದಕ್ಕಾಗಿ ಮಾಹಿತಿ ಹಕ್ಕು ಅಧಿನಿಯಮದ ಪ್ರಕಾರ ಏಕೆ ಕ್ರಮಕ್ಕೆ ಶಿಫಾರಸು ಮಾಡಬಾರದು ಎಂಬ ಬಗ್ಗೆ ಕಾರಣ ಕೇಳಿದೆ. ಲಿಖಿತ ಸಮಜಾಯಿಷಿಯನ್ನು ಮುಂದಿನ ವಿಚಾರಣೆ ದಿನದಂದು ಸಲ್ಲಿಸುವಂತೆಯೂ ತಹಶೀಲ್ದಾರ್‌ಗೆ ನಿರ್ದೇಶಿಸಿದೆ. ಪ್ರಕರಣದ ವಿಚಾರಣೆ (ಏ.9ರಂದು ಬೆಳಿಗ್ಗೆ 11ಕ್ಕೆ) ಖುದ್ದು ಹಾಜರಾಗುವಂತೆಯೂ ಸೂಚಿಸಿದೆ.

ತಹಶೀಲ್ದಾರ್ ಪ್ರತಿಕ್ರಿಯೆ: 'ಮಾರ್ಚ್ 19ರಂದು ಪಾಂಡವಪುರದಲ್ಲಿ ಅಕ್ರಮ-ಸಕ್ರಮ ಸಮಿತಿ ಸಭೆ ಇದ್ದ ಕಾರಣ ವಿಚಾರಣೆಗೆ ಹಾಜರಾಗಲು ಸಾಧ್ಯವಾಗಿರಲಿಲ್ಲ. ಅರ್ಜಿದಾರರಿಗೆ ಮಾರ್ಚ್ 21ರಂದು ಮಾಹಿತಿಯನ್ನು ನೀಡಲಾಗಿದೆ. ಮಾರ್ಚ್ 26ರಂದು ಪ್ರಕರಣದ ವಿಚಾರಣೆ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲದ ಕಾರಣ ಹಾಜರಾಗಲು ಸಾಧ್ಯವಾಗಿಲ್ಲ' ಎಂದು ತಹಶೀಲ್ದಾರ್ ಎಸ್. ಸಂತೋಷ್ ಮಾಹಿತಿ ಆಯೋಗಕ್ಕೆ ಪತ್ರ ಬರೆದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೃಷ್ಣೆ–ಭೀಮೆಗೆ ನೀರು: ಸಿ.ಎಂ ಪತ್ರ

ಬೆಂಗಳೂರು: ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ 2 ಟಿಎಂಸಿ ಅಡಿ ಮತ್ತು ಉಜ್ಜಯಿನಿ ಜಲಾಶಯದಿಂದ ಭೀಮಾ ನದಿಗೆ 1 ಟಿಎಂಸಿ ಅಡಿ ನೀರನ್ನು ಬಿಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಗೆ ಪತ್ರ ಬರೆದಿದ್ದಾರೆ.

'ಕರ್ನಾಟಕದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳು ಈ ವರ್ಷದ ಆರಂಭದಿಂದ ಕುಡಿಯುವ ನೀರಿನ ಅಭಾವ ಎದುರಿಸುತ್ತಿವೆ. ಈ ಹಿಂದೆಯೂ ಹಲವು ಬಾರಿ ಬೇಸಿಗೆ ವೇಳೆಯಲ್ಲಿ ಉತ್ತರ ಕರ್ನಾಟಕದ ಜನರ ಸಂಕಷ್ಟಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ನೀರು ಕೊಟ್ಟು ಜನ– ಜಾನುವಾರುಗಳ ಸಂಕಷ್ಟಕ್ಕೆ ಧಾವಿಸಿದ್ದೀರಿ' ಎಂದು ಸಿದ್ದರಾಮಯ್ಯ ಪತ್ರದಲ್ಲಿ ತಿಳಿಸಿದ್ದಾರೆ.

ವಿದ್ಯುತ್ ತಂತಿ ತಗುಲಿ ಆನೆ ಸಾವು

ತರೀಕೆರೆ (ಚಿಕ್ಕಮಗಳೂರು): ತಾಲ್ಲೂಕಿನ ಲಿಂಗದಹಳ್ಳಿ ಹೋಬಳಿಯ ತಣಿಗೆಬೈಲು ವ್ಯಾಪ್ತಿಯಲ್ಲಿ ವಿದ್ಯುತ್ ತಂತಿ ತಗುಲಿ 35 ವರ್ಷದ ಗಂಡಾನೆ ಮೃತಪಟ್ಟಿದೆ.

ಸಂಧ್ಯಾ ಕಾಫಿ ತೋಟದ ಮೂಲಕ ನಂದಿಗಾವೆ ದಂಡುಬಿಟ್ಟಹಾರ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಳವಡಿಸಿದ್ದ ವಿದ್ಯುತ್ ತಂತಿಗೆ ಮಂಗಳವಾರ ಬೆಳಿಗ್ಗೆ ಆನೆಯ ಸೊಂಡಿಲು ತಗುಲಿ ಈ ದುರಂತ ಸಂಭವಿಸಿದೆ.

ಸಂಧ್ಯಾ ಕಾಫಿ ತೋಟದಲ್ಲಿದ್ದ ಹಲಸಿನ ಮರದ ಹಣ್ಣುಗಳನ್ನು ತಿನ್ನಲು ಮರದ ಬಳಿಗೆ ಬಂದಿದ್ದ ಆನೆಗೆ ಪಕ್ಕದಲ್ಲೇ ಇದ್ದ ವಿದ್ಯುತ್ ತಂತಿ ಸ್ಪರ್ಶಿಸಿದೆ ಎಂದು ಮೂಲಗಳು ತಿಳಿಸಿವೆ.

ಮೈದಾನಕ್ಕೆ ಬೇಲಿ; ಪರಸ್ಪರ ವಾಗ್ವಾದ

ಪ್ರಜಾವಾಣಿ ವಾರ್ತೆ

ಧರಣಿ ನಿರತರ ಜೊತೆಗೆ ಎಸ್‌ಪಿ ಜಿ.ಕೆ.ಮಿಥುನ್‌ಕುಮಾರ್ ಮಾತನಾಡಿದರು

ಶಿವಮೊಗ್ಗ: ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರಿನ ಈದ್ಗಾ ಮೈದಾನಕ್ಕೆ ವಕ್ಫ್ ಆಸ್ತಿ ಹೆಸರಲ್ಲಿ ಮಂಗಳವಾರ ದಿಢೀರ್ ಬೇಲಿ ಹಾಕಿರುವುದು ವಾಗ್ವಾದಕ್ಕೆ ಕಾರಣವಾಯಿತು. ಈ ವೇಳೆ ಬಿಗುವಿನ ಸ್ಥಿತಿ ಮೂಡಿದ್ದು, ಪೊಲೀಸರು ಮಧ್ಯ ಪ್ರವೇಶಿಸಿ ಶಮನಗೊಳಿಸಿದರು.

ಈದ್ಗಾದಲ್ಲಿ 'ಈದ್–ಉಲ್–ಫಿತ್ರ್' ನಿಮಿತ್ತ ಪ್ರಾರ್ಥನೆಗೆ ಸೋಮವಾರ ಅವಕಾಶ ಕಲ್ಪಿಸಿದ್ದು, ಮಾರನೇ ದಿನವೇ ಮೈದಾನಕ್ಕೆ ತೆರಳುವ ಮುಖ್ಯ ದ್ವಾರದಲ್ಲಿ 10 ಅಡಿ ಎತ್ತರದ ಬೇಲಿ ಹಾಕಲಾಗಿದೆ.

ಮೈದಾನದ ಸುತ್ತಲಿನ ಮಳಿಗೆಗಳು ಹಾಗೂ ಜಿಲ್ಲಾಧಿಕಾರಿ ಕಚೇರಿಗೆ ಬರುವವರು ಇಲ್ಲಿ ವಾಹನಗಳ ನಿಲುಗಡೆ ಮಾಡುತ್ತಾರೆ. ವಾಹನ ನಿಲುಗಡೆಗೆ ಸ್ಥಳವಿಲ್ಲದೆ, ಬೇಲಿ ತೆರವಿಗೆ ಸ್ಥಳೀಯರು ಪಟ್ಟುಹಿಡಿದರು.

ಸ್ಥಳಕ್ಕೆ ಬಂದ ವಿಶ್ವ ಹಿಂದೂ ಪರಿಷತ್ ಹಾಗೂ ಬಿಜೆಪಿ ಮುಖಂಡರು, 'ಇದು ಮಹಾನಗರ ಪಾಲಿಕೆಗೆ ಸೇರಿದ ಜಾಗ. ಇಲ್ಲಿ ಮುಸ್ಲಿಮರಿಗೆ ಪ್ರಾರ್ಥನೆಗೆ ಅವಕಾಶ ಮಾಡಿಕೊಡಲಾಗಿತ್ತು. ಈಗ ಪಾಲಿಕೆಯ ಅನುಮತಿ ಪಡೆಯದೇ ಬೇಲಿ ಹಾಕಲಾಗಿದ್ದು, ತೆರವುಗೊಳಿಸಿ' ಎಂದು ಒತ್ತಾಯಿಸಿದರು.

'ಇದು ವಕ್ಫ್‌ನ ಜಾಗ. ಪ್ರಾರ್ಥನೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಇಲ್ಲಿ ನಡೆಸುತ್ತೇವೆ. ವಾಹನಗಳ ನಿಲುಗಡೆಗೆ ಅವಕಾಶವಿಲ್ಲ. ಕಾನೂನು-ಬದ್ಧವಾಗಿ ಜಾಗ ಭದ್ರಪಡಿಸಿಕೊಂಡಿದ್ದೇವೆ' ಎಂದು ಮೈದಾನ ಸಮಿತಿಯವರು ಹೇಳಿದರು.

ಈ ಹಂತದಲ್ಲಿ ಉದ್ವಿಗ್ನ ಸ್ಥಿತಿ ಉಂಟಾಯಿತು. ಪೊಲೀಸರು ಮಧ್ಯ ಪ್ರವೇಶಿಸಿದರು. 'ಬೇಲಿ ಹಾಕಿದವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಬೇಲಿ ತೆಗೆಸಿ' ಎಂದು ಸ್ಥಳದಲ್ಲಿದ್ದವರು ಧರಣಿ ಕುಳಿತರು. ಎಸ್.ಪಿ ಜಿ.ಕೆ. ಮಿಥುನ್‌ಕುಮಾರ್ ಸ್ಥಳಕ್ಕೆ ಬಂದು ಅಹವಾಲು ಆಲಿಸಿದರು.

'ಮಾಲೀಕತ್ವ ಕುರಿತು ಪಾಲಿಕೆ ಅಧಿಕಾರಿಗಳ ಜೊತೆ ಚರ್ಚಿಸಿ ವಾಸ್ತವ ಸ್ಥಿತಿ ತಿಳಿಯಬೇಕು. ಅದಕ್ಕೆ ಸಮಯಬೇಕು. ಧರಣಿ ಹಿಂಪಡೆಯಿರಿ' ಎಂಬ ಎಸ್‌ಪಿ ಮನವಿಗೆ ಸ್ಪಂದಿಸಿ ಧರಣಿ ಕೈಬಿಡಲಾಯಿತು.

ಪೊಲೀಸರು ಸಂಜೆ ಬೇಲಿ ತೆರವುಗೊಳಿಸಿ, ಬ್ಯಾರಿಕೇಡ್ ಅಳವಡಿಸಿದರು. ವಿಎಚ್‌ಪಿ ಪ್ರಮುಖರಾದ ರಮೇಶ್ ಜಾಧವ್, ಸುರೇಶ್ ಬಾಬು, ಬಿಜೆಪಿಯ ಮೋಹನ್‌ರೆಡ್ಡಿ, ದೀನ್‌ದಯಾಳ್, ಶಿವಾನಂದ, ಕಿರಣ್ ಇದ್ದರು.

ಶಿವಕುಮಾರ ಸ್ವಾಮೀಜಿಗೆ ಭಕ್ತರ ನಮನ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದಲ್ಲಿ ಮಂಗಳವಾರ ತ್ರಿವಿಧ ದಾಸೋಹಿ ಶಿವಕುಮಾರ ಸ್ವಾಮೀಜಿಗೆ ನಾಡಿನ ಮೂಲೆ, ಮೂಲೆಗಳಿಂದ ಬಂದಿದ್ದ ಅಪಾರ ಸಂಖ್ಯೆಯ ಭಕ್ತಗಣ ಗುರು ನಮನ ಸಲ್ಲಿಸಿತು.

ಅನ್ನ, ಅಕ್ಷರ ಹಾಗೂ ಆಶ್ರಯ ನೀಡಿದ ಗುರುವಿಗೆ ನಮಿಸಲು ಈ ಬಾರಿಯೂ ನಾಡಿನ ವಿವಿಧೆಡೆಗಳಿಂದ ಸಾಕಷ್ಟು ಸಂಖ್ಯೆಯ ಭಕ್ತರು ಬಂದಿದ್ದರು.

ಪ್ರತಿ ವರ್ಷವೂ ಏ.1ರಂದು ಸ್ವಾಮೀಜಿ ಜಯಂತಿಯನ್ನು ಸಿದ್ಧಗಂಗಾ ಮಠದಲ್ಲಿ ಭಕ್ತಿ, ಭಾವದಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಸ್ವಾಮೀಜಿ 118ನೇ ಜಯಂತಿ ಹಾಗೂ ಗುರುವಂದನಾ ಮಹೋತ್ಸವಕ್ಕೆ ಈ ಬಾರಿಯೂ ಸಹಸ್ರಾರು ಭಕ್ತರು ಮತ್ತು ಶಿಷ್ಯರು ಸಾಕ್ಷಿಯಾದರು.

ಶಿವಕುಮಾರ ಸ್ವಾಮೀಜಿ ಗದ್ದುಗೆಯಲ್ಲಿ ಮುಂಜಾನೆಯಿಂದಲೇ ವಿವಿಧ ಧಾರ್ಮಿಕ ಕಾರ್ಯ ನೆರವೇರಿದವು.

ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಮೊದಲಿಗೆ ತಮ್ಮ ಗುರುವಿಗೆ ಪೂಜೆ ಸಲ್ಲಿಸುವ ಮೂಲಕ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಇಡೀ ದಿನ ತಂಡೋಪತಂಡವಾಗಿ ಮಠಕ್ಕೆ ಬಂದ ಭಕ್ತರು ಮೊದಲಿಗೆ ಸ್ವಾಮೀಜಿ ಗದ್ದುಗೆಗೆ ತೆರಳಿ ನಮಿಸಿ, ಪೂಜೆ ಸಲ್ಲಿಸಿ ನಂತರ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡರು.

ಮಠದ ಆವರಣದಲ್ಲಿ ಶಿವಕುಮಾರ ಸ್ವಾಮೀಜಿ ಮೂರ್ತಿಯ ಮೆರವಣಿಗೆ ನಡೆಯಿತು. ಭಕ್ತರು ಮೂರ್ತಿ ಹೊರಲು ಹೆಗಲಾದರು. ಮೆರವಣಿಗೆ ಸಂದರ್ಭದಲ್ಲಿ ಸ್ವಾಮೀಜಿ ನಾಮಸ್ಮರಣೆ, ಜೈಕಾರ ಮೊಳಗಿದವು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು 118 ದೀಪಗಳನ್ನು ಬೆಳಗಿಸುವ ಮೂಲಕ ಶಿವಕುಮಾರ ಸ್ವಾಮೀಜಿ ಜಯಂತಿಗೆ ಚಾಲನೆ ನೀಡಿದರು. ಸಚಿವರು ತಮ್ಮ ಮಾತಿನುದ್ದಕ್ಕೂ ಸ್ವಾಮೀಜಿ, ದೇಶದ ಸಂಸ್ಕೃತಿ, ಗುರು ಪರಂಪರೆ, ಸಾಧಕರನ್ನು ಸ್ಮರಿಸಿದರು.

ಶಿವಕುಮಾರ ಸ್ವಾಮೀಜಿ ಅವರಂತಹ ಸಂತರಿಂದ ನಮ್ಮ ಪರಂಪರೆ ಉಳಿದಿದೆ. ಸಂತರಿಂದ ಸಂಸ್ಕೃತಿ ರಕ್ಷಣೆಯಾಗುತ್ತಿದೆ. ಮಠಾಧೀಶರು, ಸಾಧು, ಸಂತರು ಸಮಾಜಕ್ಕಾಗಿ, ಮನುಕುಲದ ಒಳಿತಿಗಾಗಿ ತಮ್ಮ ಜೀವನ ಮುಡಿಪಾಗಿಟ್ಟಿದ್ದಾರೆ. ಸಿದ್ಧಗಂಗಾ ಮಠದಲ್ಲಿ ಜಾತಿ, ಧರ್ಮವನ್ನು ಮೀರಿ ಸಾವಿರಾರು ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡಲಾಗಿದೆ. ಇದೊಂದು ಮಹತ್ತರವಾದ ಕಾರ್ಯ ಎಂದು ಹೇಳಿದರು.

'ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳಿಂದಾಗಿ ಈಗ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಭಾರತದ ಮಾತು ನಡೆಯುತ್ತಿದೆ. ಹಿಂದೆ ನಮ್ಮ ಮಾತುಗಳನ್ನು ಯಾರೂ ಕೇಳುತ್ತಿರಲಿಲ್ಲ. ಈಗ ವಿದೇಶಿಗರು ಕಿವಿ ತೆರೆದು ನಮ್ಮ ಮಾತು ಆಲಿಸುತ್ತಿದ್ದಾರೆ. ಶಿವಕುಮಾರ ಸ್ವಾಮೀಜಿ ಅವರಂತಹ ಸಂತರಿಂದ ಇದು ಸಾಧ್ಯವಾಗಿದೆ' ಎಂದರು.

ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹಾಗೂ ಹಲವು ಮಠಾಧೀಶರು ವೇದಿಕೆಯಲ್ಲಿದ್ದರು.

'ಭಾರತ ರತ್ನ' ಘೋಷಿಸಲು ಮನವಿ

ಅನ್ನ, ಅಕ್ಷರ, ಆಶ್ರಯ ನೀಡಿ ಸಹಸ್ರಾರು ಮಕ್ಕಳ ಬಾಳಿಗೆ ಬೆಳಕಾಗಿದ್ದ ಶಿವಕುಮಾರ ಸ್ವಾಮೀಜಿಗೆ 'ಭಾರತ ರತ್ನ' ಗೌರವ ನೀಡುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

'ರಕ್ಷಣಾ ಸಚಿವರು ಪ್ರಧಾನಿ ಬಳಿ ಸ್ವಾಮೀಜಿಗೆ ಭಾರತ ರತ್ನ ಗೌರವ ನೀಡುವ ವಿಷಯ ಪ್ರಸ್ತಾಪಿಸಬೇಕು. ಇದು ನನ್ನೊಬ್ಬನ ಬೇಡಿಕೆಯಲ್ಲ. ಇಡೀ ರಾಜ್ಯದ ಜನರ ಬೇಡಿಕೆಯಾಗಿದ್ದು ಕೇಂದ್ರ ಸರ್ಕಾರ ಸ್ಪಂದಿಸಬೇಕು' ಎಂದರು.

ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, 'ತುಮಕೂರು ನಗರದ ಬಸ್ ನಿಲ್ದಾಣಕ್ಕೆ ಶಿವಕುಮಾರ ಸ್ವಾಮೀಜಿ ಹೆಸರಿಡುವಂತೆ ಕೋರಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿ ಹಲವು ತಿಂಗಳಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ತಕ್ಷಣ ಸರ್ಕಾರ ಒಪ್ಪಿಗೆ ನೀಡಿ, ಕೇಂದ್ರಕ್ಕೆ ಕಳುಹಿಸಿಕೊಡಬೇಕು' ಎಂದು ಒತ್ತಾಯಿಸಿದರು.

ಅಕ್ರಮ: ಪರೀಕ್ಷಾ ಮಂಡಳಿ ಭಾಗಿ

ಒಂದನೇ ಪುಟದಿಂದ...

ಅಕ್ರಮ ನಡೆದ ಸಂಶಯದ ಮೇಲೆ, ಮೊದಲು ಆಂತರಿಕ ತನಿಖೆ ನಡೆಸಿದ್ದ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಧ್ಯಾಪಕ ವಿಜಯ ಜಿ. ಜೋಷಿ ನೇತೃತ್ವದ ಮೂವರು ಸದಸ್ಯರ ಸಮಿತಿಯು ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ಅಪೂರ್ಣ ವರದಿ ನೀಡಿತ್ತು. ಈ ಕಾರಣಕ್ಕೆ, ರಾಜ್ಯ ಏಡ್ಸ್ ನಿಯಂತ್ರಣಾ ಸಂಸ್ಥೆಯ ಯೋಜನಾ ನಿರ್ದೇಶಕರಾದ ಐಎಎಸ್ ಅಧಿಕಾರಿ ಎನ್.ಎಂ. ನಾಗರಾಜು ಅವರನ್ನು ತನಿಖಾಧಿಕಾರಿಯಾಗಿ ನೇಮಿಸಿ ವರದಿ ನೀಡುವಂತೆ ಸೂಚಿಸಲಾಗಿತ್ತು.

ವರದಿಯಲ್ಲಿ ಏನಿದೆ?: ಪರೀಕ್ಷಾ ಕೇಂದ್ರಗಳಿಂದ ಸ್ವೀಕೃತವಾದ ಉತ್ತರ ಪತ್ರಿಕೆಗಳ ಸಂಖ್ಯೆಯನ್ನು ಚೀಫ್ ಕಸ್ಟೋಡಿಯನ್ ಚಂದ್ರಶೇಖರ್ ಸುಲ್ತಾನಪುರೆ ನಿಖರವಾಗಿ ದಾಖಲಿಸಿಲ್ಲ. ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿಡಲಾಗಿದ್ದ ಸ್ಟ್ರಾಂಗ್ ರೂಮ್‌ನ ಸುರಕ್ಷತೆಗೆ ಕ್ರಮ ತೆಗೆದುಕೊಂಡಿಲ್ಲ. ಸ್ಟ್ರಾಂಗ್ ರೂಮ್ ಕೀಯನ್ನು ತನ್ನ ಬಳಿ ಇಟ್ಟುಕೊಳ್ಳುವ ಬದಲು ಇತರರಿಗೆ ಉದ್ದೇಶಪೂರ್ವಕವಾಗಿಯೇ ಅವರು ನೀಡಿದ್ದರು ಎಂದು ವರದಿಯಲ್ಲಿದೆ.

ಪರೀಕ್ಷಾ ಪ್ರಾಧಿಕಾರ ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿದ್ದ ಬಸವರಾಜ ಆಸಂಗಿ ಅವರು ಸಿ.ಸಿ. ಟಿ.ವಿ ಕ್ಯಾಮೆರಾ ತುಣುಕುಗಳನ್ನು ನಾಶ ಮಾಡುವ ಮೂಲಕ ಅಕ್ರಮಗಳನ್ನು ಮುಚ್ಚಿಹಾಕಲು ಪ್ರಯತ್ನಿಸಿರುವುದು ಕಂಡುಬಂದಿದೆ. ಕಾಲೇಜುಗಳ ಮುಖ್ಯಸ್ಥರು, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಕೂಡಾ ದುರುದ್ದೇಶದಿಂದಲೇ ಹಿಂದಿನ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಹಿಂದಿರುಗಿಸಿಲ್ಲ. ಪರೀಕ್ಷಾ ಕಾರ್ಯಗಳ ಮೇಲ್ವಿಚಾರಣೆ ಮಾಡದೆ, ಆಸಂಗಿ ಅವರು ಅಕ್ರಮಗಳಿಗೆ ಸಹಕರಿಸಿರುವ ಸಾಧ್ಯತೆಯಿದೆ ಎಂದೂ ವರದಿಯಲ್ಲಿದೆ.

'ಉತ್ತರ ಪತ್ರಿಕೆಗಳಿದ್ದ ಸ್ಟ್ರಾಂಗ್ ರೂಮ್‌ಗೆ ನಾನು ಪ್ರವೇಶಿಸಿಲ್ಲ' ಎಂದು ಪತ್ರಾಂಕಿತ ಸಹಾಯಕ ಕೆ.ಎನ್. ಕೃಷ್ಣ ನಾಯಕ್ ಹೇಳಿಕೆ ನೀಡಿದ್ದರು. ಆದರೆ, ಅವರು ಸ್ಟ್ರಾಂಗ್ ರೂಮ್ ಪ್ರವೇಶಿಸಿರುವುದು ದೃಢಪಟ್ಟಿದೆ. ಉತ್ತರ ಪತ್ರಿಕೆಗಳ ಮೌಲ್ಯಮಾಪನ ವೇಳೆ ನಡೆದಿರುವ ಅಕ್ರಮಗಳನ್ನು ಮುಚ್ಚಿಹಾಕಲು ಸದಸ್ಯ ಕಾರ್ಯದರ್ಶಿಯು ಹಾರ್ಡ್ ಡಿಸ್ಕ್‌ನಲ್ಲಿದ್ದ ದತ್ತಾಂಶಗಳನ್ನು ಉದ್ದೇಶಪೂರ್ವಕವಾಗಿ ನಾಶಪಡಿಸಿರುವ ಸಾಧ್ಯತೆಯಿದೆ ಎಂದು ವರದಿ ಉಲ್ಲೇಖಿಸಿದೆ.

ಯಾರೆಲ್ಲ ಅಮಾನತು

- ಚಂದ್ರಶೇಖರ ಎಂ. ಸುಲ್ತಾನಪುರೆ, ಚೀಫ್ ಕಸ್ಟೋಡಿಯನ್ (ಪ್ರಸ್ತುತ ಪ್ರಾಧ್ಯಾಪಕರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ)
- ಬಸವರಾಜ ಆಸಂಗಿ, ಹಿಂದಿನ ಸದಸ್ಯ ಕಾರ್ಯದರ್ಶಿ, ಪರೀಕ್ಷಾ ಪ್ರಾಧಿಕಾರ ಮಂಡಳಿ (ಪ್ರಸ್ತುತ ಹುಬ್ಬಳ್ಳಿಯ ಪ್ರಾದೇಶಿಕ ಕಚೇರಿಯಲ್ಲಿ ಉಪ ಔಷಧ ನಿಯಂತ್ರಕ)
- ಬಸವರಾಜ ಎಚ್., ಸಹಾಯಕ ಪ್ರಾಧ್ಯಾಪಕರು
- ಶಾಂತಾರಾಮ್ ಯು., ಸಹಾಯಕ ಪ್ರಾಧ್ಯಾಪಕರು
- ಅನಿತಾ ಕೆ.ಎನ್., ಸಹಾಯಕ ಪ್ರಾಧ್ಯಾಪಕರು
- ಸ್ವಪ್ನಾ ಬಿ., ಸಹಾಯಕ ಪ್ರಾಧ್ಯಾಪಕರು
- ಕೃಷ್ಣ ನಾಯಕ್ ಕೆ.ಎನ್. ಪತ್ರಾಂಕಿತ ಸಹಾಯಕರು, ಕೇಂದ್ರ ಕಚೇರಿ

ಮೊಲ ಬೇಟೆ: ಶಾಸಕರ ಪುತ್ರನ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ತುರ್ವಿಹಾಳದಲ್ಲಿ ಶಾಸಕರ ಪುತ್ರ ಆರ್.ಸತೀಶಗೌಡ ತುರ್ವಿಹಾಳ, ಸಹೋದರ ಸಿದ್ದನಗೌಡ ಬೇಟೆಯಾಡಿದ ಮೊಲಗಳನ್ನು ಹಿಡಿದು ಮೆರವಣಿಗೆಯಲ್ಲಿ ಸಾಗಿದರು

ರಾಯಚೂರು: ಬೇಟೆಯಾಡಿದ್ದ ಮೊಲಗಳನ್ನು ಕೊಡಲಿ ಹಾಗೂ ಭರ್ಜಿಗೆ ಸಿಕ್ಕಿಸಿಕೊಂಡು ಯುಗಾದಿ ಹಬ್ಬದ ದಿನ ಸಿಂಧನೂರು ತಾಲ್ಲೂಕಿನ ತುರ್ವಿಹಾಳದಲ್ಲಿ ಮೆರವಣಿಗೆ ಮಾಡಿದ ಆರೋಪದಡಿ ಮಸ್ಕಿ ಶಾಸಕ ಆರ್. ಬಸನಗೌಡ ತುರ್ವಿಹಾಳ ಅವರ ಪುತ್ರ, ಸಹೋದರ ವಿರುದ್ಧ ಪ್ರಕರಣ ದಾಖಲಾಗಿದೆ.

ಶಾಸಕರ ಪುತ್ರ ಆರ್.ಸತೀಶಗೌಡ ತುರ್ವಿಹಾಳ, ಸಹೋದರ ಸಿದ್ದನಗೌಡ ತುರ್ವಿಹಾಳ ಹಾಗೂ ಇತರರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ರಾಯಚೂರು ಡಿಸಿಎಫ್ ಪ್ರವೀಣ ಅವರು ತಿಳಿಸಿದ್ದಾರೆ.

ಸಾವಿರಾರು ಜನರ ಎದುರೇ ಕೊಡಲಿಗೆ ಮೊಲಗಳನ್ನು ಸಿಕ್ಕಿಸಿಕೊಂಡು ವಿಜೃಂಭಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಕೆಲವರು ಕೊಡಲಿಗೆ ಮೊಲಗಳನ್ನು ತೂಗು ಹಾಕಿ ಹಿಂಸೆ ನೀಡಿರುವುದನ್ನು ಇಲಾಖೆ ಗಂಭೀರವಾಗಿ ಪರಿಗಣಿಸಿದೆ.

> ವನ್ಯಜೀವಿ ಸಂರಕ್ಷಣಾ ಕಾಯ್ದೆ ಉಲ್ಲಂಘಿಸಿದವರ ರಕ್ಷಣೆ ಮಾಡುವುದಿಲ್ಲ. ಬೇಟೆ ಆಡಿದ್ದರೆ ಶಾಸಕರ ಪುತ್ರ, ಸಹೋದರನ ವಿರುದ್ಧ ಕ್ರಮ ಜರುಗಿಸುತ್ತೇವೆ
> **ಈಶ್ವರ ಖಂಡ್ರೆ** ಅರಣ್ಯ ಸಚಿವ

'ಹಬ್ಬದಲ್ಲಿ ಕೆಲ ಸಂಪ್ರದಾಯ ಮುಂದುವರಿಸಿಕೊಂಡು ಬರಲಾಗಿದೆ. ನಮ್ಮ ಕುಟುಂಬದವರು ಮೊಲ ಬೇಟೆ ಆಡಿಲ್ಲ. ಮೆರವಣಿಗೆಯಲ್ಲಿ ಬಂದ ಯುವಕರು ನಮ್ಮವರನ್ನು ಹೆಗಲ ಮೇಲೆ ಕೂರಿಸಿ ಮೆರವಣಿಗೆ ಮಾಡಿದ್ದಾರಷ್ಟೇ' ಎಂದು ಶಾಸಕ ಬಸನಗೌಡ ತುರ್ವಿಹಾಳ ಪ್ರತಿಕ್ರಿಯಿಸಿದ್ದಾರೆ.

'ಮೊಲಗಳ ಬೇಟೆ ತಪ್ಪು. ಈ ಕುರಿತು ಸಾರ್ವಜನಿಕರಿಗೆ ತಿಳಿವಳಿಕೆ ನೀಡಲಾಗುವುದು' ಎಂದಿದ್ದಾರೆ.

ರಾಜ್ಯದ ಹಲವೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕಲಬುರಗಿ, ವಿಜಯಪುರ, ಯಾದಗಿರಿ, ಬೀದರ್, ಹಾವೇರಿ, ಗದಗ, ಬೆಳಗಾವಿ, ಕೊಪ್ಪಳ ಜಿಲ್ಲೆಗಳಲ್ಲಿ ಏಪ್ರಿಲ್ 2 ರಂದು ಭಾರಿ ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಚಿಕ್ಕಮಗಳೂರು, ಹಾಸನ, ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಕರ್ನಾಟಕ ಮತ್ತು ಉತ್ತರ ಒಳನಾಡಿನ ಕೆಲವೆಡೆ ಮಂಗಳವಾರ ಸಾಧಾರಣ ಮಳೆಯಾಗಿದೆ.

ರೈತ ಆತ್ಮಹತ್ಯೆ ಕಿರುಕುಳ ಆರೋಪ

ತರೀಕೆರೆ(ಚಿಕ್ಕಮಗಳೂರು): ತಾಲ್ಲೂಕಿನ ಹುಣಸಘಟ್ಟ ಹೊಸಳ್ಳಿ ತಾಂಡ್ಯದ ರೈತ ಎಚ್.ಎಲ್. ಮಂಜ್ಯಾನಾಯ್ಕ(56) ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಯೂನಿಯನ್ ಬ್ಯಾಂಕಿನಿಂದ ಮಂಜ್ಯಾನಾಯ್ಕ ₹4.70 ಲಕ್ಷ ಬೆಳೆಸಾಲ ಪಡೆದಿದ್ದು, ಬ್ಯಾಂಕಿನ ಸಿಬ್ಬಂದಿ ಅಸಲು ಮತ್ತು ಬಡ್ಡಿ ಪಾವತಿಸುವಂತೆ ಪದೇ ಪದೇ ನೋಟಿಸ್ ನೀಡಿದ್ದರು. ಮನೆಗೆ ಖುದ್ದಾಗಿ ಹೋಗಿ ಸಾಲ ಮರುಪಾವತಿಗೆ ಒತ್ತಾಯಿಸಿದ್ದರು. ಮರ್ಯಾದೆಗೆ ಅಂಜಿ ಕಳೆನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸಂಬಂಧಿಕರು ದೂರು ನೀಡಿದ್ದಾರೆ.

ಕೂಡಲೇ ಅವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಅವರು ಮೃತಪಟ್ಟಿದ್ದಾರೆ. ಆತ್ಮಹತ್ಯೆಗೆ ಬ್ಯಾಂಕ್ ಸಿಬ್ಬಂದಿಯೇ ನೇರ ಕಾರಣ ಎಂದು ಆರೋಪಿಸಿ ಸಂಬಂಧಿಕರು ಬ್ಯಾಂಕ್ ಎದುರು ಶವ ಇರಿಸಿ ಪ್ರತಿಭಟನೆ ನಡೆಸಿದರು.

ಸ್ಥಳಕ್ಕೆ ತಹಶೀಲ್ದಾರ್ ವಿಶ್ವಜೀತ್ ಮೆಹತಾ ಬಂದು ಪ್ರತಿಭಟನಕಾರರನ್ನು ಸಮಾಧಾನಪಡಿಸಿದರು.

ಡೀಸೆಲ್ ದರ ₹2 ಏರಿಕೆ

ಒಂದನೇ ಪುಟದಿಂದ....

ಯಾವುದರ ಮೇಲೆಲ್ಲಾ ಪರಿಣಾಮ: ಕೃಷಿ ಹಾಗೂ ಬಹುತೇಕ ಉದ್ಯಮಗಳು ಡೀಸೆಲ್ ಅನ್ನೇ ಅವಲಂಬಿಸಿದ್ದು, ದರ ಏರಿಕೆಯೂ ಎಲ್ಲ ಕ್ಷೇತ್ರಗಳ ಮೇಲೂ ಪರಿಣಾಮ ಬೀರಲಿದೆ. ಮುಂದಿನ ದಿನಗಳಲ್ಲಿ ಎಲ್ಲ ವಲಯಗಳ ದರ ಹೆಚ್ಚಳವಾಗಲು ಇದು ಕಾರಣವಾಗಬಹುದು.

ಯಾವ ವಲಯಗಳು

- ಸರಕು ಸಾಗಣೆ (ಟ್ರಕ್‌ಗಳು) ಮತ್ತು ಸಾರಿಗೆ (ಬಸ್‌ಗಳು, ಆಟೊಗಳು), ಡೀಸೆಲ್ ಕಾರುಗಳು, ಶಾಲಾ ವಾಹನ
- ಕೃಷಿ ಚಟುವಟಿಕೆ (ಟ್ರ್ಯಾಕ್ಟರ್ ಚಟುವಟಿಕೆಗಳು, ನೀರಿನ ಟ್ಯಾಂಕರ್‌ಗಳು...), ಕೃಷಿ ಉತ್ಪನ್ನಗಳ ಸಾಗಣೆ
- ಡೀಸೆಲ್ ಜನರೇಟರ್ ಅವಲಂಬಿತ ಕೈಗಾರಿಕೆ, ಉದ್ಯಮ ಮತ್ತು ಸೇವೆಗಳು
- ಕಟ್ಟಡ ನಿರ್ಮಾಣ ಕಾಮಗಾರಿ
- ಅರ್ಥ್‌ಮೂವಿಂಗ್, ಕೊಳವೆಬಾವಿ, ರಸ್ತೆ ನಿರ್ಮಾಣ ಕಾಮಗಾರಿ

ನಮ್ಮಲ್ಲೇ ಕಡಿಮೆ ಸರ್ಕಾರದ ವಾದ

ನಗರ	ಡೀಸೆಲ್ ಮಾರಾಟ ಬೆಲೆ
ಬೆಂಗಳೂರು	₹91.02
ಹೊಸೂರು (ತಮಿಳುನಾಡು)	₹94.42
ಕಾಸರಗೋಡು (ಕೇರಳ)	₹95.66
ಅನಂತಪುರ (ಆಂಧ್ರ ಪ್ರದೇಶ)	₹97.35
ಹೈದರಾಬಾದ್ (ತೆಲಂಗಾಣ)	₹95.70
ಕಾಗಲ್ (ಮಹಾರಾಷ್ಟ್ರ)	₹91.07

ವಿಜಯಪುರ: ಭಾರಿ ಶಬ್ದಕ್ಕೆ ಜನ ಗಾಬರಿ

ವಿಜಯಪುರ: ವಿಜಯಪುರ ಹಾಗೂ ತಿಕೋಟಾ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಮಂಗಳವಾರ ಮಧ್ಯಾಹ್ನ ಭೂಮಿಯಿಂದ ಬಂದ ಜೋರಾದ ಶಬ್ದ, ಜನರನ್ನು ಗಾಬರಿಗೊಳಿಸಿದೆ. ಶಬ್ದದ ಜೊತೆಗೆ ಭೂಕಂಪನದ ಅನುಭವ ಉಂಟಾಗಿ ಜನರು ಮನೆಯಿಂದ ಹೊರಗೆ ಓಡಿದ್ದಾರೆ.

ವಿಜಯಪುರ ತಾಲ್ಲೂಕಿನ ಮಖಣಾಪುರ, ತಿಡಗುಂದಿ, ಕನ್ನೂರ, ಶಿರನಾಳ, ತಿಕೋಟಾ ತಾಲ್ಲೂಕಿನ ಸೋಮದೇವರಹಟ್ಟಿ, ಮಲಕನ-ದೇರಹಟ್ಟಿ, ಹುಬನೂರ, ಟಕ್ಕಳಕಿ, ಘೋಣಸಗಿ, ಕಳ್ಳಕವಟಗಿ, ಬಾಬಾನಗರ, ಲೋಹಗಾಂವ, ಧನ್ನರ್ಗಿ, ಬಿಜ್ಜರಗಿ ಸೇರಿ ವಿವಿಧ ಗ್ರಾಮಗಳಲ್ಲಿ ಶಬ್ದ ಕೇಳಿಸಿದೆ.

ಕಳೆದ ವರ್ಷ ಭೂಮಿ ಕಂಪಿಸಿ ಶಬ್ದ ಕೇಳಿದ ಸಂದರ್ಭದಲ್ಲಿ ಪರಿಶೀಲಿಸಿದ್ದ ಭೂವಿಜ್ಞಾನಿಗಳು, 'ಇದು ಭೂಮಿಯಲ್ಲಿ ಆಗುವ ನೈಸರ್ಗಿಕ ಪ್ರಕ್ರಿಯೆ. ಯಾರೂ ಭಯಪಡಬೇಕಿಲ್ಲ' ಎಂದಿದ್ದರು.

ಸುಧಾ–ಮಯೂರ ಓದಿ

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ('ಕ್ಲೈಂಟ್') ಈ ಕೆಳಗಿನ 'ಷೆಡ್ಯೂಲ್' ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲ ಇನ್ನುಮುಂದೆ **'ಷೆಡ್ಯೂಲ್ ಪ್ರಾಪರ್ಟಿ'** ಎನ್ನಲಾಗುವ ಸ್ಥಿರಾಸ್ತಿಗೆ ಸಂಬಂಧಿಸಿದಂತೆ, ನೋಂದಾ ಯಿತ ಕಚೇರಿ, ಪ್ಲಾಟ್ ನಂ. 6, ಗುರುಕೃಪಾ ವಿಲಾಸಂ, 3ನೇ ಮಹಡಿ, ರಸ್ತೆ ನಂ. 2, ಮಹಿಳಾ ಕೋ-ಆಪ್ ಹೌಸಿಂಗ್ ಸೊಸೈಟಿ ಲಿ., ಬಂಜಾರಾ ಹಿಲ್ಸ್, ಹೈದರಾಬಾದ್, ತೆಲಂಗಾಣ-500034 ವಿಳಾಸದಲ್ಲಿರುವ **ನೈನ್ ಸ್ಟಾರ್ ಎಂಟರ್‌ಪ್ರೈಸಸ್ ಪ್ರೈವೇ ಲಿಮಿಟೆಡ್ ('ಮಾಲೀಕರು')** ಇವರೊಂದಿಗೆ ಖರೀದಿ ವ್ಯವಹಾರ ಕೈಗೊಳ್ಳಲು ಇಚ್ಛಿಸಿರುತ್ತಾರೆ. ಸದರಿ ಮಾಲೀಕರು ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ತಾವೇ ಸಂಪೂರ್ಣ ಮಾಲೀಕರಾಗಿದ್ದೇವೆ ಮತ್ತು ಅದರ ಮೇಲೆ ಅನಿರ್ಬಂಧಿತ ಹಕ್ಕುಗಳನ್ನು ಹೊಂದಿದ್ದೇವೆ ಎಂದು ತಿಳಿಸಿರುತ್ತಾರೆ.

ಆದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಉಲ್ಲೇಖಿತ ಮಾಲೀಕರನ್ನು ಹೊರತುಪಡಿಸಿ ಇನ್ಯಾವುದೇ ವ್ಯಕ್ತಿಗೆ ಯಾವುದೇ ಹಕ್ಕು, ಅಧಿಕಾರ, ಚಾರ್ಜ್, ಲೀನ್, ಕ್ಲೇಮ್ ಅಥವಾ ಇನ್ಯಾವುದೇ ಹಿತಾಸಕ್ತಿಗಳಿದ್ದಲ್ಲಿ, ಅಥವಾ ಉಲ್ಲೇಖಿತ ಖರೀದಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ಈ ಕೆಳಗಿನ ಸಹಿದಾರರಿಗೆ ಮಾಹಿತಿ ಸಲ್ಲಿಸತಕ್ಕದ್ದು. ಯಾವುದೇ ಕ್ಲೇಮ್‌ಗಳಾಗಿರಲಿ ಅಥವಾ ಆಕ್ಷೇಪಣೆ ಗಳಾಗಿರಲಿ, ಅವುಗಳನ್ನು ಕಡ್ಡಾಯವಾಗಿ ಲಿಖಿತ ರೂಪದಲ್ಲಿ ದಾಖಲಾತಿ ಪುರಾವೆಗಳ ಸಮೇತ, ಈ ಪ್ರಕಟಣೆಯ ದಿನಾಂಕದಿಂದ 15 (ಹದಿನೈದು) ದಿನಗಳ ಅವಧಿಯೊಳಗೆ ಕೆಳಕಂಡ ವಿಳಾಸಕ್ಕೆ ತಲುಪುವಂತೆ ರವಾನಿಸತಕ್ಕದ್ದು. ಒಂದು ವೇಳೆ, ನಿಗದಿತ 15 (ಹದಿನೈದು) ದಿನಗಳ ಅವಧಿಯೊಳಗೆ, ಅಂತಹ ಯಾವುದೇ ಕ್ಲೇಮ್ ಗಳಾಗಲಿ ಅಥವಾ ಆಕ್ಷೇಪಣೆಗಳಾಗಲಿ ಸಲ್ಲಿಕೆಯಾಗದಿದ್ದಲ್ಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಉಲ್ಲೇಖಿತ ಮಾಲೀಕರನ್ನು ಹೊರತುಪಡಿಸಿ ಇನ್ಯಾವುದೇ ವ್ಯಕ್ತಿಗೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಚಾರ್ಜ್, ಲೀನ್, ಕ್ಲೇಮ್ ಅಥವಾ ಹಿತಾಸಕ್ತಿ ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ. ನಿಗದಿತ 15 (ಹದಿನೈದು) ದಿನಗಳ ಅವಧಿಯೊಳಗೆ ಸಲ್ಲಿಕೆಯಾಗದೆ, ನಂತರದಲ್ಲಿ ಸಲ್ಲಿಕೆಯಾಗುವ ಯಾವುದೇ ಕ್ಲೇಮ್‌ಗಳನ್ನು ಅಥವಾ ಆರೋಪಿತ ಹಿತಾಸಕ್ತಿಗಳನ್ನು ವಿವೇಚನಾ ಪೂರ್ವಕವಾಗಿ ಕೈಬಿಡಲಾಗುತ್ತದೆ ಮತ್ತು ಎಲ್ಲಾ ಉದ್ದೇಶ ಗಳಿಂದ ಹಾಗೂ ಅಗತ್ಯಗಳಿಂದ ನಿರ್ಲಕ್ಷಿಸಲಾಗುತ್ತದೆ ಮತ್ತು ಅಂತಹವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧ ಗಳನ್ನು ರೂಪಿಸುವುದಿಲ್ಲ ಹಾಗೂ ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿತ ಖರೀದಿ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಸ್ವತಂತ್ರರಾಗುತ್ತಾರೆ.

ಷೆಡ್ಯೂಲ್
(ಷೆಡ್ಯೂಲ್ ಪ್ರಾಪರ್ಟಿಯ ವಿವರ)

ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು-2 ಹೋಬಳಿ, ದೊಡ್ಡತೋಗೂರು ಗ್ರಾಮದಲ್ಲಿ ಸ್ಥಿತಗೊಂಡಿರುವ ಮತ್ತು ದೊಡ್ಡತೋಗೂರು ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಒಳಪಡುವ, ವಸತಿಯೋಗ್ಯ ಉದ್ದೇಶಕ್ಕಾಗಿ ಪರಿವರ್ತನೆ ಗೊಂಡಿರುವ ಮತ್ತು ಸರ್ವೆ ನಂ. 108ರ ಭಾಗವಾಗಿರುವ (ಹಳೆಯ ಗ್ರಾಮ ಪಂಚಾಯತ್ ಖಾತಾ ನಂ. 3947/108/2 ಮತ್ತು ಪಟ್ಟಣ ಪಂಚಾಯತ್ ಖಾತಾ ನಂ. 4352/3947/108/2 ಹೊಂದಿರುವ) 03 ಎಕರೆ 18 ಗುಂಟಾ/13961.64 ಚದರ ಮೀಟರ್ ವಿಸ್ತೀರ್ಣವುಳ್ಳ ಸ್ಥಿರಾಸ್ತಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:- ಪೂರ್ವಕ್ಕೆ: ಸರ್ವೆ ನಂ. 98 ರಲ್ಲಿರುವ ಸ್ವತ್ತು ಮತ್ತು ಶ್ರೀ. ಮುನಿಗೋವಿಂದಪ್ಪ ರವರ ಸ್ವತ್ತು; ಪಶ್ಚಿಮಕ್ಕೆ: ರಸ್ತೆ ಮತ್ತು ಸರ್ವೆ ನಂ. 108 ರಲ್ಲಿರುವ ಸ್ವತ್ತಿನ ಉಳಿಕೆ ಭಾಗ; ಉತ್ತರಕ್ಕೆ: ಸರ್ವೆ ನಂ. 108 ಮತ್ತು ಸರ್ವೆ ನಂ. 110 ರಲ್ಲಿರುವ ಸ್ವತ್ತಿನ ಉಳಿಕೆ ಭಾಗ; ಮತ್ತು ದಕ್ಷಿಣಕ್ಕೆ: ಹೊಸ ಸರ್ವೆ ನಂ. 168 ರಲ್ಲಿರುವ (ಹಳೆಯ ಸರ್ವೆ ನಂ. 108) ಸ್ವತ್ತು.

ದಿನಾಂಕ: 02.04.2025
ಸ್ಥಳ: ಬೆಂಗಳೂರು

ಶ್ರೀಮತಿ. ಬ್ರಿಜಿತಾ ಪ್ರಕಾಶ್, ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್
18ನೇ ಮಹಡಿ, ಎಸ್‌ಕೆಎವಿ 909, ನಂ. 9/1, ರೆಸಿಡೆನ್ಸಿ ರೋಡ್, ರಿಚ್ಮಂಡ್ ಸರ್ಕಲ್, ಬೆಂಗಳೂರು-560025, ಕರ್ನಾಟಕ, ಭಾರತ.
Ph. 080-43503600/080-43503676
Email – brijita.prakash@jsalaw.com

ಕರ್ನಾಟಕ ಸರ್ಕಾರ
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ – 585 401.

ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟೆ.ನಂ.124–Call–4/cold storage rent /2025–26ದಿನಾಂಕ:26.03.2025

ಅಲ್ಪಾವಧಿಟೆಂಡರ ಪ್ರಕಟಣೆ

1) ಕಾಮಗಾರಿ/ಸರಕು ವೆಯ ವಿವರ Utilizing cold storage facilities, existing at College of Fisheries Campus, Hoige Bazaar, Mangalore by the food processors on rent basis for a period of 5 years, 2) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ/ಸರಕು/ಸೇವೆಯ ಟೆಂಡರ ಮೊತ್ತದ ವಿವರ Tender Form fee as per e-portal EMD of Rs.1,00,000.00, 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ Tender Form as per e portal and, 6) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ: 11.04. 2025 up to 5.00 PM, 7) ತಾಂತ್ರಿಕ ಬಿಡ ಟೆಂಡರ ತೆರೆಯುವ ದಿನಾಂಕ 15.04.2025 at 11.30. AM, 8) ಫೈನಾನ್ಸಿಯಲ ಬಿಡ ಟೆಂಡರ ತೆರೆಯುವ ದಿನಾಂಕ 16.04. 2025 at 11.30. AM, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ. ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482-245446, 10) ಅಂತರ್ಜಾಲ ತಾಣದ ವಿಳಾಸ e-procurement portal- https://kppp.karnataka.gov.in.

ಸಹಿ/– ಆಸ್ತಿ ಅಧಿಕಾರಿಗಳು
ಕಪಪಮೀವಿವಿ, ಬೀದರ

ವಾ.ಸಾ.ಸಂ.ಇ/ಬೀದರ/01/ಕೆಎಸ್‌ಎಂಸಿ&ಎ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–01/01/2025–26 ದಿನಾಂಕ: 01.04.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಹಾಸನ ಜಿಲ್ಲೆ, ಹಾಸನ ಬೆಳವಣಿಗೆ ಕೇಂದ್ರ ಕೈಗಾರಿಕಾ ಪ್ರದೇಶದಲ್ಲಿ ಉಪ ಬಡಾವಣೆ 4ಕ್ಕೆ ವಿದ್ಯುತ್ ಮೂಲಸೌಕರ್ಯ ಮತ್ತು ಬೀದಿ ದೀಪಗಳನ್ನು ಒದಗಿಸುವ ಕಾಮಗಾರಿ. (3ನೇ ಕರೆ).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 15.04.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/13/Zen/2025-26

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ, ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು–560 038. ದೂರವಾಣಿ: 91–80–25196100, 25196124 ಫ್ಯಾಕ್ಸ್: 080–25196110
ಇ–ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/37/ಟೆಂ.ಪ್ರ/2024–25 ದಿನಾಂಕ: 01.04.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಹಾರ ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್‌ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) ರೂ.ಲಕ್ಷಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	Construction/Upgradation of sewerage system for the Hubballi-Dharwad Municipal Corporation (HDMC) in Hubballi-Dharwad City under NGT Environmental Compensation fund on DBOT Model **(Call-4)**.	5334.00	54.00

1) ಟೆಂಡರ್ ಆಹ್ವಾನಿಸುವ ದಿನಾಂಕ: **01.04.2025**. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **09.04.2025 ಸಮಯ: 11.30 ಪೂರ್ವಾಹ್ನ**. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **16.04.2025 ಸಮಯ: 5.30 ಅಪರಾಹ್ನ**. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **19.04.2025 ಸಮಯ: 11.30 ಪೂರ್ವಾಹ್ನ**. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **21.04.2025 ಸಮಯ: 11.30 ಪೂರ್ವಾಹ್ನ**. ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ಯೋಜನಾ ಮೇಲ್ವಿಚಾರಣಾ ಘಟಕ, ಯುಡಬ್ಲ್ಯೂಎಮ್–ಕೆಯುಐಡಿಎಫ್‌ಸಿ, ಬೆಂಗಳೂರು

ವಾಸಾಸಂಇ/ವಾಪ್ರ/02/ಎಂಎಎ/2025–26

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ವೈಫಲ್ಯ ಎಂಬ ರೋಗವನ್ನು ಕೊಲ್ಲಲು ಆತ್ಮವಿಶ್ವಾಸ ಮತ್ತು ಕಠಿಣ ಕೆಲಸ ಅತ್ಯುತ್ತಮ ಔಷಧಿಗಳಾಗಿವೆ.

-ಎ.ಪಿ.ಜೆ. ಅಬ್ದುಲ್ ಕಲಾಂ

ಆರ್‌ಎಸ್‌ಎಸ್ ಕಚೇರಿಗೆ ಮೋದಿ ಭೇಟಿ ಮುನಿಸು ಶಮನದ ಸಂಕೇತ

ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ನಾಗ್ಪುರದಲ್ಲಿನ ಕೇಂದ್ರ ಕಚೇರಿಗೆ ಇದೇ ಮೊದಲ ಬಾರಿಗೆ ಭೇಟಿ ಕೊಟ್ಟಿದ್ದಾರೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ನಡುವಣ ಸಂಬಂಧವನ್ನು ಪುನಶ್ಚೇತನಗೊಳಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ ಎಂಬುದರ ಸಂಕೇತ ಇದು ಎಂದು ಹೇಳಲಾಗುತ್ತಿದೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ನಡುವಣ ಸಂಬಂಧ ಈಚಿನ ಕೆಲವು ಸಂದರ್ಭಗಳಲ್ಲಿ ಅಷ್ಟೊಂದು ಮಧುರವಾಗಿ ಇರಲಿಲ್ಲ. 'ಆರ್‌ಎಸ್‌ಎಸ್ ಎಂಬುದು ಭಾರತದ ಸಾಂಸ್ಕೃತಿಕ ಪ್ರಜ್ಞೆಯ ಆಲದ ಮರ' ಎಂದು ಮೋದಿ ಅವರು ಹೊಗಳಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆಗಾಗಿ ಆರ್‌ಎಸ್‌ಎಸ್ ಕಾರ್ಯಕರ್ತರನ್ನೂ ಅವರು ಶ್ಲಾಘಿಸಿದ್ದಾರೆ. ಆದರೆ ಇದು ಯಾವುದೂ ಹೊಸತಲ್ಲ. ಏಕೆಂದರೆ, ಮೋದಿ ಅವರ ಬೇರುಗಳು ಕೂಡ ಈ ಸಂಘಟನೆಯಲ್ಲಿಯೇ ನೆಟ್ಟಿವೆ. ಸಂಘದ ಜೊತೆಗೆ ಹೊಂದಿರುವ ನಂಟಿನ ಕುರಿತು ಈ ಹಿಂದೆಯೂ ಅವರು ಹೆಮ್ಮೆ ವ್ಯಕ್ತಪಡಿಸಿದ್ದು ಇದೆ. ಆದರೆ ಈಗಿನ ಭೇಟಿಯ ಸಂದರ್ಭ ಮತ್ತು ಆಡಿದ ಮಾತುಗಳಿಗೆ ವಿಶೇಷ ಅರ್ಥಗಳಿವೆ. ಆರ್‌ಎಸ್‌ಎಸ್–ಬಿಜೆಪಿ ನಡುವಣ ಸಂಬಂಧದಲ್ಲಿ ತುಸು ಬಿರುಕು ಮೂಡಿದ್ದರೂ ಸಿದ್ಧಾಂತಕ್ಕೆ ಸಂಬಂಧಿಸಿ ಭಿನ್ನಮತವೇನೂ ಇರಲಿಲ್ಲ. ಪರಸ್ಪರ ಸಂಬಂಧದ ಮೇಲೆ ದೊಡ್ಡ ಮಟ್ಟದ ಪರಿಣಾಮವನ್ನೂ ಅದು ಬೀರಿರಲಿಲ್ಲ.

ಆರ್‌ಎಸ್‌ಎಸ್‌ನ ಸಿದ್ಧಾಂತ ಮತ್ತು ಆಚರಣೆಯು ಸಂಘಟನೆಯನ್ನು ವ್ಯಕ್ತಿಗಳಿಗಿಂತ ಸದಾ ಮೇಲೆಯೇ ಇರಿಸುತ್ತದೆ. ಹಾಗಾಗಿಯೇ ವ್ಯಕ್ತಿಪೂಜೆಯ ಹಂತಕ್ಕೆ ಮೋದಿ ಅವರು ಬೆಳೆದದ್ದು ಸಂಘಟನೆಗೆ ಪಥ್ಯವಾಗಿರಲಿಲ್ಲ. ಲೋಕಸಭೆಗೆ 2024ರಲ್ಲಿ ನಡೆದ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಮೋದಿ ಅವರು ತಮ್ಮನ್ನು 'ಅತಿಮಾನುಷ ವ್ಯಕ್ತಿ' ಎಂದು ಬಣ್ಣಿಸಿಕೊಂಡಿದ್ದರು. ತಮ್ಮನ್ನು ದೈವಿಕ ಉದ್ದೇಶಕ್ಕಾಗಿ ಭೂಮಿಗೆ ಕರೆಸಿಕೊಳ್ಳಲಾಗಿದೆ ಎಂದಿದ್ದರು. ಇಂತಹ ಮಾತುಗಳು ಆರ್‌ಎಸ್‌ಎಸ್‌ಗೆ ಸರಿಕಂಡಿರಲಿಲ್ಲ. ಹಾಗಾಗಿಯೇ 'ನಿಜವಾದ ಸೇವಕ ಅಹಂಕಾರಿ ಆಗುವುದಿಲ್ಲ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಅವರು ಹೇಳಿದ್ದರು. ಮೋದಿ ಅವರ 'ಅತಿಮಾನುಷ' ಹೇಳಿಕೆಗೆ ಭಾಗವತ್ ಅವರ ಟೀಕೆ ಇದು ಎಂದು ವಿಶ್ಲೇಷಿಸಲಾಗಿತ್ತು. ಬಿಜೆಪಿ ಸ್ವಾವಲಂಬಿ ಪಕ್ಷವಾಗಿದ್ದು ಗೆಲ್ಲಲು ಆರ್‌ಎಸ್‌ಎಸ್‌ನ ನೆರವು ಅಗತ್ಯವಿಲ್ಲ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಹೇಳಿದ್ದರು. ಆರ್‌ಎಸ್‌ಎಸ್ ಕಾರ್ಯಕರ್ತರು 2024ರ ಚುನಾವಣೆಯಲ್ಲಿ ಪೂರ್ಣ ಮನಸ್ಸಿನಿಂದ ಪ್ರಚಾರ ನಡೆಸಲಿಲ್ಲ. ಹಾಗಾಗಿಯೇ, ಹಿಂದಿ ಭಾಷಿಕ ರಾಜ್ಯಗಳಲ್ಲಿ ಬಿಜೆಪಿಗೆ ಹಿನ್ನಡೆ ಆಯಿತು ಎಂದು ಹೇಳಲಾಗುತ್ತಿದೆ. ಪ್ರತಿಯೊಂದು ಮಸೀದಿಯ ಅಡಿಯಲ್ಲಿಯೂ ಶಿವಲಿಂಗ ಇದೆಯೇ ಎಂದು ಹುಡುಕುವ ಅಗತ್ಯ ಇಲ್ಲ ಎಂಬ ಭಾಗವತ್ ಅವರ ಹೇಳಿಕೆಯು ಬಿಜೆಪಿ ಮತ್ತು ಆರ್‌ಎಸ್‌ಎಸ್ ನಡುವೆ ಕೆಲವು ವಿಚಾರಗಳಲ್ಲಿ ಸಹಮತವಿಲ್ಲ ಎಂಬುದನ್ನೂ ಬಹಿರಂಗಪಡಿಸಿತು.

ಈಗಿನ ಭೇಟಿಯ ಸಂದರ್ಭ ಮತ್ತು ಆಡಿದ ಮಾತುಗಳಿಗೆ ವಿಶೇಷ ಅರ್ಥಗಳಿವೆ

ಭಿನ್ನಾಭಿಪ್ರಾಯಗಳನ್ನು ನಿವಾರಿಸುವ ಪ್ರಯತ್ನಗಳು ನಡೆದಿದ್ದವು ಮತ್ತು ಕಳೆದ ಕೆಲ ತಿಂಗಳಲ್ಲಿ ಈ ಪ್ರಯತ್ನಗಳಿಗೆ ಯಶಸ್ಸು ಕೂಡ ಸಿಕ್ಕಿದೆ. ಹರಿಯಾಣ, ಮಹಾರಾಷ್ಟ್ರ ಮತ್ತು ದೆಹಲಿ ವಿಧಾನಸಭೆಗೆ ನಡೆದ ಚುನಾವಣೆಯ ಪ್ರಚಾರದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಸಕ್ರಿಯವಾಗಿ ಭಾಗಿಯಾಗಿದ್ದರು. ಪಕ್ಷ ಮತ್ತು ಸಂಘದ ನಡುವೆ ಇದ್ದ ಸಮನ್ವಯದಿಂದಲೇ ಈ ಮೂರೂ ರಾಜ್ಯಗಳಲ್ಲಿ ಯಶಸ್ಸು ಸಿಕ್ಕಿದೆ ಎಂದು ಹೇಳಲಾಗುತ್ತಿದೆ. ಮೋದಿ ಅವರು ನಾಗ್ಪುರಕ್ಕೆ ನೀಡಿದ ಭೇಟಿಯನ್ನು ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿಟ್ಟು ನೋಡಬೇಕಿದೆ. ನಡ್ಡಾ ಅವರು 2020ರಿಂದಲೂ ಪಕ್ಷದ ಅಧ್ಯಕ್ಷರಾಗಿ ಇದ್ದಾರೆ. ಈಗ ಅವರು ಕೇಂದ್ರದ ಸಚಿವರೂ ಆಗಿದ್ದಾರೆ. ಹಾಗಾಗಿ, ಹೊಸ ಅಧ್ಯಕ್ಷನ ನೇಮಕ ಅನಿವಾರ್ಯವಾಗಿದೆ. ಪಕ್ಷ ಮತ್ತು ಸರ್ಕಾರವು ಮುಂದಿನ ದಿನಗಳಲ್ಲಿ ಕೈಗೊಳ್ಳುವ ನಿರ್ಧಾರಗಳಲ್ಲಿ ಆರ್‌ಎಸ್‌ಎಸ್‌ನ ಛಾಪು ಕಾಣಿಸಿಕೊಳ್ಳಬಹುದು.

ದಿನದ ಟ್ವೀಟ್

ಏಕಪಾತ್ರಾಭಿನಯ...

ಬಿಜೆಪಿಯಿಂದ ಉಚ್ಚಾಟನೆಗೆ ಒಳಗಾಗಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಏಕಪಾತ್ರಾಭಿನಯ ಮಾಡುತ್ತ ಎಲ್ಲವನ್ನೂ ಒಬ್ಬರೇ ನಿಭಾಯಿಸುತ್ತಿದ್ದಾರೆ. ಹಿಂದುತ್ವ, ಹಿಂದುತ್ವ ಎನ್ನುವ ಅವರು ಈ ಹಿಂದೆ ಜೆಡಿಎಸ್‌ಗೆ ಹೋಗಿದ್ದು ಯಾಕೆ? ಟಿಪ್ಪು ಅವತಾರ ತಾಳಿದ್ದು ಯಾಕೆ? ಇಫ್ತಾರ್ ಕೂಟ ಆಯೋಜಿಸಿದ್ದು ಯಾಕೆ?

ಎಂ.ಪಿ.ರೇಣುಕಾಚಾರ್ಯ, ಬಿಜೆಪಿ ಮುಖಂಡ

ಕಿಡಿನುಡಿ

ನಮ್ಮ ಬೆಂಗಳೂರಿನ ಈಜಿಪುರ ಮತ್ತು ಹೊಸಕೆರೆಹಳ್ಳಿ ಮೇಲ್ಸೇತುವೆ ಮುಗಿಯುವ ಹೊತ್ತಿಗೆ ಅದರ ಸರಾಸರಿ ಸಮಯದಲ್ಲಿ ಚೀನಾದಲ್ಲಿ 50 ಹೈವೇ ಕಟ್ಟುತ್ತಾರೆ. ಇಂತಹ ವಿಳಂಬ ಧೋರಣೆಯು ದೇಶದ ಅಭಿವೃದ್ಧಿಗೆ ದೊಡ್ಡ ಮಾರಕ. ಸರ್ಕಾರ, ಅಧಿಕಾರಿಗಳು, ಗುತ್ತಿಗೆದಾರರ ಜಡ್ಡುತನ ಹಾಗೂ ಭ್ರಷ್ಟಾಚಾರದ ವಿಷವರ್ತುಲದಿಂದ ಮುಕ್ತಿ ದೊರೆತರೆ ಮಾತ್ರ ಸಕಾಲದಲ್ಲಿ ಕೆಲಸಗಳು ಮುಗಿಯುತ್ತವೆ.

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಭಾನುವಾರ, 2-4-2000

• ಬ್ಯಾಂಕ್ ಬಡ್ಡಿ ದರ, ನಗದು ಮೀಸಲು ಶೇ 1 ಇಳಿಕೆ

ಮುಂಬೈ, ಏಪ್ರಿಲ್ 1 (ಪಿಟಿಐ): ಬ್ಯಾಂಕ್ ಬಡ್ಡಿ ದರ ಮತ್ತು ನಗದು ಮೀಸಲು ಪ್ರಯಾಣದಲ್ಲಿ ಶೇಕಡ 1ರಷ್ಟು ಕಡಿತ ಮಾಡಿರುವುದಾಗಿ ರಿಸರ್ವ್ ಬ್ಯಾಂಕ್ ಇಂದು ಪ್ರಕಟಿಸಿದೆ.

ಬ್ಯಾಂಕ್ ಬಡ್ಡಿ ದರಗಳನ್ನು ಪ್ರಸಕ್ತದ ಶೇ 8ರಿಂದ ಶೇ 7ಕ್ಕೆ ಇಳಿಸಲಾಗಿದ್ದು, ನಗದು ಮೀಸಲು ನಿಷ್ಪತ್ತಿಯನ್ನು ಶೇ 9ರಿಂದ ಶೇ 8ಕ್ಕೆ ಇಳಿಸಲಾಗಿದೆ. ಮೀಸಲು ಪ್ರಮಾಣ ಇಳಿಕೆಯನ್ನು ಎರಡು ಹಂತದಲ್ಲಿ ಜಾರಿಗೆ ತರಲಾಗುವುದು ಎಂದು ತಿಳಿಸಲಾಗಿದೆ. ಏಪ್ರಿಲ್ 8ರಿಂದ ಶೇ 0.5ರಷ್ಟು ಕಡಿತ ಮತ್ತು ಏಪ್ರಿಲ್ 22ರಿಂದ ಶೇ 0.5ರಷ್ಟು ಕಡಿತ ಅನ್ವಯವಾಗುವುದು.

ಬ್ಯಾಂಕ್ ಬಡ್ಡಿ ದರ ಇಳಿಕೆ ಇಂದಿನಿಂದಲೇ ಜಾರಿಗೆ ಬಂದಿದೆ. ಮೀಸಲು ನಿಷ್ಪತ್ತಿ ಪ್ರಮಾಣದಲ್ಲಿ ಇಳಿಕೆ ಮಾಡಿರುವುದರಿಂದ ಬ್ಯಾಂಕಿಂಗ್ ವ್ಯವಸ್ಥೆಗೆ ಸಾಲ ನೀಡಿಕೆಗಾಗಿ 7,200 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಸಂಪನ್ಮೂಲ ಸಿಗಲಿದೆ ಎಂದು ರಿಸರ್ವ್ ಬ್ಯಾಂಕ್ ಪ್ರಕಟಣೆ ತಿಳಿಸಿದೆ.

• ರಾಜ್ಯಸಭೆ ಚುನಾವಣೆ ಹೆಗಡೆ ವಿರುದ್ಧ ದೂರು

ನವದೆಹಲಿ, ಏಪ್ರಿಲ್ 1– ಕರ್ನಾಟಕದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸುವ ಉದ್ದೇಶದಿಂದ ಜನತಾದಳ (ಯು) ನಾಯಕ ರಾಮಕೃಷ್ಣ ಹೆಗಡೆ ಅವರು 'ಮದ್ಯದ ದೊರೆ' ವಿಜಯ್ ಮಲ್ಯ ಅವರು ಚುನಾವಣೆ ಕಣಕ್ಕೆ ನಿಲ್ಲುವಂತೆ ಪ್ರೇರೇಪಿಸಿದ್ದಾಗಿ ರಾಜ್ಯ ಬಿಜೆಪಿ ನಾಯಕರು ಪಕ್ಷದ ಹಿರಿಯ ಮುಖಂಡರ ಗಮನಕ್ಕೆ ತಂದಿದ್ದಾರೆ.

ಮಲ್ಯ ಅವರ ನಾಮಪತ್ರಕ್ಕೆ ಹತ್ತು ಮಂದಿ ಸಹಿ ಹಾಕುವಲ್ಲಿ ಹೆಗಡೆ ಅವರ ಕೈವಾಡವಿದೆ. ಬಿಜೆಪಿಯ ಅಭ್ಯರ್ಥಿಯನ್ನು ಸೋಲಿಸುವ ಮೂಲಕ ಪಕ್ಷಕ್ಕೆ ಮುಜುಗರ ಉಂಟು ಮಾಡಬೇಕೆಂಬುದು ಅವರ ಉದ್ದೇಶ ವಾಗಿತ್ತೆಂದು ಆರೋಪಿಸಿ ಬಿಜೆಪಿ ನಾಯಕರು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ಪಕ್ಷದ ಅಧ್ಯಕ್ಷ ಕುಶಭಾವು ಠಾಕರೆ ಮತ್ತು ಗೃಹ ಸಚಿವ ಎಲ್.ಕೆ. ಅಡ್ವಾಣಿ ಮುಂತಾದವರಿಗೆ ದೂರು ನೀಡಿರುವುದಾಗಿ ಪಕ್ಷದ ವಿಶ್ವಸನೀಯ ಮೂಲಗಳಿಂದ ಗೊತ್ತಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 2-4-1975

• ಬಿಜಾಪುರದಲ್ಲಿ ಎಂಟು ಜನರ ಸಜೀವ ದಹನ

ಬಿಜಾಪುರ, ಏಪ್ರಿಲ್ 1– ಬಿಜಾಪುರ ನಗರದ ಮಧ್ಯಭಾಗದಲ್ಲಿರುವ ಮೈಸೂರು ರೆಸ್ಟೋರೆಂಟ್ ಹೋಟೆಲ್‌ನಲ್ಲಿ ಸೋಮವಾರ ಮಧ್ಯರಾತ್ರಿ ಬೆಂಕಿ ಅಪಘಾತವುಂಟಾಗಿ ಎಂಟು ಮಂದಿ ದಹನಗೊಂಡ ದುರಂತ ನಡೆಯಿತು.

ಮಂಗಳವಾರ ಹೋಟೆಲ್‌ಗೆ ರಜಾ ಇದ್ದುದರಿಂದ ಹೋಟೆಲ್‌ನ 15 ಮಂದಿ ಹುಡುಗರು ಸೋಮವಾರ ರಾತ್ರಿ 1 ಗಂಟೆಯವರೆಗೆ ಹೋಟೆಲ್ ತೊಳೆದು ಎರಡನೇ ಅಂತಸ್ತಿನ ಹೊರಗಡೆ ಮಲಗಿದ್ದರೆಂದು ಹೇಳಲಾಗಿದೆ.

ಬೆಳಗಿನ ಜಾವ ಸುಮಾರು 2.30 ಗಂಟೆ ಹೊತ್ತಿಗೆ ಘೋರ ಕಿರುಚಾಟದ ಶಬ್ದ ಕೇಳಿ ಹುಡುಗರು ಎಚ್ಚರಗೊಂಡರೆಂದೂ ಅಷ್ಟರಲ್ಲಿ ಎರಡು ಅಂತಸ್ತಿನ ಕಟ್ಟಡದಲ್ಲಿ ಸಂಪೂರ್ಣ ಬೆಂಕಿ–ಹೊಗೆ ಆವರಿಸಿದ್ದ ಕಾರಣ ಹೊರಗಡೆ ಹೋಗುವ ದಾರಿಯೇ ಅವರಿಗೆ ಕಾಣಲಿಲ್ಲವೆಂದು ಗೊತ್ತಾಗಿದೆ.

• ಸಕಾಲದಲ್ಲಿ ಸೈನ್ಯಕ್ಕೂ ದಂಗೆಗೆ ಕರೆ– ಜೆ.ಪಿ

ಭುವನೇಶ್ವರ, ಏಪ್ರಿಲ್ 1– ಸರ್ಕಾರದ ವಿರುದ್ಧ ದಂಗೆ ಏಳುವಂತೆ ಶಸಸ್ತ್ರ ಪಡೆ ಹಾಗೂ ಪೊಲೀಸ್ ದಳಗಳಿಗೆ ಕರೆ ಕೊಡಲು ತಾವು ಹಿಂಜರಿಯುವುದಿಲ್ಲ ಎಂದು ಜಯಪ್ರಕಾಶ ನಾರಾಯಣ್ ಅವರು ಸೋಮವಾರ ಇಲ್ಲಿ ಹೇಳಿದರು.

'ಇದಕ್ಕಿನ್ನೂ ಕಾಲ ಬಂದಿಲ್ಲವಾದ್ದರಿಂದ ನಾನಿನ್ನೂ ಅಂತಹ ಕರೆ ಕೊಟ್ಟಿಲ್ಲ' ಎಂದರು.

ಒಡಿಶಾದ ವಿವಿಧ ಕಾಲೇಜುಗಳ ವಿದ್ಯಾರ್ಥಿ ಪ್ರತಿನಿಧಿಗಳ ಸಮಾವೇಶ ವೊಂದನ್ನು ಉದ್ದೇಶಿಸಿ ಮಾತನಾಡಿದ ನಾರಾಯಣ್ ಅವರು, 'ನನ್ನ ವಿರುದ್ಧ ವಿಚಾರಣೆಗೆ ಕ್ರಮ ಹೂಡಲು ನಾನು ಅಂತಹ ಕರೆಯನ್ನೇನಾದರೂ ಕೊಟ್ಟಿದ್ದೇನೆಯೇ' ಎಂಬುದನ್ನು ಪ್ರಧಾನಿಯ ಸಂಶೋಧನೆ ಮತ್ತು ವಿಶ್ಲೇಷಣೆ ವಿಭಾಗವು ತಮ್ಮ ಭಾಷಣಗಳನ್ನು ಪರಿಶೀಲಿಸುತ್ತಿದೆಯೆಂದು ನುಡಿದರು.

ಬಿಹಾರದ ಶೇ 90ರಷ್ಟು ಪೊಲೀಸರು, ಅಧಿಕಾರಿಗಳು ತಮ್ಮ ಪರ ಇದ್ದಾರೆಂದರು.

ಜಾಗತಿಕ ಸಂದರ್ಭದ ಲಾಭ ಪಡೆಯುವ ಹವಣಿಕೆಯಲ್ಲಿ ಎರ್ಡೋಗನ್?

ಟರ್ಕಿ: ಎದುರಾಳಿಯನ್ನು ಜೈಲಿಗೆ ತುರುಕಿ

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ. ಇಪ್ಪತ್ತು ವರ್ಷಗಳಿಂದ ಟರ್ಕಿಯನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿರುವ ಎರ್ಡೋಗನ್ ವಿರುದ್ಧ ಇದೀಗ ಜನ ಸಿಟ್ಟಿಗೆದ್ದಂತೆ ಕಾಣುತ್ತಿದೆ. ಇಸ್ತಾನ್‌ಬುಲ್‌ನ ಜನಪ್ರಿಯ ಮೇಯರ್ ಎಕ್ರಾಂ ಇಮಾಮೊಗ್ಲು ಅವರ ಬಂಧನ ಖಂಡಿಸಿ ಜನ ಬೀದಿಗೆ ಇಳಿದಿದ್ದಾರೆ. ಇಸ್ತಾನ್‌ಬುಲ್‌ನಲ್ಲಿ ಆರಂಭವಾದ ಪ್ರತಿಭಟನೆಯು ಟರ್ಕಿಯ ಬಹುತೇಕ ನಗರಗಳಿಗೆ ಹಬ್ಬಿದೆ. ಎರ್ಡೋಗನ್ ಯಥಾ ಪ್ರಕಾರ, ಪ್ರತಿಭಟನೆಯನ್ನು ಹತ್ತಿಕ್ಕುವ ಕ್ರಮಕ್ಕೆ ಮುಂದಾಗಿದ್ದಾರೆ. ಎರ್ಡೋಗನ್ ಜಾಗತಿಕ ಸಂದರ್ಭದ ಲಾಭ ಪಡೆದು, ತಾವು ಮತ್ತೊಬ್ಬ ಷಿ ಜಿನ್‌ಪಿಂಗ್ ಅಥವಾ ಪುಟಿನ್ ಆಗುವತ್ತ ಹೆಜ್ಜೆ ಇರಿಸಿದ್ದಾರೆಯೇ ಎಂಬ ಪ್ರಶ್ನೆ ಎದ್ದಿದೆ.

ಜಸ್ಟಿಸ್ ಆ್ಯಂಡ್ ಡೆವಲಪ್‌ಮೆಂಟ್ ಪಾರ್ಟಿ ಮೂಲಕ ಅಧಿಕಾರಕ್ಕೆ ಬಂದ ಎರ್ಡೋಗನ್, ಸಿಕ್ಕ ಅಧಿಕಾರವನ್ನು ಉಳಿಸಿಕೊಳ್ಳಲು ಹಾಗೂ ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಲು ವಿವಿಧ ತಂತ್ರಗಳನ್ನು ಹೂಡಿದವರು. ಮೊದಲಿಗೆ ಜನರ ಮತೀಯ ಭಾವನೆಗಳನ್ನು ಬಳಸಿಕೊಂಡರು. ನಂತರ ಅಭಿವೃದ್ಧಿಯ ಮಂತ್ರದಂಡ ಹಿಡಿದು ಜನರಿಗೆ ಕನಸು ತುಂಬಿದರು. ಟರ್ಕಿಯ ರಾಜಕೀಯ ವ್ಯವಸ್ಥೆಯನ್ನು ಸಂಸದೀಯ ಪ್ರಜಾಪ್ರಭುತ್ವದಿಂದ ಅಧ್ಯಕ್ಷೀಯ ಮಾದರಿಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬದಲಾಯಿಸಿದರು. ಸೇನೆ ಮತ್ತು ನ್ಯಾಯಾಂಗವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಮಾಧ್ಯಮಗಳ ಒಡೆತನ ತಮ್ಮ ನಿಕಟವರ್ತಿಗಳ ಬಳಿಯೇ ಇರುವಂತೆ ನೋಡಿಕೊಂಡರು.

ಎರ್ಡೋಗನ್ ತಮಗೆ ಎದುರಾಳಿಯೇ ಇರಬಾರದು ಎಂಬಂತೆ ನಡೆದುಕೊಂಡರು. ವಿರೋಧ ಪಕ್ಷಗಳ ನಾಯಕರ ಮೇಲೆ ಮೊಕದ್ದಮೆಗಳು ದಾಖಲಾದವು. ಹಲವರು ಸೆರೆವಾಸ ಅನುಭವಿಸಬೇಕಾಯಿತು. ಈ ಇಪ್ಪತ್ತು ವರ್ಷಗಳಲ್ಲಿ ರಾಜಕೀಯವಾಗಿ ಎರ್ಡೋಗನ್ ಅವರ ಎದಿರು ಭುಜ ಸೆಟೆಸಿ ನಿಂತವರು ಕಡಿಮೆ. ಇತ್ತೀಚಿನ ವರ್ಷಗಳಲ್ಲಿ ಎರ್ಡೋಗನ್ ಅವರನ್ನು ರಾಜಕೀಯವಾಗಿ ಪ್ರಶ್ನಿಸಿದವರು ಇಮಾಮೊಗ್ಲು.

ಎರ್ಡೋಗನ್ ಅವರು ಇಸ್ತಾನ್‌ಬುಲ್ ಮೇಯರ್ ಆಗಿ ನಂತರ ರಾಜಕೀಯವಾಗಿ ಎತ್ತರಕ್ಕೆ ಏರಿದವರು. ಹಾಗಾಗಿ ಇಸ್ತಾನ್‌ಬುಲ್ ಕುರಿತು ಅವರಿಗೆ ವಿಶೇಷ ಮಮಕಾರ. ಅಲ್ಲಿ ಆಡಳಿತ ಪಕ್ಷದ ಎರಡು ದಶಕಗಳ ಹಿಡಿತವನ್ನು ಕೊನೆಗೊಳಿಸಿ ಇಮಾಮೊಗ್ಲು 2019ರಲ್ಲಿ ಅಲ್ಲಿನ ಮೇಯರ್ ಆದರು. ಫಲಿತಾಂಶವನ್ನು ಸರ್ಕಾರ ಒಪ್ಪಿಕೊಳ್ಳಲಿಲ್ಲ. ಮತ್ತೊಮ್ಮೆ ಚುನಾವಣೆ ನಡೆಸಲಾಯಿತು. ಇಮಾಮೊಗ್ಲು ಮತ್ತೊಮ್ಮೆ ಹೆಚ್ಚಿನ ಅಂತರದಿಂದ ಗೆದ್ದರು. ತಾವು ಬೆಂಬಲಿಸಿದ ಅಭ್ಯರ್ಥಿ ಸೋತಿದ್ದರಿಂದ ಎರ್ಡೋಗನ್ ಅವರಿಗೆ ಮುಖಭಂಗವಾಯಿತು. ಇಮಾಮೊಗ್ಲು ಅವರತ್ತ ವಿರೋಧ ಪಕ್ಷಗಳು ಕಣ್ಣು ನೆಟ್ಟವು.

ಎರ್ಡೋಗನ್ ಅವರನ್ನು 2023ರ ಅಧ್ಯಕ್ಷೀಯ ಚುನಾವಣೆಯಲ್ಲಿ ಎದುರಿಸಲು ಇಮಾಮೊಗ್ಲು ಸಮರ್ಥ ಅಭ್ಯರ್ಥಿ ಎಂದು ವಿರೋಧ ಪಕ್ಷಗಳು ನಿರ್ಧರಿಸಿದವು. ಆದರೆ ಸಾರ್ವಜನಿಕ ಅಧಿಕಾರಿಯನ್ನು ಅವಮಾನಿಸಿದ ಆರೋಪದ ಮೇಲೆ 2022ರಲ್ಲಿ ಇಮಾಮೊಗ್ಲು ಜೈಲು ಸೇರಿದರು! ಹಾಗಾಗಿ 2023ರ ಅಧ್ಯಕ್ಷೀಯ ಚುನಾವಣೆಯಲ್ಲಿ ಇಮಾಮೊಗ್ಲು ಸ್ಪರ್ಧಿಸಲಿಲ್ಲ. ಇಮಾಮೊಗ್ಲು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದರು. 2024ರಲ್ಲಿ ಇಸ್ತಾನ್‌ಬುಲ್ ಮೇಯರ್ ಸ್ಥಾನಕ್ಕೆ ನಡೆದ ಚನಾವಣೆಯಲ್ಲಿ ಸ್ಪರ್ಧಿಸಿ ಮತ್ತೊಮ್ಮೆ ಗೆದ್ದರು. ಎರ್ಡೋಗನ್ ಮೀಸೆ ಮಣ್ಣಾಯಿತು.

ಮತ್ತೊಮ್ಮೆ ವಿರೋಧ ಪಕ್ಷಗಳು ಇಮಾಮೊಗ್ಲು ಅವರ ಸುತ್ತುವರಿದವು. 2028ರಲ್ಲಿ ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ಎರ್ಡೋಗನ್ ವಿರುದ್ಧ ಇಮಾಮೊಗ್ಲು ಅವರನ್ನು ಕಣಕ್ಕೆ ಇಳಿಸಲು ರಿಪಬ್ಲಿಕನ್ ಪೀಪಲ್ಸ್ ಪಾರ್ಟಿ ತಯಾರಿ ನಡೆಸತೊಡಗಿತು. ಮಾರ್ಚ್ 23ರಂದು ಈ ಕುರಿತು ಅಧಿಕೃತ ಘೋಷಣೆಯಾಗುವುದಿತ್ತು, ಆದರೆ ಮಾರ್ಚ್ 19ರಂದು ಇಮಾಮೊಗ್ಲು ಮತ್ತೊಮ್ಮೆ ಬಂಧನಕ್ಕೆ ಒಳಗಾದರು! ಭ್ರಷ್ಟಾಚಾರ ಮತ್ತು ಭಯೋತ್ಪಾದಕ ಸಂಘಟನೆ ಜೊತೆಗಿನ ಸಂಪರ್ಕದ ವಿಷಯವಾಗಿ ಅವರನ್ನು ವಿಚಾರಣೆಗೆ ಒಳಪಡಿಸಿ, ಬಂಧಿಸಲಾಯಿತು. ಜನ ಬೀದಿಗಿಳಿದರು.

ಎರ್ಡೋಗನ್ ಯಥಾಪ್ರಕಾರ ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಕೈಗೊಂಡ ಕ್ರಮವನ್ನು ಜನರನ್ನು ದಂಗೆ ಎಬ್ಬಿಸಲು ಬಳಸಿಕೊಳ್ಳಲಾಗಿದೆ ಎಂದಿದ್ದಾರೆ. ಆದರೆ ಪ್ರತಿಭಟನೆ, ಬಂಧನ ಮುಂದುವರಿದಿದೆ.

ಹಾಗಾದರೆ, ಎರ್ಡೋಗನ್ ತಾವು ಅಧಿಕಾರ ಕಳೆದುಕೊಳ್ಳುವ ಭೀತಿಯಿಂದ ಹೀಗೆ ರಾಜಕೀಯ ಸೇಡಿನ ಕ್ರಮಕ್ಕೆ ಮುಂದಾಗಿರಬಹುದೇ? ಎರ್ಡೋಗನ್ ಅವರ ಅಧ್ಯಕ್ಷೀಯ ಅವಧಿಯು 2028ರಲ್ಲಿ ಕೊನೆಗೊಳ್ಳುತ್ತದೆ. ಟರ್ಕಿಯ ಸಂವಿಧಾನದ ಪ್ರಕಾರ ಐದು ವರ್ಷಗಳ ಎರಡು ಪೂರ್ಣ ಅವಧಿಗೆ ಮಾತ್ರ ಒಬ್ಬ ವ್ಯಕ್ತಿ ಅಧ್ಯಕ್ಷರಾಗಬಹುದು. ಆದರೆ ಅಧಿಕಾರದ ಅವಧಿಯನ್ನು ವಿಸ್ತರಿಸಿಕೊಳ್ಳುವ ಒಂದು ಪಾರುಗಂಡಿ ಟರ್ಕಿಯ ಸಂವಿಧಾನದಲ್ಲಿ ಉಳಿದುಬಿಟ್ಟಿದೆ. ಆ ಪ್ರಕಾರ ಸಂಸತ್ತು ಅವಧಿಪೂರ್ವ ಚುನಾವಣೆ ಕರೆದರೆ, ಅಧ್ಯಕ್ಷರು ಕಾನೂನುಬದ್ಧವಾಗಿ ಮತ್ತೆ ಸ್ಪರ್ಧಿಸಬಹುದು. ಎರ್ಡೋಗನ್ ಈ ಪಾರುಗಂಡಿಯನ್ನು ಬಳಸಿಕೊಳ್ಳುವ ಸಾಧ್ಯತೆ ಇದೆ.

ಒಂದೊಮ್ಮೆ ಅವಧಿಪೂರ್ವ ಚುನಾವಣೆ ಘೋಷಿಸಿದರೆ, 71 ವರ್ಷದ ಎರ್ಡೋಗನ್ 54 ವರ್ಷದ ಇಮಾಮೊಗ್ಲು ವಿರುದ್ಧ ಸೆಣಸಬೇಕಾಗುತ್ತದೆ. ಇಮಾಮೊಗ್ಲು ಅವರ ಜನಪ್ರಿಯತೆ ದಿನದಿಂದ ದಿನಕ್ಕೆ ಏರುತ್ತಿದ್ದರೆ, ಎರ್ಡೋಗನ್ ಅವರ ಜನಪ್ರಿಯತೆ ಮುಕ್ಕಾಗುತ್ತಿದೆ. ಎರ್ಡೋಗನ್ ಅವರ ಅವಧಿಯಲ್ಲಿ ಟರ್ಕಿ ಅಸಾಧಾರಣ ಬೆಳವಣಿಗೆಯನ್ನೇನೂ ಕಂಡಿಲ್ಲ. 2018ರಿಂದ ಹಣದುಬ್ಬರ ಮತ್ತು ಆರ್ಥಿಕ ಕುಸಿತವನ್ನು ಟರ್ಕಿ ಎದುರಿಸುತ್ತಿದೆ. ನಿರುದ್ಯೋಗ ಸಮಸ್ಯೆಯು ಟರ್ಕಿಯನ್ನು ಈಗಲೂ ಕಾಡುತ್ತಿದೆ. ಎರ್ಡೋಗನ್ ನೇತೃತ್ವದ ಸರ್ಕಾರದ ಆರ್ಥಿಕ ನೀತಿಯನ್ನು ಟರ್ಕಿಯ ಕೈಗಾರಿಕೆ ಮತ್ತು ವಾಣಿಜ್ಯ ಮಂಡಳಿ ಬಹಿರಂಗವಾಗಿ ಟೀಕಿಸಿದೆ.

ಟರ್ಕಿಯ ಬೆಳವಣಿಗೆಗೆ ಎರ್ಡೋಗನ್ ಅವರ ಸರ್ವಾಧಿಕಾರಿ ಧೋರಣೆಗಳು ಅಡ್ಡಿಬರುತ್ತಿವೆ ಎಂದು ಹಲವು ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸರ್ಕಾರದ ನೀತಿಯನ್ನು ಟೀಕಿಸಿದವರನ್ನು ವಿವಿಧ ರೀತಿಯಲ್ಲಿ ಬಗ್ಗುಬಡಿಯುವ ಕೆಲಸವೂ ನಡೆಯುತ್ತಿದೆ. ಲಕ್ಷಾಂತರ ಸಿರಿಯನ್ ನಿರಾಶ್ರಿತರಿಗೆ ಟರ್ಕಿಯಲ್ಲಿ ವಾಸಿಸಲು ಅವಕಾಶ ನೀಡುವ ಸರ್ಕಾರದ ಕ್ರಮದ ವಿರುದ್ಧ ರಾಷ್ಟ್ರೀಯತಾವಾದಿ ಆಂದೋಲನ ಪ್ರಾರಂಭವಾಗಿದೆ. 2024ರಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ, ಎರ್ಡೋಗನ್ ತಮ್ಮ ಪಕ್ಷದ ಗೆಲುವಿಗಾಗಿ ತಮ್ಮ ಎಲ್ಲ ಅಧಿಕಾರವನ್ನು ಬಳಸಿದರೂ ಆಡಳಿತ ಪಕ್ಷ ದೊಡ್ಡಮಟ್ಟದ ಸೋಲು ಕಂಡಿದೆ. ಈ ಎಲ್ಲ ಕಾರಣಗಳಿಂದ ಇಮಾಮೊಗ್ಲು ಅವರನ್ನು ಅಧ್ಯಕ್ಷೀಯ ಚುನಾವಣೆಯಲ್ಲಿ ಎದುರಿಸುವುದು ಎರ್ಡೋಗನ್ ಅವರಿಗೆ ಸುಲಭವಲ್ಲ.

ಈ ಬಾರಿ ಇಮಾಮೊಗ್ಲು ಅವರ ವಿರುದ್ಧ ಭಯೋತ್ಪಾದನೆ ಮತ್ತು ಭ್ರಷ್ಟಾಚಾರದ ಗಂಭೀರ ಆರೋಪ ಮಾಡಲಾಗಿದೆ. ಜೊತೆಗೆ ಇಸ್ತಾನ್‌ಬುಲ್ ವಿಶ್ವವಿದ್ಯಾಲಯವು ಉನ್ನತ ಶಿಕ್ಷಣ ಮಂಡಳಿಯ ನಿಯಮಗಳ ಉಲ್ಲಂಘನೆಯ ಆರೋಪದ ಮೇಲೆ ಇಮಾಮೊಗ್ಲು ಅವರ ಡಿಪ್ಲೊಮಾವನ್ನು ರದ್ದುಗೊಳಿಸಿದೆ. ಟರ್ಕಿಯಲ್ಲಿ ಅಧ್ಯಕ್ಷೀಯ ಅಭ್ಯರ್ಥಿಯು ವಿಶ್ವವಿದ್ಯಾಲಯದ ಪದವಿ ಹೊಂದಿರಬೇಕು ಎಂಬ ನಿಯಮವಿದೆ. ಇಮಾಮೊಗ್ಲು ಅವರನ್ನು ಅಧ್ಯಕ್ಷೀಯ ಚುನಾವಣೆಗೆ ಅನರ್ಹಗೊಳಿಸಿ, ಟರ್ಕಿಯ ಅತಿದೊಡ್ಡ ನಗರ ಮತ್ತು ಆರ್ಥಿಕ ಶಕ್ತಿ ಕೇಂದ್ರದ ಮೇಯರ್ ಸ್ಥಾನದಿಂದ ಅವರನ್ನು ಕೆಳಗಿಳಿಸಿದರೆ ತಮ್ಮ ಆತಂಕ ದೂರವಾಗಬಹುದು ಎಂದು ಎರ್ಡೋಗನ್ ನಿರ್ಧರಿಸಿರಬಹುದು.

ಇತ್ತ ಜಾಗತಿಕ ಸಂದರ್ಭವೂ ಬದಲಾಗಿದೆ. ಅಮೆರಿಕದಲ್ಲಿ ಟ್ರಂಪ್ ಅಧ್ಯಕ್ಷರಾಗಿದ್ದಾರೆ. 'ಜಗತ್ತಿನ ಉಸಾಬರಿ ನಮಗೆ ಬೇಡ' ಎಂಬ ನಿಲುವಿನ ಟ್ರಂಪ್, ನ್ಯಾಟೊ ಭಾಗವಾಗಿರುವ ಟರ್ಕಿ, ನಿರಂಕುಶ ಪ್ರಭುತ್ವದತ್ತ ಹೊರಳಿದರೆ ಕಿವಿಹಿಂಡುವ ಪ್ರಯತ್ನ ಮಾಡಲಾರರು. ರಷ್ಯಾ ಮತ್ತು ಚೀನಾದ ಅಧ್ಯಕ್ಷರು, ಸಾಂವಿಧಾನಿಕ ತೊಡಕುಗಳನ್ನು ಕಿತ್ತೊಗೆದು ತಮ್ಮ ಅಧಿಕಾರ ಅವಧಿಯನ್ನು ವಿಸ್ತರಿಸಿಕೊಂಡಿದ್ದಾರೆ. ಇದನ್ನು ಕಂಡಿರುವ ಎರ್ಡೋಗನ್ ತಾವೂ ಪುಟಿನ್ ಆಗಬೇಕು ಎಂದು ಬಯಸಿದ್ದರೆ ಅಚ್ಚರಿಯಿಲ್ಲ.

ಆದರೆ ಟರ್ಕಿ ರಷ್ಯಾ ಅಲ್ಲ. ನೈಸರ್ಗಿಕ ಸಂಪನ್ಮೂಲದಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಷ್ಯಾಕ್ಕಿಂತ ಭಿನ್ನವಾಗಿ, ಟರ್ಕಿಯ ಆರ್ಥಿಕತೆ ವಿದೇಶಿ ಹೂಡಿಕೆ ಮೇಲೆ ಅವಲಂಬಿತವಾಗಿದೆ. ಎರ್ಡೋಗನ್ ಹೆಚ್ಚು ಸರ್ವಾಧಿಕಾರಿಯಾಗುತ್ತಿದ್ದಂತೆ ಹೂಡಿಕೆದಾರರು ಪಲಾಯನ ಮಾಡುತ್ತಿದ್ದಾರೆ. ಒಂದೊಮ್ಮೆ ಟರ್ಕಿ ಪೂರ್ಣ ನಿರಂಕುಶಾಧಿಕಾರಕ್ಕೆ ಜಾರಿದರೆ ಮತ್ತೆ ಹಿಂತಿರುಗುವುದು ಕಷ್ಟ. ಅಟಾಟರ್ಕ್ ಕೆಮಲ್ ಪಾಷ ಕಟ್ಟಿದ ಆಧುನಿಕ ಟರ್ಕಿ ಹೊರಳುದಾರಿಯಲ್ಲಿದೆ.

ಚುರುಮುರಿ



ತಾಜಾ ಹುಲಿ!

• ಚಂದ್ರಕಾಂತ ವಡ್ಡು

ಬೈಟು ಬಳಗದಲ್ಲಿ ಕಾಫಿ ಪೆ ಚರ್ಚಾ ಆರಂಭವಾಯಿತು.

'2024ನೇ ಸಾಲಿನ ಹುಲಿ ಸಮೀಕ್ಷೆ ಬಿಡುಗಡೆಯಾಗಿದೆ, ರಾಜ್ಯದಲ್ಲಿರುವ ಹುಲಿಗಳ ಸಂಖ್ಯೆ 393 ಅಂತೆ'.

'ಈ ಬೆಸ ಸಂಖ್ಯೆಗಳ ಸಮೀಕ್ಷಾ ವರದಿಯನ್ನು ಹೇಗೆ ನಂಬೋದು...?'

'ಜಾತಿ ಜನಗಣತಿ ವರದಿಯೇ ಅಪನಂಬಿಕೆಗೆ ಗುರಿಯಾಗಿ ದೂಳು ತಿನ್ನುತ್ತಿದೆ. ಪ್ರಾಣಿಗಣತಿ ವರದಿ ಅನುಮಾನಾಸ್ಪದವೇ ಸರಿ'.

'ಸಮೀಕ್ಷೆ ಸಿಬ್ಬಂದಿ ನಮ್ಮ ಓಣಿಗೆ ಬಂದೇಯಿಲ್ಲ, ಅವರು ಬಂದಾಗ ನಾವು ಪೇಟೆಗೆ ಹೋಗಿದ್ದೆವು ಅಂತ ಜಾತಿ ಜನಗಣತಿ ವರದಿ ವಿರೋಧಿಸುತ್ತಿದ್ದಾರೆ'.

'ಹೌದು, ಸಮೀಕ್ಷೆ ಸಿಬ್ಬಂದಿ ನಮ್ಮ ಕಾಡಿಗೆ ಕಾಲಿಟ್ಟಿಲ್ಲ, ಅವರು ಬಂದಾಗ ನಾವು ಬೇಟೆಗೆ ಹೋಗಿದ್ದೆವು ಅಂತ ಕೆಲವು ಹುಲಿಗಳೂ ಆಕ್ಷೇಪಣೆ ತೆಗೆಯಬಹುದು'.

'ಸಮೀಕ್ಷೆಯಲ್ಲಿ ಕಾಡಿನ ಹುಲಿಗಳಷ್ಟೇ ಸೇರಿವೆ, ನಾಡಿನ ಹುಲಿಗಳನ್ನು ಕೈಬಿಟ್ಟಿರುವುದು ದೊಡ್ಡ ಲೋಪ'.

'ಶಿಕಾರಿಪುರದ ರಾಜಾಹುಲಿ, ವಿಜಯಪುರದ ಹಿಂದೂ ಹುಲಿ, ಮೈಸೂರಿನ ಟಿಪ್ಪು ಹುಲಿ, ತಮಗಾದ ಅನ್ಯಾಯ ಸಹಿಸೋದಿಲ್ಲ. ಬೀದಿಗಿಳಿದು ಪ್ರತಿಭಟಿಸುತ್ತವೆ. ಹೌದು, ಹುಲಿಯಾ ಅಭಿಮಾನಿಗಳೂ ಸುಮ್ಮನಿರುವುದಿಲ್ಲ'.

'ಕೆಲವು ಹುಲಿಗಳು ಸಂರಕ್ಷಿತ ಪ್ರದೇಶದಿಂದ ಬೇರೆಡೆ ವಲಸೆ ಹೋಗಲು ಯತ್ನಿಸುತ್ತಿವೆಯಂತೆ...'

'ಆ ತಂಡದ ನೇತೃತ್ವವನ್ನು ಹಿಂದೂ ಹುಲಿ ವಹಿಸಿದೆ ಎಂಬ ಸುದ್ದಿಯೂ ಇದೆ'.

'ಇವೆಲ್ಲಾ ಹಳೇ ಹುಲಿಗಳು ಅಷ್ಟಾಗಿ ಗರ್ಜಿಸಲಾರವು. ಬೆಳಗಾವಿಯ ತಾಜಾ ಹುಲಿ ತುಂಬಾ ಜಾಗೃತವಾಗಿದೆ'.

'ಈ ಹುಲಿ ದೆಹಲಿಯಲ್ಲಿ ಸುತ್ತಾಡುತ್ತಾ ಹೊಂಚು ಹಾಕುತ್ತಿದೆಯಂತೆ. ಹೊಳೆನರಸೀಪುರದ ಹುಲಿ ಜೊತೆಗಿನ ಸಲ್ಲಾಪದ ಮಾಹಿತಿ ಇದೆ'.

'ತಾಜಾ ಹುಲಿ ಸುಮ್ಮನೆ ಆರ್.ಎ.ಸಿ. ಟಿಕೇಟು ಹಿಡಕೊಂಡು ಓಡಾಡೋ ಪೈಕಿಯಲ್ಲ, ಕನಕಪುರಕ್ಕೋ, ವರುಣಾಕ್ಕೋ ಟಿಕೆಟ್ ಕನ್ಫರ್ಮ್ ಆದಮೇಲೆಯೇ ರೈಲು ಹತ್ತೋದು', ತಿಂಗಳೇಶ ಭವಿಷ್ಯ ನುಡಿದ.

ಸಂಗತ

ವೃತ್ತಿಪರ ಆಶಯಕ್ಕೆ ಪೂರಕ

ಕೈಗಾರಿಕಾ ವಲಯ ಮತ್ತು ಶೈಕ್ಷಣಿಕ ವಲಯದ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾದರೆ ಕೈಗಾರಿಕಾ ಇಂಟರ್ನ್‌ಶಿಪ್ ಮೂಲ ಗುರಿ ಸಾಧಿಸುವುದು ಕಷ್ಟಸಾಧ್ಯವೇನಲ್ಲ

• ಎಚ್.ಕೆ.ಶರತ್

ಒಂದೂವರೆ ತಿಂಗಳಿನಿಂದ ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಇಂಟರ್ನ್‌ಶಿಪ್ ಮಾಡುತ್ತಿರುವ ಮೂವರು ವಿದ್ಯಾರ್ಥಿಗಳನ್ನು 'ಹೇಗಿದೆ ಕೆಲಸ' ಅಂತ ವಿಚಾರಿಸಿದೆ. ಇಬ್ಬರು, 'ಚೆನ್ನಾಗಿದೆ, ಕಾಲೇಜಲ್ಲಿ ಕಲಿಯೋದಕ್ಕೂ ಅಲ್ಲಿ ಕಲಿಯೋದಕ್ಕೂ ತುಂಬಾ ವ್ಯತ್ಯಾಸ ಇದೆ' ಅಂದರು. ಮತ್ತೊಬ್ಬ, 'ನಂಗಂತೂ ಕೆಲಸ ಮಾಡೋಕೆ ಆಗ್ತಿಲ್ಲ. ಇಂಟರ್ನ್‌ಶಿಪ್ ಮುಗಿಸಿ ವಾಪಸ್ ಬಂದ್ಬಿಡ್ತೀನಿ...' ಅಂದ.

ಎಂಜಿನಿಯರಿಂಗ್ ಅಂತಿಮ ಸೆಮಿಸ್ಟರ್ ವಿದ್ಯಾರ್ಥಿಗಳು ಈ ಬಾರಿ ಕಾಲೇಜಿನ ಬದಲಿಗೆ ಕಂಪನಿಗಳಲ್ಲಿ ಇಂಟರ್ನಿ ಆಗಿ ಕಲಿಯುತ್ತಿದ್ದಾರೆ. ಎಂಟನೇ ಸೆಮಿಸ್ಟರ್‌ನಲ್ಲಿ ಇಂಟರ್ನ್‌ಶಿಪ್ ಮತ್ತು ಆನ್‌ಲೈನ್ ಕೋರ್ಸ್‌ಗಳು ಮಾತ್ರ ಇವೆ. ಹೀಗಾಗಿ ಗಮನಾರ್ಹ ಸಂಖ್ಯೆಯ ವಿದ್ಯಾರ್ಥಿಗಳು ಈಗಾಗಲೇ ಇಂಟರ್ನ್‌ಶಿಪ್ ಸಲುವಾಗಿ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಔದ್ಯೋಗಿಕ ವಲಯದ ಸವಾಲುಗಳಿಗೆ ತಮ್ಮನ್ನು ತೆರೆದುಕೊಳ್ಳುವ ಮೂಲಕ, ಪದವೀಧರರಾಗಿ ಹೊರಹೊಮ್ಮುವ ಮೊದಲೇ ವೃತ್ತಿಪರ ಜಗತ್ತಿನ ಆಗುಹೋಗುಗಳನ್ನು ಅರಿಯುವ ಅವಕಾಶ ದಕ್ಕಿಸಿಕೊಳ್ಳುತ್ತಿದ್ದಾರೆ. ಕೈಗಾರಿಕಾ ವಲಯದಲ್ಲಿ ವೃತ್ತಿ ಬದುಕು ಕಟ್ಟಿಕೊಳ್ಳಲು ಅಗತ್ಯವಿರುವ ಮನೋಭಾವ ಮೈಗೂಡಿಸಿಕೊಳ್ಳಲು ಆಗುವುದೋ ಇಲ್ಲವೋ ಎಂಬುದನ್ನು ಮನಗಾಣಲು ಕೂಡ ಇಂಟರ್ನ್‌ಶಿಪ್ ನೆರವಾಗುತ್ತಿದೆ.

ತಾಂತ್ರಿಕ ಕಾಲೇಜುಗಳಲ್ಲಿ ಕಲಿಸುವುದಕ್ಕೂ ಎಂಜಿನಿಯರಿಂಗ್ ಪದವೀಧರರು ವೃತ್ತಿ ನಿರ್ವಹಿಸಲು ಅಗತ್ಯವಿರುವ ಜ್ಞಾನ ಮತ್ತು ಕೌಶಲಕ್ಕೂ ಅಜಗಜಾಂತರ ಇದೆ ಎನ್ನುವ ಆಕ್ಷೇಪ ಮೊದಲಿನಿಂದಲೂ ಇದೆ. ಉದ್ಯೋಗ ಮಾರುಕಟ್ಟೆಯ ಅಗತ್ಯಗಳನ್ನು ಪೂರೈಸುವ ಗುರಿ ಹೊಂದಿರುವ ವೃತ್ತಿಪರ ಶಿಕ್ಷಣಕ್ಕೆ ಉದ್ಯೋಗದಾತರ ನಿರೀಕ್ಷೆಗಳಿಗೆ ಪೂರಕವಾಗಿ ವಿದ್ಯಾರ್ಥಿಗಳನ್ನು ರೂಪಿಸಬೇಕಾದ ಹೊಣೆಗಾರಿಕೆ ಇದೆ. ಈ ಜವಾಬ್ದಾರಿ ನಿರ್ವಹಿಸುವಲ್ಲಿ ಶೈಕ್ಷಣಿಕ ವಲಯ ವಿಫಲವಾಗಿದೆ ಎನ್ನುವ ಅಭಿಪ್ರಾಯ ಉದ್ಯಮ ವಲಯದಲ್ಲಿ ಬೇರೂರಿದೆ. ಪ್ರಾಯೋಗಿಕ ಕಲಿಕೆಗೆ ಒತ್ತು ನೀಡಿ, ಉದ್ಯೋಗ ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಅಣಿಗೊಳಿಸುವ ಉದ್ದೇಶದಿಂದ ಅಂತಿಮ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಗಳನ್ನು ಕಾಲೇಜಿನ ಬದಲಿಗೆ ಕಂಪನಿಗಳತ್ತ ಮುಖ ಮಾಡಿಸುವ ಸಲುವಾಗಿ ಕೈಗಾರಿಕಾ ಇಂಟರ್ನ್‌ಶಿಪ್ ಪರಿಚಯಿಸಲಾಗಿದೆ.

ಈ ಬದಲಾವಣೆಗೆ ಸಕಾರಾತ್ಮಕವಾಗಿಯೇ ಸ್ಪಂದಿಸುತ್ತಿರುವ ಉದ್ಯಮ ವಲಯವು ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಕೈಗೊಳ್ಳಲು ಅವಕಾಶ ಕಲ್ಪಿಸುತ್ತಿದೆ. ಕ್ಯಾಂಪಸ್ ಸಂದರ್ಶನದ ಮೂಲಕ ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳುವ ಸಂಸ್ಥೆಗಳು ಕೂಡ, ಎಂಟನೇ ಸೆಮಿಸ್ಟರ್ ಶುರುವಿನಲ್ಲೇ ಆಯ್ಕೆಯಾದ ವಿದ್ಯಾರ್ಥಿಗಳನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿವೆ. 14 ರಿಂದ 20 ವಾರಗಳ ಕಾಲ ಇಂಟರ್ನ್‌ಶಿಪ್ ಮಾಡಬೇಕಿರುವುದು ಕಡ್ಡಾಯವಾಗಿರುವ ಕಾರಣ, ವಿದ್ಯಾರ್ಥಿಗಳು ವೇತನರಹಿತವಾಗಿ ಅಥವಾ ಅತ್ಯಲ್ಪ ವೇತನ ಸಿಕ್ಕರೂ ಕೆಲಸ ನಿರ್ವಹಿಸಲು ಮುಂದಾಗುತ್ತಿದ್ದಾರೆ.

ಕೋರ್ ಎಂಜಿನಿಯರಿಂಗ್ ಕ್ಷೇತ್ರಗಳೆಂದು ಪರಿಗಣಿಸಲಾಗುವ ಸಿವಿಲ್, ಎಲೆಕ್ಟ್ರಿಕಲ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ತಮ್ಮ ಕಲಿಕಾ ಕ್ಷೇತ್ರಕ್ಕೆ ಸಂಬಂಧಿಸಿದ ನಿರ್ಮಾಣ ಹಾಗೂ ಉತ್ಪಾದನಾ ಕಂಪನಿಗಳಲ್ಲಿ ಅತ್ಯಲ್ಪ ಕಾಲವಾದರೂ ಕೆಲಸ ಮಾಡುವ ಸನ್ನಿವೇಶ ಸೃಷ್ಟಿಯಾಗುತ್ತಿದೆ. ಪದವಿ ನಂತರ ಸಾಫ್ಟ್‌ವೇರ್ ಕ್ಷೇತ್ರಕ್ಕೆ ಹೋಗುವುದು ಸೂಕ್ತವೋ ಅಥವಾ ತಮ್ಮ ಪದವಿಗೆ ಪೂರಕವಾದ ಕ್ಷೇತ್ರದಲ್ಲಿಯೇ ವೃತ್ತಿ ಬದುಕು ಕಟ್ಟಿಕೊಳ್ಳಬಹುದೋ ಎನ್ನುವ ಗೊಂದಲಕ್ಕೆ ಉತ್ತರ ಕಂಡುಕೊಳ್ಳಲು ಕೂಡ ಇಂಟರ್ನ್‌ಶಿಪ್ ವೇಳೆ ಪಡೆದುಕೊಳ್ಳುವ ವೃತ್ತಿ ಅನುಭವ ನೆರವಾಗಲಿದೆ.

ಕೈಗಾರಿಕಾ ಇಂಟರ್ನ್‌ಶಿಪ್ ಮೂಲ ಉದ್ದೇಶಕ್ಕೆ ಅನುಗುಣವಾಗಿ ಕಂಪನಿಗಳಲ್ಲಿ ಪೂರ್ಣಾವಧಿ ಕೆಲಸ ಮಾಡುತ್ತಾ ಕಲಿಯುವ ವಿದ್ಯಾರ್ಥಿಗಳ ಪಾಲಿಗೆ ಇದು ಆಶಾದಾಯಕ ಬೆಳವಣಿಗೆಯಂತೆ ಭಾಸವಾಗುತ್ತಿದೆ. ಕೈಗಾರಿಕಾ ಇಂಟರ್ನ್‌ಶಿಪ್ ಬದಲಿಗೆ ತಾವು ಓದುತ್ತಿರುವ ಕಾಲೇಜು ಅಥವಾ ಯಾವುದಾದರೂ ಸಂಶೋಧನಾ ಕೇಂದ್ರದಲ್ಲಿ ಸಂಶೋಧನಾ ಇಂಟರ್ನ್‌ಶಿಪ್ ಮಾಡಲು ಕೂಡ ಅವಕಾಶ ಇದೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕೈಗಾರಿಕಾ ಇಂಟರ್ನ್‌ಶಿಪ್ ಅನ್ನೇ ಆಯ್ದುಕೊಳ್ಳುತ್ತಿದ್ದಾರೆ. ಈ ಮೊದಲು ಕೂಡ ಎಂಜಿನಿಯರಿಂಗ್ ಪಠ್ಯಕ್ರಮದಲ್ಲಿ ಇಂಟರ್ನ್‌ಶಿಪ್‌ಗೆ ಅವಕಾಶ ಕಲ್ಪಿಸಲಾಗಿತ್ತಾದರೂ ಅದನ್ನು ಕೈಗಾರಿಕೆಗಳ ಅಗತ್ಯಕ್ಕೆ ತಕ್ಕಂತೆ ವಿನ್ಯಾಸಗೊಳಿಸದೇ ಇದ್ದುದರಿಂದ ಅದರ ಆಶಯ ಈಡೇರಿರಲಿಲ್ಲ. ಇದೀಗ ಅಂತಿಮ ಸೆಮಿಸ್ಟರ್ ಅನ್ನು ಇಂಟರ್ನ್‌ಶಿಪ್‌ಗೆ ಮೀಸಲು ಇರಿಸಿರುವುದರಿಂದ ವಿದ್ಯಾರ್ಥಿಗಳು ಹಾಗೂ ಉದ್ಯೋಗದಾತರು ಇಬ್ಬರಿಗೂ ಪೂರಕವಾಗಿದೆ.



ಕೈಗಾರಿಕಾ ವಲಯ ಮತ್ತು ಶೈಕ್ಷಣಿಕ ವಲಯದ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾದರೆ ಕೈಗಾರಿಕಾ ಇಂಟರ್ನ್‌ಶಿಪ್‌ನ ಮೂಲ ಗುರಿ ಸಾಧಿಸುವುದು ಕಷ್ಟಸಾಧ್ಯವೇನಲ್ಲ. ಕೈಗಾರಿಕಾ ಇಂಟರ್ನ್‌ಶಿಪ್‌ನ ಸಾಧಕ– ಬಾಧಕಗಳನ್ನು ಪರಾಮರ್ಶಿಸಿ, ವಿದ್ಯಾರ್ಥಿ ಸಮೂಹ ಮತ್ತು ಉದ್ಯಮ ವಲಯ ಎರಡಕ್ಕೂ ಪೂರಕವಾಗುವಂತೆ ಈ ಉಪಕ್ರಮವನ್ನು ಮರುವಿನ್ಯಾಸಗೊಳಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಿದೆ. ಎಂಜಿನಿಯರಿಂಗ್ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೂ ಲಭ್ಯವಿರುವ ಉದ್ಯೋಗಾವಕಾಶಗಳಿಗೂ ಅಂತರವಿರುವಾಗ ಎಲ್ಲರಿಗೂ ಕೈಗಾರಿಕಾ ಇಂಟರ್ನ್‌ಶಿಪ್ ಅವಕಾಶಗಳು ದೊರೆಯುವಂತೆ ನೋಡಿಕೊಳ್ಳುವುದೇ ಸವಾಲು. ಇದನ್ನು ಮೀರಲು ಇರುವ ಪರ್ಯಾಯಗಳ ಕುರಿತೂ ಚಿಂತಿಸುವ ಅಗತ್ಯತೆ ಇದೆ.

ವಾಚಕರ ವಾಣಿ

ಅಪ್ಪ ಹಾಕಿದ ಆಲ ಆಗದಿರಲಿ

ರಾಷ್ಟ್ರೀಯ ಸ್ವಯಂಸೇವಕ ಸಂಘವು ಭಾರತದ ಅಮರ ಸಂಸ್ಕೃತಿಯ 'ಆಲದ ಮರ' ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿರುವುದು ವರದಿಯಾಗಿದೆ (ಪ್ರ.ವಾ., ಏ.1). ಹಳೆಯ, ಶ್ರೇಷ್ಠ, ಪುರಾತನ ಎನ್ನುವ ಅರ್ಥದಲ್ಲಿ ಆಲದ ಮರಕ್ಕೆ ಹೋಲಿಕೆ ಇದೆಯಾದರೂ ಮುಂದುವರಿದು 'ಅಪ್ಪ ಹಾಕಿದ ಆಲ ಅಂತ ಅದಕ್ಕೇ ನೇಣು ಹಾಕಿಕೊಳ್ಳಬಾರದು' ಎಂಬ ನೀತಿಯನ್ನೂ ಮಕ್ಕಳಿಗೆ ಹೇಳುವುದಿದೆ. ಅಂದರೆ, ಆಲ ಅಪ್ಪನ ಸಂಕೇತವಾಗಿ ಎಷ್ಟೇ ಶ್ರೇಷ್ಠವಾದರೂ ಬದುಕು ನವನವೀನ. ಕಾಲಕ್ಕೆ ತಕ್ಕಂತೆ ಬದಲಾಗಬೇಕು ಎನ್ನುವ ಸಲಹೆಯನ್ನೂ ಎಚ್ಚರಿಕೆಯನ್ನೂ ನೀಡುವ ಪರಿ ಅದು.

ನೂರು ವರ್ಷಗಳ ಇತಿಹಾಸ ಹೊಂದಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘವು ಅಷ್ಟೇನೂ ಪುರಾತನವಲ್ಲ. ಆದರೆ, ಅದು ನಂಬಿರುವ ಚಾತುರ್ವರ್ಣ ಕಲ್ಪನೆ ಮಾತ್ರ ಬಹಳ ಪುರಾತನ. ಅದನ್ನೇ ಅವರು ಸನಾತನ ಅಂತಲೂ ಕರೆಯುತ್ತಾರೆ. ಇವತ್ತಿನ ಪ್ರಜಾಪ್ರಭುತ್ವಕ್ಕೆ ಚಾತುರ್ವರ್ಣ ತತ್ವ ಹೊಂದಿಕೆ ಆಗುವುದಿಲ್ಲ. ಧರ್ಮ ಅನ್ನುವುದು ನಿಂತ ನೀರಾಗದೆ, ಕಾಲಕಾಲಕ್ಕಾಗುವ ಬದುಕಿನ ಬದಲಾವಣೆಗಳನ್ನು ಸೇರಿಸಿಕೊಂಡು ಹೊಸದಾಗಬೇಕು. ಆದ್ದರಿಂದ ಈ ಸಂಘವು ಅಪ್ಪ ಹಾಕಿದ ಆಲವಾಗದೆ, ಹಳತನ್ನೆಲ್ಲಾ ಕೊಚ್ಚಿ ಹರಿಯುವ 'ಜೀವನದಿ' ಆಗಲೆಂದು ಬಯಸಬಹುದೇ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ವಿಸ್ತೃತ ಚರ್ಚೆ ಅಗತ್ಯ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸ್ಥಾಪನೆಯ ಸಾಧಕ-ಬಾಧಕ ಕುರಿತು ಕಾತ್ಯಾಯಿನಿ ಚಾಮರಾಜ್ (ಚರ್ಚೆ, ಪ್ರ.ವಾ., ಮಾರ್ಚ್ 29) ಅವರ ಅಭಿಪ್ರಾಯವು ಮನನೀಯವಾಗಿದೆ. ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ಕುರಿತು ಸಮರ್ಪಕ ಚರ್ಚೆಯೇ ನಡೆಯದಿರುವಾಗ, ಇದರ ಹಿಂದಿನ ಉದ್ದೇಶಗಳೇ ಸಾರ್ವಜನಿಕರಿಗೆ ಸ್ಪಷ್ಟವಾಗಿಲ್ಲದಿರುವಾಗ, ಇದನ್ನು ತರಾತುರಿಯಲ್ಲಿ ಜಾರಿ ಮಾಡಲು ಹುನ್ನಾರ ನಡೆಯುತ್ತಿದೆ ಎಂಬ ಸಂಶಯ ಉಂಟಾಗಿದೆ. ಹಾಗಾಗಿ, ಈ ಕುರಿತು ವಿಸ್ತೃತ ಚರ್ಚೆಯ ಅಗತ್ಯ ಇದೆ. ಆ ಬಳಿಕ ಜಾರಿಗೆ ಸೂಕ್ತ ಪ್ರಕ್ರಿಯೆಯನ್ನು ಆರಂಭಿಸುವುದು ಒಳ್ಳೆಯದು ಎಂದು ಅನ್ನಿಸುತ್ತದೆ.

ಪ್ರೊ.ಎಂ.ಎಸ್.ರಘುನಾಥ್, ಬೆಂಗಳೂರು

ಇತಿಹಾಸ ತಿರುಚಿದರೂ ಸತ್ಯಕ್ಕೆ ಸಾವಿಲ್ಲ

ನಮಗೆ ಬೇಡವಾದ ಅಥವಾ ಇಷ್ಟ ಇಲ್ಲದವರ ಸಮಾಧಿ ಸ್ಥಳಾಂತರಿಸುವುದರಿಂದ ಹಾಗೂ ರಸ್ತೆ ಮತ್ತು ಊರಿನ ಹೆಸರನ್ನು ಬದಲಾಯಿಸುವುದರಿಂದ ನಮ್ಮ ಇತಿಹಾಸ ಬದಲಾಗುವುದಿಲ್ಲ. ಇತಿಹಾಸವನ್ನು ತಿರುಚಿದರೂ ಸತ್ಯ ಸಾಯುವುದಿಲ್ಲ. ಇದನ್ನು ಅರಿತು ನಡೆದರೆ, ಸಾಮರಸ್ಯದ ಬದುಕಿಗೆ ನೀರು–ಗೊಬ್ಬರ ಎರೆದರೆ ಎಲ್ಲರಿಗೂ ಕ್ಷೇಮ, ನೆಮ್ಮದಿ; ಶಾಂತಿ ಮತ್ತು ದೇಶದ ಅಭಿವೃದ್ಧಿಗೂ ಪೂರಕ.

ಎಚ್.ಎಸ್. ಚಂದ್ರಶೇಖರ, ಬೆಂಗಳೂರು

ಮತ್ತಷ್ಟು ವಸತಿ ಬಡಾವಣೆಗಳ ಅಗತ್ಯವಿದೆಯೇ?

ಕರ್ನಾಟಕದಲ್ಲಿ ವಸತಿ ಸಮಸ್ಯೆ ಪರಿಹರಿಸಲು ಕರ್ನಾಟಕ ಗೃಹ ಮಂಡಳಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಹಲವಾರು ವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಿವೆ. ಬೆಂಗಳೂರು ಸುತ್ತಮುತ್ತಲಿನ ವಿವಿಧ ಪ್ರದೇಶಗಳಲ್ಲಿ ಸಾವಿರಾರು ಅರ್ಜಿದಾರರಿಗೆ ನಿವೇಶನಗಳನ್ನೂ ಹಸ್ತಾಂತರಿಸಿವೆ. ಅದೇ ರೀತಿ, ನೂರಾರು ಖಾಸಗಿ ರಿಯಲ್ ಎಸ್ಟೇಟ್ ಸಂಸ್ಥೆಗಳೂ ಬೆಂಗಳೂರಿನ ಸುತ್ತಮುತ್ತ ಸಾವಿರಾರು ಎಕರೆ ಪ್ರದೇಶದಲ್ಲಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ಮಾರಾಟ ಮಾಡಿವೆ. ಆದರೆ, ಈ ನಿವೇಶನಗಳನ್ನು ಮಾರಾಟ ಮಾಡಿ ದಶಕಗಳಾದರೂ ಹಲವಾರು ಬಡಾವಣೆಗಳಲ್ಲಿ ಮೂಲಸೌಕರ್ಯಗಳ ಕೊರತೆಯಿಂದ ಬಲು ಕಡಿಮೆ ಸಂಖ್ಯೆಯಲ್ಲಿ ಮಾತ್ರ ಮನೆಗಳ ನಿರ್ಮಾಣವಾಗಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ, ಈ ಎರಡು- ಮೂರು ದಶಕಗಳಲ್ಲಿ ಬೆಂಗಳೂರಿನಲ್ಲಿ ನಿವೇಶನಗಳ ಬೆಲೆ ತೀವ್ರವಾಗಿ ಏರಿಕೆಯಾಗಿ, ಬಹುತೇಕ ಖರೀದಿದಾರರು ಹೂಡಿಕೆ ದೃಷ್ಟಿಯಿಂದ ಮಾತ್ರ ನಿವೇಶನಗಳನ್ನು ಖರೀದಿಸುತ್ತಿರುವುದು.

ಇದೀಗ ಬಿಡದಿ ಬಳಿ ಸ್ಮಾರ್ಟ್ ಸಿಟಿ ನಿರ್ಮಿಸಲು ಬಿಡಿಎ ಯೋಜನೆ ಹಮ್ಮಿಕೊಂಡಿದ್ದು, ಇದಕ್ಕಾಗಿ ಸುಮಾರು 9,000 ಎಕರೆ ಜಮೀನಿನ ಅಗತ್ಯವಿದೆ. ಆದರೆ, ಅಗತ್ಯಕ್ಕಿಂತ ಹೆಚ್ಚು ಬಡಾವಣೆಗಳ ಅಭಿವೃದ್ಧಿಯಿಂದ ಸಾವಿರಾರು ಎಕರೆ ಕೃಷಿ ಭೂಮಿ ಕಡಿಮೆಯಾಗುವುದರ ಜೊತೆಗೆ ಮೂಲಸೌಕರ್ಯ ಒದಗಿಸುವಲ್ಲಿ ಸಂಬಂಧಪಟ್ಟ ಇಲಾಖೆಗಳು ತೊಂದರೆಗೆ ಒಳಗಾಗುತ್ತವೆ. ಆದಕಾರಣ, ಈಗಾಗಲೇ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಕನಿಷ್ಠ ಶೇ 90ರಷ್ಟು ಮನೆಗಳ ನಿರ್ಮಾಣವಾಗುವವರೆಗೆ ಹೊಸ ಬಡಾವಣೆ ರೂಪಿಸುವುದನ್ನು ನಿಯಂತ್ರಿಸಿ, ಕೃಷಿ ಭೂಮಿಯನ್ನು ಸಂರಕ್ಷಿಸುವತ್ತ ಸರ್ಕಾರ ಗಮನಹರಿಸುವ ಅಗತ್ಯವಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ದುಂದುವೆಚ್ಚಕ್ಕೆ ಬೀಳಲಿ ಕಡಿವಾಣ

ಈ ತಿಂಗಳ ಒಂದರಿಂದ ಅನ್ವಯ ಆಗುವಂತೆ ಸರ್ಕಾರವು ಎಲ್ಲ ವರ್ಗದವರು ನಿತ್ಯಜೀವನದಲ್ಲಿ ಬಳಸುವ ಹಾಲು, ಮೊಸರು, ತುಪ್ಪ ಮತ್ತು ವಿದ್ಯುತ್ ದರವನ್ನು ಹೆಚ್ಚಿಸಿ ರಾಜ್ಯದ ಜನರ ಬದುಕಿನ ಮೇಲೆ ಒಂದು ರೀತಿಯಲ್ಲಿ ಬರೆ ಎಳೆದಿದೆ. ಹಾಲು–ಮೊಸರಿನ ದರ ಪ್ರತಿ ಲೀಟರ್‌ಗೆ ₹ 4ರಷ್ಟು ಹೆಚ್ಚಳ ಆಗಿದೆ. ವಿದ್ಯುತ್ ದರ ಹೆಚ್ಚಿಸಿ ಗ್ರಾಹಕರಿಗೆ ಆಘಾತ ನೀಡಲಾಗಿದೆ.

ಬೆಲೆ ಏರಿಕೆಯ ಈ ದಿನಗಳಲ್ಲಿ ಬಡವರು ಬದುಕು ನಡೆಸುವುದೇ ದುಸ್ತರವಾಗಿದೆ. ಅದರೊಂದಿಗೆ ಈ ಬೆಲೆ ಏರಿಕೆಯ ಹೊರೆ ಬೇರೆ. ಸರ್ಕಾರ ಮತ್ತು ಅದರ ಅಧೀನ ಸಂಸ್ಥೆಗಳು ದುಂದುವೆಚ್ಚಕ್ಕೆ ಕಡಿವಾಣ ಹಾಕಿದರೆ, ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡರೆ ಎಷ್ಟೋ ಸಂದರ್ಭಗಳಲ್ಲಿ ಬೆಲೆ ಏರಿಕೆ ಅನಿವಾರ್ಯ ಆಗುವುದಿಲ್ಲ. ಈ ದಿಸೆಯಲ್ಲಿ ಸರ್ಕಾರ ಈಗಲಾದರೂ ಗಂಭೀರವಾಗಿ ಯೋಚಿಸಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಾಂಗ್ಲಾ ಚೀನಾಕ್ಕೆ ಹತ್ತಿರ ಭಾರತದಿಂದ ದೂರ

ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ತಮ್ಮ ಭಾರತ ವಿರೋಧಿ ಮನೋಭಾವವನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾರೆ. ಭಾರತದ ಏಳು ಈಶಾನ್ಯ ರಾಜ್ಯಗಳಿಗೆ ಸಮುದ್ರ ಮಾರ್ಗದ ನೇರ ಸಂಪರ್ಕ ಇಲ್ಲದಿರುವ ಬಗ್ಗೆ ಅವರು ಪ್ರಸ್ತಾಪಿಸಿದ್ದಾರೆ. ಬಾಂಗ್ಲಾದ ಕರಾವಳಿಯನ್ನು ಬಳಸಿಕೊಂಡು ತನ್ನ ಆರ್ಥಿಕ ಚಟುವಟಿಕೆ ವಿಸ್ತರಿಸಿಕೊಳ್ಳುವಂತೆ ಚೀನಾಕ್ಕೆ ಆಹ್ವಾನ ನೀಡಿದ್ದಾರೆ. ಯೂನುಸ್ ಅವರ ಹೇಳಿಕೆಯಿಂದ ಎರಡು ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಮತ್ತಷ್ಟು ಹದಗೆಡುವ ಆತಂಕ ಎದುರಾಗಿದೆ

ಭಾರತದ ಮೇಲೆ ಮುನಿಸೇಕೆ?

- ಹಿಂದೂ ಬಾಹುಳ್ಯದ ರಾಷ್ಟ್ರ ತನ್ನ ಮೇಲೆ ನಿಯಂತ್ರಣ ಹೇರಲು ಯತ್ನಿಸುತ್ತಿದೆ ಎನ್ನುವ ಮನೋಭಾವ
- ದೇಶದಿಂದ ಪಲಾಯನ ಮಾಡಿದ ಪದಚ್ಯುತ ಪ್ರಧಾನಿ ಶೇಖ್ ಹಸೀನಾಗೆ ಭಾರತ ನೀಡಿದ ಆಶ್ರಯ
- ಬಾಂಗ್ಲಾದಲ್ಲಿ ಸರ್ಕಾರ ಬದಲಾದ ನಂತರ ಅಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿ, ಅದರಲ್ಲೂ ಪ್ರಮುಖವಾಗಿ ಹಿಂದೂಗಳ ಮೇಲೆ ನಡೆದ ದಾಳಿಯನ್ನು ಭಾರತ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸ್ತಾಪಿಸಿದ್ದು
- ಶೇಖ್ ಹಸೀನಾ ಅವರನ್ನು ವಾಪಸ್ ಕಳುಹಿಸುವಂತೆ ಮಾಡಿದ ಮನವಿಗೆ ಭಾರತ ಸಕಾರಾತ್ಮಕವಾಗಿ ಸ್ಪಂದಿಸದೇ ಇರುವುದು
- ಶೇಖ್ ಹಸೀನಾ ಅವರು ಇತ್ತೀಚೆಗೆ ಭಾರತದಿಂದಲೇ ಬಾಂಗ್ಲಾದೇಶದ ಜನರನ್ನು ಉದ್ದೇಶಿಸಿ ಮಾತನಾಡಿದ್ದು

ಪ್ರಜಾವಾಣಿ ವಾರ್ತೆ

15 ವರ್ಷ ಬಾಂಗ್ಲಾದೇಶದ ಪ್ರಧಾನಿಯಾಗಿದ್ದ ಶೇಖ್ ಹಸೀನಾ ಅವರ ಸರ್ಕಾರ ಪತನಗೊಂಡ ನಂತರ ರಚನೆಯಾದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರರಾಗಿ ಆರ್ಥಿಕ ತಜ್ಞ, ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನುಸ್ ನೇಮಕವಾದಾಗ ಭಾರತವೂ ಸೇರಿ ಅನೇಕ ರಾಷ್ಟ್ರಗಳು ನಿಟ್ಟುಸಿರುಬಿಟ್ಟಿದ್ದವು. ಬಾಂಗ್ಲಾದ ಅರಾಜಕ ಸ್ಥಿತಿಯನ್ನು ತಹಬಂದಿಗೆ ತಂದು, ನೆರೆಯ ರಾಷ್ಟ್ರಗಳೊಂದಿಗೆ ಸೌಹಾರ್ದ ಸಂಬಂಧ ಮುಂದುವರಿಸುತ್ತಾರೆ ಎನ್ನುವುದು ಭಾರತದ ನಿರೀಕ್ಷೆಯಾಗಿತ್ತು. ಆದರೆ, ಯೂನುಸ್ ಅದಕ್ಕೆ ತದ್ವಿರುದ್ಧ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ಚೀನಾದ ನೆಲದಲ್ಲಿ ನಿಂತು ಭಾರತದ ಬಗ್ಗೆ ಅವರು ಆಡಿರುವ ಮಾತುಗಳು ಇದಕ್ಕೆ ಇತ್ತೀಚಿನ ನಿದರ್ಶನ.

‘ಭಾರತದ ಏಳು ಸಹೋದರಿಯರು ಎಂದು ಕರೆಯಲಾಗುವ ಈಶಾನ್ಯ ರಾಜ್ಯಗಳಿಗೆ ಸಮುದ್ರದೊಂದಿಗೆ ನೇರ ಸಂಪರ್ಕ ಇಲ್ಲ. ನಾವೇ ಸಮುದ್ರದ ಮೇಲೆ ನಿಯಂತ್ರಣ ಹೊಂದಿದ್ದೇವೆ. ಇದು ವಿಪುಲ ಅವಕಾಶಗಳನ್ನು ಸೃಷ್ಟಿಸಿದೆ. ಚೀನಾ ದೇಶವು ಈ ಸಮುದ್ರ ಭಾಗವನ್ನು ತನ್ನ ಆರ್ಥಿಕ ಚಟುವಟಿಕೆಗಳ ವಿಸ್ತರಣೆಗೆ ಬಳಸಿಕೊಳ್ಳಬಹುದು. ಚೀನಾ ಇಲ್ಲಿ ತಮ್ಮ ಉತ್ಪನ್ನಗಳನ್ನು ತಯಾರಿಕೆ ಮಾಡಬಹುದು, ಮಾರಾಟ ಮಾಡಬಹುದು. ಇಡೀ ಜಗತ್ತಿಗೆ ಇಲ್ಲಿಂದ ವಸ್ತುಗಳನ್ನು ಪೂರೈಕೆ ಮಾಡಬಹುದು’ ಎಂದು ಚೀನಾಕ್ಕೆ ಭೇಟಿ ನೀಡಿದ್ದ ಯೂನುಸ್ ಅವರು ಹೇಳಿದ್ದಾರೆ. ಭಾರತದ ಆ ನಿರ್ದಿಷ್ಟ ಪ್ರಾಂತ್ಯದ ಭೌಗೋಳಿಕ ರಚನೆಯ ಅನನುಕೂಲವೇ ತಮಗೆ ಒದಗಿದ ಅವಕಾಶ ಎನ್ನುವಂತೆ ಅವರು ಮಾತನಾಡಿದ್ದಾರೆ. ಭಾರತ ಹಾಗೂ ಬಾಂಗ್ಲಾ ನಡುವಿನ ಸೌಹಾರ್ದ ಇತಿಹಾಸವನ್ನು ಯೂನುಸ್ ಮರೆತಂತೆ ವರ್ತಿಸಿದ್ದಾರೆ.

ಯೂನುಸ್ ಅವರ ಹೇಳಿಕೆಯ ವಿರುದ್ಧ ಭಾರತದಲ್ಲಿ ಆಕ್ರೋಶ ವ್ಯಕ್ತವಾಗಿದೆ. ‘ಚಿಕನ್ ನೆಕ್’ಗೆ ಪರ್ಯಾಯ ಮಾರ್ಗ ಹುಡುಕುವುದೂ ಸೇರಿದಂತೆ ಹಲವು ರೀತಿಯ ಕ್ರಮ ಕೈಗೊಳ್ಳಬೇಕು ಎಂದು ಕೆಲವು ಮುಖಂಡರು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ. ಆದರೆ, ಬಾಂಗ್ಲಾದ ಪರಿಸ್ಥಿತಿ ಸಂಕೀರ್ಣವಾಗಿದ್ದು, ಅದರೊಂದಿಗೆ ಭಾರತ ಯಾವ ರೀತಿಯ ಸಂಬಂಧ ಮುಂದುವರಿಸಬೇಕು ಎನ್ನುವ ಬಗ್ಗೆ ಎಚ್ಚರಿಕೆಯಿಂದ ಪರಿಶೀಲಿಸಬೇಕು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸಂಬಂಧದಲ್ಲಿ ಮತ್ತಷ್ಟು ಬಿರುಕು

ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತವೂ ಮಹತ್ವದ ಪಾತ್ರ ವಹಿಸಿತ್ತು. ಪಾಕಿಸ್ತಾನದಿಂದ ಹೊರಬಂದು ಪ್ರತ್ಯೇಕ ರಾಷ್ಟ್ರವಾದ ಮೇಲೆ ಅದಕ್ಕೆ ಹಲವು ವಿಧದಲ್ಲಿ ನೆರವು ನೀಡಿದ್ದು ಭಾರತ. ಉಭಯ ರಾಷ್ಟ್ರಗಳ ನಡುವಿನ ಸಂಬಂಧ ಉತ್ತಮವಾಗಿತ್ತು. ಜತೆಗೆ, ಎರಡೂ ದೇಶಗಳ ನಡುವೆ ವ್ಯಾಪಾರ ವ್ಯವಹಾರಗಳು ನಡೆಯುತ್ತಿದ್ದವು. ಅದಕ್ಕಿಂತಲೂ ಹೆಚ್ಚಾಗಿ, ಮುಸ್ಲಿಂ ಬಾಹುಳ್ಯದ ಬಾಂಗ್ಲಾ ದೇಶವು ಭಾರತದ ಮಟ್ಟಿಗೆ ಉತ್ತಮ ನೆರೆಯ ರಾಷ್ಟ್ರವಾಗಿತ್ತು. ಶೇಖ್ ಹಸೀನಾ ಅವರು ಪ್ರಧಾನಿ ಆಗಿರುವವರೆಗೂ ಭಾರತ–ಬಾಂಗ್ಲಾ ಸಂಬಂಧ ಉತ್ತಮವಾಗಿಯೇ ಇತ್ತು. ಆದರೆ, ಕಾಲೇಜು ವಿದ್ಯಾರ್ಥಿಗಳ ದಂಗೆಯಿಂದ ಹಸೀನಾ ಪದಚ್ಯುತರಾಗಿ ನಿರ್ಣಾಯಕ ಸ್ಥಾನಕ್ಕೆ ಮೊಹಮ್ಮದ್ ಯೂನಸ್ ಏರಿದ ನಂತರ ಭಾರತ ವಿರೋಧಿ ಭಾವನೆ ಬಾಂಗ್ಲಾದೇಶದಲ್ಲಿ ಹೆಚ್ಚುತ್ತಿದೆ. ಅದನ್ನು ಯೂನುಸ್ ಅವರೂ ನೀರೆರೆದು ಪೋಷಿಸುತ್ತಿದ್ದಾರೆ.

ಹಿಂದೂಗಳ ಪ್ರಾಬಲ್ಯದ ಭಾರತವು ನೆರೆಯ ಶೋಷಕ ರಾಷ್ಟ್ರವಾಗಿದೆ ಎನ್ನುವ ಭಾವನೆಯನ್ನು ಅಲ್ಲಿನ ಯುವಜನರಲ್ಲಿ ಬಿತ್ತಲಾಗುತ್ತಿದೆ. ಮುಸ್ಲಿಂ ಮೂಲಭೂತವಾದಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ. ಯೂನುಸ್ ಅವರು ದೇಶದ ವಿದೇಶಾಂಗ ನೀತಿಯನ್ನು ಬದಲಿಸಿದ್ದು, ನೆರೆಯ ಪಾಕಿಸ್ತಾನದೊಂದಿಗೆ ವಾಣಿಜ್ಯ, ಸೇನೆ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಉತ್ತಮಪಡಿಸಿಕೊಳ್ಳುವ ಪ್ರಯತ್ನ ನಡೆಸುತ್ತಿದ್ದಾರೆ.

ಆಧಾರ: ಪಿಟಿಐ

ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಯೂನುಸ್

ಹೆಚ್ಚುತ್ತಿರುವ ಚೀನಾ ಪ್ರಭಾವ

ಯೂನುಸ್ ಮುಖ್ಯ ಸಲಹೆಗಾರರಾದ ನಂತರ ಬಾಂಗ್ಲಾದೇಶದ ಮೇಲೆ ಚೀನಾದ ಪ್ರಭಾವ ಹೆಚ್ಚಾಗುತ್ತಿದೆ. ಯೂನುಸ್ ಅವರು ಚೀನಾ ತಮ್ಮ ಅತ್ಯುತ್ತಮ ಸ್ನೇಹಿತ ಎಂದು ಪುನರುಚ್ಚರಿಸುತ್ತಲೇ ಇದ್ದಾರೆ. ತಮ್ಮ ಸ್ನೇಹವು ಎರಡೂ ದೇಶಗಳ ಸೇನೆ ಮತ್ತು ವಾಣಿಜ್ಯ ಒಪ್ಪಂದ, ವ್ಯವಹಾರಗಳಿಗೆ ದಾರಿಯಾಗಬೇಕು ಎಂದೂ ಅವರು ಪ್ರತಿಪಾದಿಸುತ್ತಿದ್ದಾರೆ. ಚೀನಾ, ಪಾಕಿಸ್ತಾನಕ್ಕೆ ಹತ್ತಿರವಾದಷ್ಟೂ ಬಾಂಗ್ಲಾವು ಭಾರತದಿಂದ ದೂರ ಸರಿಯುತ್ತಿದೆ ಎನ್ನುವುದು ಇಲ್ಲಿ ಗಮನಾರ್ಹ. ಅಲ್ಲಿನ ಚಿತ್ತಗಾಂಗ್ ಮತ್ತು ಮೊಂಗ್ಲಾ ಬಂದರುಗಳ ಮೂಲಕ ಸರಕುಗಳನ್ನು ಸಾಗಿಸಲು ಭಾರತಕ್ಕೆ ಅವಕಾಶ ನೀಡುವುದಾಗಿ ಈ ಹಿಂದೆ ಭರವಸೆ ನೀಡಿದ್ದ ಬಾಂಗ್ಲಾ, ಈಗ ಈ ಬಂದರುಗಳ ಸೌಲಭ್ಯ ವಿಸ್ತರಣೆ ಮತ್ತು ಆಧುನೀಕರಣದಲ್ಲಿ ಪಾಲ್ಗೊಳ್ಳುವಂತೆ ಚೀನಾಕ್ಕೆ ಆಹ್ವಾನ ನೀಡಿದೆ. ತೀಸ್ತಾ ನದಿಗೆ ಸಂಬಂಧಿಸಿದಂತೆಯೂ ಭಾರತದೊಂದಿಗೆ ಬಾಂಗ್ಲಾ ಇದೇ ರೀತಿ ವ್ಯವಹರಿಸಿದೆ.

ಶೇಖ್ ಹಸೀನಾ ಅವರ ಪದಚ್ಯುತಿಯ ನಂತರ ಬಾಂಗ್ಲಾದಲ್ಲಿ ಜಮಾತ್ ಎ ಇಸ್ಲಾಮಿ ಪಕ್ಷದ ಮೇಲಿನ ನಿಷೇಧವನ್ನು ಮಧ್ಯಂತರ ಸರ್ಕಾರ ತೆರವುಗೊಳಿಸಿತ್ತು. ಅನೇಕ ಇಸ್ಲಾಮಿಸ್ಟ್ ಮುಖಂಡರನ್ನು ಜೈಲುಗಳಿಂದ ಬಿಡುಗಡೆ ಮಾಡಲಾಗಿತ್ತು. ಭಾರತ ವಿರೋಧಿ, ಹಿಂದೂ ವಿರೋಧಿ ಮನೋಭಾವದಿಂದ ಕೆಲವು ಪ್ರದೇಶಗಳಲ್ಲಿ ಹಿಂದೂಗಳ ಮೇಲೆ ದಾಳಿಗಳು ನಡೆದಿದ್ದವು.

‘ಆ್ಯಕ್ಟ್ ಈಸ್ಟ್’ ನೀತಿ ಮೇಲೆ ಪರಿಣಾಮ

ಮೊದಲೇ ಕುಂಟುತ್ತಾ ಸಾಗುತ್ತಿದ್ದ ಭಾರತದ ‘ಆ್ಯಕ್ಟ್ ಈಸ್ಟ್’ (ಪೂರ್ವಭಾಗದ ದೇಶಗಳ ಜತೆಗಿನ ಸಂಬಂಧ ವೃದ್ಧಿ) ನೀತಿಯ ಮೇಲೂ ಬಾಂಗ್ಲಾದೇಶದ ಬೆಳವಣಿಗೆಗಳು ಪರಿಣಾಮ ಬೀರಲಿವೆ. ಏಷ್ಯಾದ ಪ್ರಬಲ ರಾಷ್ಟ್ರವಾಗುವ ದಿಸೆಯಲ್ಲಿ ಹೆಜ್ಜೆ ಇಡುತ್ತಿದ್ದ ಭಾರತದ ಮಹತ್ವಾಕಾಂಕ್ಷೆಗೆ ಬಾಂಗ್ಲಾ ಅಡ್ಡಿಯಾಗಬಹುದು ಎನ್ನುವ ವಿಶ್ಲೇಷಣೆ ಇದೆ.

ಬಾಂಗ್ಲಾದಲ್ಲಿ ಅರಾಜಕ, ಅಸ್ಥಿರ ವಾತಾವರಣ ಇದ್ದು, ಕೋಮುವಾದ ಹೆಚ್ಚಾಗುತ್ತಿದೆ. ಸಾಮಾಜಿಕ, ಆರ್ಥಿಕ ಪರಿಸ್ಥಿತಿಯು ಹದಗೆಡುತ್ತಿದ್ದು, ಮಾನವ ಹಕ್ಕುಗಳ ಸ್ಥಿತಿ ಕಳವಳಕಾರಿಯಾಗಿದೆ. ದೇಶದಲ್ಲಿ 2025ರ ಒಳಗೆ ಚುನಾವಣೆಗಳು ನಡೆದು ಹೊಸ ಸರ್ಕಾರ ರಚನೆಯಾಗಬೇಕು. ಆದರೆ, ಅದು ಸಾಧ್ಯವಾಗುವ ಬಗ್ಗೆಯೂ ಅನುಮಾನಗಳಿವೆ.

ತೀಸ್ತಾ ನದಿ ಯೋಜನೆ ಭಾರತದ ಆತಂಕ ಏನು?

ಸಿಕ್ಕಿಂನಲ್ಲಿ ಹುಟ್ಟಿ, ಪಶ್ಚಿಮ ಬಂಗಾಳದ ಮೂಲಕ ಬಾಂಗ್ಲಾದತ್ತ ಹರಿದು ನಂತರ ಬ್ರಹ್ಮಪುತ್ರ ನದಿಯನ್ನು ಸೇರುವ ತೀಸ್ತಾ ನದಿಯನ್ನು ಸಂರಕ್ಷಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ಯೂನುಸ್ ಅವರು ಚೀನಾಕ್ಕೆ ಮನವಿ ಮಾಡಿರುವುದು ಕೂಡ ಭಾರತದ ಕಳವಳಕ್ಕೆ ಕಾರಣವಾಗಿದೆ. ಬಾಂಗ್ಲಾದೇಶವು ₹8,500 ಕೋಟಿ ವೆಚ್ಚದಲ್ಲಿ ತೀಸ್ತಾ ನದಿ ಸಮಗ್ರ ನಿರ್ವಹಣೆ ಮತ್ತು ಪುನರುಜ್ಜೀವನ ಯೋಜನೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ತೀಸ್ತಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಎರಡೂ ರಾಷ್ಟ್ರಗಳು ಮಾತುಕತೆಯಲ್ಲಿ ತೊಡಗಿರುವುದರಿಂದ ಈ ಯೋಜನೆ ಬಗ್ಗೆ ಭಾರತ ಆಸಕ್ತಿ ಹೊಂದಿದೆ. ಈ ಯೋಜನೆಗೆ ಹಣಕಾಸು ನೆರವು ನೀಡುವುದರ ಜೊತೆಗೆ, ಅನುಷ್ಠಾನದ ಹೊಣೆ ಹೊರಲು ಚೀನಾ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಶೇಖ್ ಹಸೀನಾ ನೇತೃತ್ವದ ಹಿಂದಿನ ಸರ್ಕಾರವು ಭಾರತ ಈ ಯೋಜನೆ ಕೈಗೆತ್ತಿಕೊಳ್ಳಬೇಕು ಎಂದು ಬಯಸಿತ್ತು. ಈ ಯೋಜನೆಗೆ ಸಂಬಂಧಿಸಿದಂತೆ ಬಾಂಗ್ಲಾದ ಮಧ್ಯಂತರ ಸರ್ಕಾರದ ನಿಲುವು ಬದಲಾಗಿದ್ದು, ಅದು ಚೀನಾದತ್ತ ವಾಲಿದೆ.

ತೀಸ್ತಾ ನದಿ ಹರಿಯುವ ಪ್ರದೇಶ ಚಿಕನ್ ನೆಕ್ ಪ್ರದೇಶಕ್ಕೆ ಸಮೀಪದಲ್ಲೇ ಇದ್ದು, ಚೀನಾವು ಈ ಯೋಜನೆಯನ್ನು ಕೈಗೆತ್ತಿಕೊಂಡರೆ ಆ ಪ್ರದೇಶದಲ್ಲಿ ಚೀನಾದ ನಾಗರಿಕರ ಉಪಸ್ಥಿತಿ ಇರಲಿದ್ದು, ಇದು ದೇಶದ ಭದ್ರತೆಯ ದೃಷ್ಟಿಯಿಂದ ಒಳಿತಲ್ಲ. ಜೊತೆಗೆ ತೀಸ್ತಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಭಾರತ ಮತ್ತು ಬಾಂಗ್ಲಾದೇಶದ ನಡುವಿನ ಒಪ್ಪಂದ 2011ರಿಂದಲೂ ನನೆಗುದಿಗೆ ಬಿದ್ದಿದೆ. ನೀರು ಹಂಚಿಕೆ ಒಪ್ಪಂದಕ್ಕೆ ಪಶ್ಚಿಮ ಬಂಗಾಳ ತೀವ್ರ ವಿರೋಧ ವ್ಯಕ್ತಪಡಿಸಿರುವುದರಿಂದ ಮಾತುಕತೆ ಮುಂದುವರಿದಿಲ್ಲ. ಒಂದು ವೇಳೆ ತೀಸ್ತಾ ನದಿ ಯೋಜನೆಯನ್ನು ಚೀನಾ ಅನುಷ್ಠಾನಗೊಳಿಸಿದರೆ, ಅದು ನದಿ ನೀರು ಹಂಚಿಕೆ ಮಾತುಕತೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ ಎನ್ನುವ ಕಳವಳ ಭಾರತದ್ದು.



‘ಚಿಕನ್ ನೆಕ್’ ಪ್ರಾಮುಖ್ಯ ಏನು?

ಭಾರತದ ಈಶಾನ್ಯ ದಿಕ್ಕಿನಲ್ಲಿರುವ ರಾಜ್ಯಗಳನ್ನು ದೇಶದ ಇತರ ಭಾಗಗಳೊಂದಿಗೆ ಸಂಪರ್ಕಿಸುವ ಏಕೈಕ ಕೊಂಡಿ ಚಿಕನ್ ನೆಕ್ ಪ್ರದೇಶ. ಪಶ್ಚಿಮ ಬಂಗಾಳದ ಸಿಲಿಗುರಿ ವ್ಯಾಪ್ತಿಯಲ್ಲಿ ಈ ಜಾಗ ಇದೆ. ಅಲ್ಲಿನ ಭೌಗೋಳಿಕ ರಚನೆ ಕೋಳಿಯ ಕತ್ತಿನ ಆಕಾರದಲ್ಲಿರುವುದರಿಂದ ಅದನ್ನು ‘ಚಿಕನ್ ನೆಕ್’ ಎಂದು ಕರೆಯಲಾಗಿದೆ. ಈ ಪ್ರದೇಶವನ್ನು ‘ಸಿಲಿಗುರಿ ಕಾರಿಡಾರ್’ ಎಂದೂ ಕರೆಯಲಾಗುತ್ತದೆ. ಈ ಕಾರಿಡಾರ್ 60 ಕಿ.ಮೀ ಉದ್ದವಿದ್ದು, 22 ಕಿ.ಮೀನಷ್ಟು ಅಗಲವಿದೆ. ಕೆಲವು ಕಡೆಗಳಲ್ಲಿ ಈ ಅಗಲ 17 ಕಿ.ಮೀ. ವರೆಗೂ ಕುಗ್ಗುತ್ತದೆ. ರಕ್ಷಣಾ ಕಾರ್ಯತಂತ್ರದ ಉದ್ದೇಶದಿಂದಲೂ ಭಾರತದ ಪಾಲಿಗೆ ಈ ಪ್ರದೇಶ ಮುಖ್ಯವಾಗುತ್ತದೆ.

ಸಿಲಿಗುರಿ ಕಾರಿಡಾರ್ ಒಂದು ಕಡೆಯಲ್ಲಿ ನೇಪಾಳ, ಇನ್ನೊಂದು ಬದಿಯಲ್ಲಿ ಬಾಂಗ್ಲಾದೇಶ ಮತ್ತು ಮತ್ತೊಂದು ಕಡೆಯಲ್ಲಿ ಭೂತಾನ್‌ಗೂ ಹೊಂದಿಕೊಂಡಿದೆ. ಸಿಕ್ಕಿಂ ಮತ್ತು ಭೂತಾನ್‌ನ ಮಧ್ಯ ಇರುವ ಟಿಬೆಟ್ ಪ್ರದೇಶದ ಚಂಬಿ ಕಣಿವೆಯ ಹಿಡಿತವನ್ನು ಚೀನಾ ಹೊಂದಿದೆ. ಭಾರತದ ಅರುಣಾಚಲ ಪ್ರದೇಶವನ್ನು ಚೀನಾ ತನ್ನದೆಂದು ಹೇಳಿಕೊಳ್ಳುತ್ತಿದೆ. ಸಿಲಿಗುರಿ ಕಾರಿಡಾರ್, ಚೀನಾ ನಿಯಂತ್ರಣದಲ್ಲಿರುವ ಪ್ರದೇಶದಿಂದ 130 ಕಿ.ಮೀನಷ್ಟು ದೂರದಲ್ಲಿದೆಯಷ್ಟೆ. ಒಂದು ವೇಳೆ ಚೀನಾ ಸೇನೆಗೆ ಈ ಪ್ರದೇಶದ ನಿಯಂತ್ರಣ ಸಾಧ್ಯವಾದರೆ, ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕ ಕಡಿತಗೊಳ್ಳುತ್ತದೆ. ಇದು ದೇಶದ ಭದ್ರತೆಗೆ ಧಕ್ಕೆ ಉಂಟುಮಾಡಲಿದೆ ಎಂಬುದು ಭಾರತದ ಕಳವಳ.

ಬಣ್ಣ ಹಚ್ಚಿದ ಸಚಿವ ಲಾಡ್

ಚಿತ್ರತಂಡದೊಂದಿಗೆ ಸಂತೋಷ್ ಲಾಡ್

ರಾಜಕೀಯಕ್ಕೂ ಸಿನಿಮಾಕ್ಕೂ ಎಲ್ಲಿಲ್ಲದ ನಂಟು. ರಾಜಕಾರಣಿಗಳು ಸಿನಿಮಾಕ್ಕಾಗಿ ಬಣ್ಣ ಹಚ್ಚುವುದು ಹೊಸತೇನಲ್ಲ. ಇದೀಗ ಆ ಸಾಲಿಗೆ ಸಚಿವ ಸಂತೋಷ್ ಲಾಡ್ ಸೇರ್ಪಡೆಗೊಂಡಿದ್ದಾರೆ. ಎಂ.ಎಲ್.ಪ್ರಸನ್ನ ನಿರ್ದೇಶನದ ‘ಭಾರತಿ ಟೀಚರ್’ ಚಿತ್ರದಲ್ಲಿ ಲಾಡ್ ನಟಿಸಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಟೀಸರ್ ಬಿಡುಗಡೆಗೊಂಡಿದೆ.

‘ಚಿತ್ರದ ಕಥೆ ಇಷ್ಟವಾಯಿತು. ಈ ಚಿತ್ರದಲ್ಲಿ ನಟಿಸಲು ನಾಗೇಂದ್ರ ಪ್ರಸಾದ್ ಕಾರಣ. ಜಿಲ್ಲಾಧಿಕಾರಿ ಪಾತ್ರದಲ್ಲಿ ನಟಿಸುತ್ತಿದ್ದೇನೆ. ನನ್ನ ಭಾಗದ ಚಿತ್ರೀಕರಣ ಸ್ವಲ್ಪ ಬಾಕಿಯಿದೆ. ಪಾತ್ರಕ್ಕೆ ನ್ಯಾಯ ಒದಗಿಸುತ್ತೇನೆ ಎಂಬ ನಂಬಿಕೆ ಇದೆ. ಜೊತೆಗೆ ಹೇಗೆ ನಟಿಸಿದ್ದೇನೆ ಎಂಬ ಭಯವೂ ಇದೆ. ಸಿಹಿಕಹಿ ಚಂದ್ರು ಅವರ ಹಳೆಯ ಚಿತ್ರಗಳನ್ನು ನೋಡಿ ಬೆಳೆದವನು. ಅಂಥವರ ಜೊತೆ ನಟಿಸಿದ್ದು ಅದೃಷ್ಟ ಎಂದು ಭಾವಿಸುವೆ’ ಎಂದರು ಲಾಡ್.

‘ಈ ತಲೆಮಾರಿನ ಮಕ್ಕಳಲ್ಲಿ ಕಲಿಯುವ ಮತ್ತು ಕಲಿಸುವ ಕಿಚ್ಚನ್ನು ಹುಟ್ಟುಹಾಕಬೇಕು. ಇಂತಹ ಸಾತ್ವಿಕ ಆಶಯಕ್ಕೆ ಸಾರ್ವಜನಿಕರ ಬೆಂಬಲ ಅವಶ್ಯವಾಗಿದೆ. ಅದಕ್ಕಿಂತ ಹೆಚ್ಚಾಗಿ ಸರ್ಕಾರ ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧ್ಯ ಆಗುತ್ತದೆ ಎಂಬುದನ್ನು ಈ ಚಿತ್ರದ ಮೂಲಕ ಹೇಳುತ್ತಿದ್ದೇವೆ. ಅಂತಿಮ ಹಂತದ ಚಿತ್ರೀಕರಣ ಬಾಕಿ ಇದೆ’ ಎಂದರು ನಿರ್ದೇಶಕರು.

ಉದ್ಯಮಿ ರಾಘವೇಂದ್ರ ರೆಡ್ಡಿ ಬಂಡವಾಳ ಹೂಡಿದ್ದಾರೆ. ಸಿಹಿಕಹಿ ಚಂದ್ರು, ಕು.ಯಶಿಕಾ, ಗೋವಿಂದೇಗೌಡ, ಅಶ್ವಿನ್ ಹಾಸನ್, ದಿವ್ಯಾ ಅಂಚನ್ ಮೊದಲಾದವರು ಚಿತ್ರದಲ್ಲಿದ್ದಾರೆ. ಚಿತ್ರಕ್ಕೆ ನಿರ್ದೇಶಕರೇ ಸಂಗೀತ ನೀಡಿದ್ದಾರೆ. ಎಂ.ಬಿ.ಹಳ್ಳಿಕಟ್ಟಿ ಛಾಯಾಚಿತ್ರಗ್ರಹಣ, ಸುಜಿತ್ ನಾಯಕ್ ಸಂಕಲನವಿದೆ.

ಮಕ್ಕಳ ಕಥೆಯ ‘ಸೀಸ್ ಕಡ್ಡಿ’



ಚಿತ್ರದ ಪೋಸ್ಟರ್

ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡಿದ್ದ ಮಕ್ಕಳ ಚಿತ್ರ ‘ಸೀಸ್ ಕಡ್ಡಿ’ ತೆರೆಗೆ ಬರಲು ಸಜ್ಜಾಗಿದೆ. ರತನ್ ಗಂಗಾಧರ್ ನಿರ್ದೇಶನದ ಚಿತ್ರವಿದು.

‘ಸೀಸ್ ಕಡ್ಡಿ ಎಂಬುದು ನಮ್ಮೆಲ್ಲರ ಪಾಲಿಗೆ ಅಕ್ಷರದ ಬೆಳಕು ತೋರುವ ವಸ್ತು. ಪೆನ್ಸಿಲ್ ಅನ್ನು ರೂಪಕವಾಗಿಟ್ಟುಕೊಂಡು, ಅದರ ಭಾಗವಾಗಿರುವ ಲೆಡ್, ಶಾರ್ಪ್‌ನರ್, ಎರೇಸರ್ ಮುಂತಾದವುಗಳನ್ನು ಹೋಲುವ ಪಾತ್ರಗಳ ಮೂಲಕ ಕಥೆ ಹೇಳಿದ್ದೇವೆ. ಮೇ ತಿಂಗಳಲ್ಲಿ ಚಿತ್ರ ಬಿಡುಗಡೆ ಆಲೋಚನೆಯಿದೆ’ ಎಂದಿದ್ದಾರೆ ರತನ್.

ಸಂಪತ್ ಶಿವಶಂಕರ್, ಕೃತಿ ನಾಣಯ್ಯ ಜೊತೆಗೆ ನಿರ್ದೇಶಕರು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಕೆ.ಸಿ ಬಾಲಸಾರಂಗನ್ ಸಂಗೀತವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಬಾಂಗ್ಲಾ ದೇಶದಲ್ಲಿ ಹಿಂದೂಗಳು ವಾಸಿಸುತ್ತಿರುವ ಕಾಲೊನಿಯೊಂದಕ್ಕೆ ಬೆಂಕಿ ಹಚ್ಚಲಾಗಿದೆ ಎಂದು ಹೇಳಿಕೊಂಡು ಇನ್‌ಸ್ಟಾಗ್ರಾಂ ಬಳಕೆದಾರರು ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದರು. ಇದನ್ನು ಹಲವರು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು. ವಿಡಿಯೊ ಬಾಂಗ್ಲಾದೇಶದ್ದಲ್ಲ.

ವಿಡಿಯೊದ ಕೀಫ್ರೇಮ್‌ಗಳನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ, ಈ ವರ್ಷದ ಜನವರಿ 2ರಂದು ಯಂಗ್ ಬುಲ್ ಎಂಬುವವರು ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದ ವಿಡಿಯೊವೊಂದು ಸಿಕ್ಕಿತು. ಅವರು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊವನ್ನೇ ಪೋಸ್ಟ್ ಮಾಡಿದ್ದರು. ಆ ವಿಡಿಯೊದ ಶೀರ್ಷಿಕೆಯಲ್ಲಿ ಘಾನಾ ದೇಶದ ಅಕ್ರಾದ ಕಂಟಮಾಂಟೊ ಮಾರುಕಟ್ಟೆಯಲ್ಲಿ ನಡೆದ ಬೆಂಕಿ ಅನಾಹುತ ನಡೆದಿರುವ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಇದರ ಆಧಾರದಲ್ಲಿ ಘಾನಾದಲ್ಲಿ ನಡೆದಿದ್ದ ಬೆಂಕಿ ಅವಘಡದ ಕುರಿತಂತೆ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಅಂಕೆರ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಪ್ರಕಟಿಸಿದ ಅಧ್ಯಯನ ವರದಿಯೊಂದು ಸಿಕ್ಕಿತು. ವರದಿಯಲ್ಲಿ ಇದ್ದ ಚಿತ್ರವೊಂದು, ವಿಡಿಯೊದ ಕೀಫ್ರೇಮ್ ಒಂದನ್ನು ಹೋಲುತ್ತಿತ್ತು. ಅಲ್ಲದೇ, ಅಗ್ನಿ ದುರಂತಕ್ಕೆ ಕಾರಣ ಏನು ಎಂಬುದರ ವಿವರವೂ ಅದರಲ್ಲಿತ್ತು. ಹಾಗಾಗಿ, ಘಾನಾದಲ್ಲಿ ನಡೆದ ಬೆಂಕಿ ಅನಾಹುತವನ್ನು ಬಾಂಗ್ಲಾದೇಶದಲ್ಲಿ ಹಿಂದೂ ಕಾಲೊನಿಗೆ ತಳಕು ಹಾಕಲಾಗಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ಮಾಡಿದೆ.

ಗುಂಡಣ್ಣ

ಹದವರಿತು ಇಂದ್ರಿಯ ಬಳಸಬೇಕು!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

164

ನಾವು ವಾಸಿಸುವ ಈ ಭೂಮಿ ಶಕ್ತಿಕೇಂದ್ರ. ಇಲ್ಲಿ ಒಂದು ಶಕ್ತಿಯ ಸೆಳೆತ ಇದೆ; ವಸ್ತು ವಸ್ತುಗಳ ಮಧ್ಯೆ, ವಸ್ತು ವ್ಯಕ್ತಿಗಳ ಮಧ್ಯೆ, ವ್ಯಕ್ತಿ ವ್ಯಕ್ತಿಗಳ ಮಧ್ಯೆ ಒಂದು ಶಕ್ತಿಯ ಸೆಳೆತ ಕಾಣುತ್ತದೆ. ಆ ಸೆಳೆತಕ್ಕೆ ನಾವು ಆಕರ್ಷಣೆ ಎಂದು ಕರೆಯುತ್ತೇವೆ. ಸೂರ್ಯನ ಸುತ್ತ ಭೂಮಿ ತಿರುಗುತ್ತಿದೆ. ಭೂಮಿ ಮತ್ತು ಸೂರ್ಯನ ಮಧ್ಯೆ ಒಂದು ಆಕರ್ಷಣೆ ಇದೆ. ಅದಕ್ಕೆ ಭೂಮಿ ಸೂರ್ಯನ ಸುತ್ತವೇ ತಿರುಗುತ್ತಿದೆ. ಭೂಮಿ ಕಾಣುತ್ತದೆ, ಸೂರ್ಯನೂ ಕಾಣುತ್ತಾನೆ. ಆದರೆ ಭೂಮಿ ಮತ್ತು ಸೂರ್ಯನ ನಡುವೆ ಇರುವ ಆಕರ್ಷಣೆಯ ಶಕ್ತಿ ಕಾಣುವುದಿಲ್ಲ. ಯಾವುದೇ ವಸ್ತುವನ್ನು ಮೇಲೆಕ್ಕೆ ಎಸೆದರೆ ಅದು ಕೆಳಕ್ಕೆ ಬೀಳುತ್ತದೆ. ಯಾಕೆಂದರೆ, ಭೂಮಿಗೆ ಗುರುತ್ವಾಕರ್ಷಣೆ ಶಕ್ತಿ ಇದೆ. ದೀಪದ ಹುಳುಗಳೂ ಹಾಗೇ. ದೀಪಕ್ಕೆ ಬಂದು ಮುತ್ತು ಕೊಟ್ಟು ಸುಟ್ಟು ಬೀಳುತ್ತವೆ. ದೀಪದ ರೂಪಕ್ಕೆ ಮರುಳಾಗಿ ದೀಪಕ್ಕೆ ಮುತ್ತಿಡುತ್ತವೆ. ಅದಕ್ಕೇನು ರುಚಿಯೂ ಇಲ್ಲ, ವಾಸನೆಯೂ ಇಲ್ಲ. ಆದರೂ ದೀಪಕ್ಕೆ ಮುತ್ತಿಕ್ಕುತ್ತವೆ. ಅಂದರೆ ದೀಪಕ್ಕೂ ಒಂದು ಆಕರ್ಷಣೆಯ ಶಕ್ತಿ ಇದೆ.

ಒಬ್ಬ ಬೇಟೆಗಾರ ಬಲೆ ಬೀಸಿದ. ಅದರ ನಡುವೆ ಒಂದಿಷ್ಟು ಕಾಳುಗಳನ್ನು ಬಿಸಾಕಿದ. ಮರದ ಮೇಲೆ ಇದ್ದ ಹಕ್ಕಿಯೊಂದು ಅದರಿಂದ ಆಕರ್ಷಿತವಾಯಿತು. ಆಗ ಮುದಿ ಪಕ್ಷಿ ಆ ಯುವ ಪಕ್ಷಿಗೆ ‘ಕಾಳು ತಿನ್ನಲು ಹೋಗಬೇಡ. ಹೋದರೆ ಬಲೆಯಲ್ಲಿ ಸಿಕ್ಕಿ ಬೀಳುತ್ತಿ. ಇಲ್ಲೇ ಮರದಲ್ಲಿ ಬೇಕಾದಷ್ಟು ಹಣ್ಣುಗಳಿವೆ. ಅದನ್ನು ತಿನ್ನು. ಪಕ್ಕದಲ್ಲಿ ಬೇಕಾದಷ್ಟು ನೀರಿದೆ. ಅದನ್ನು ಕುಡಿ’ ಎಂದು ಹೇಳಿತು. ಆದರೆ, ಯುವ ಪಕ್ಷಿ ಕೇಳದೇ ಕಾಳು ತಿನ್ನಲು ಹೋಗಿ ಬಲೆಗೆ ಸಿಕ್ಕಿಬಿತ್ತು. ಇದಕ್ಕೆ ಕಾರಣ ಸೆಳೆತ. ಬರೀ ಹೊರಗಷ್ಟೇ ಆಕರ್ಷಣೆ ಇಲ್ಲ. ನಮ್ಮ ಒಳಗೂ ಆಕರ್ಷಣೆ ಇದೆ. ನಮ್ಮ ಮನಸ್ಸು ಕಣ್ಣಿನಿಂದ ಯಾವುದಾದರೂ ಒಂದು ರೂಪವನ್ನು ನೋಡಿತು ಎಂದರೆ ಆಕರ್ಷಣೆಗೆ ಒಳಗಾಗುತ್ತದೆ. ಕಿವಿಯಿಂದ ಏನಾದರೂ ಕೇಳಿದರೆ, ಚರ್ಮಕ್ಕೆ ಏನಾದರೂ ಸ್ಪರ್ಶವಾದರೂ ಆಕರ್ಷಣೆ ಶುರುವಾಗುತ್ತದೆ. ನಾಲಿಗೆ ಏನಾದರೂ ರುಚಿ ನೋಡಿತು ಎಂದರೆ, ಮತ್ತೆ ಮತ್ತೆ ಅದನ್ನೇ ತಿನ್ನಬೇಕು ಎಂಬ ಆಕರ್ಷಣೆಗೆ ಒಳಗಾಗುತ್ತದೆ.

ಗಂಡು ಹೆಣ್ಣಿನ ನಡುವೆಯೂ ಆಕರ್ಷಣೆ ಇದೆ. ರಾಜ್ಯವನ್ನು ತ್ಯಜಿಸಿ ಋಷಿಯಾಗಲು ಬಂದು ತಪಸ್ಸಿಗೆ ಕುಳಿತ ವಿಶ್ವಾಮಿತ್ರ ಸುಮ್ಮನೆ ಒಂದು ಗೆಜ್ಜೆಯ ಆಕರ್ಷಣೆಗೆ ಒಳಗಾಗಿದ್ದ. ಆಕರ್ಷಣೆಯ ಕಾರಣಕ್ಕೆ ಜನ ಬೀಡಿ ಸಿಗರೇಟ್, ಕುಡಿತದ ದಾಸರಾಗುತ್ತಾರೆ. ಕಣ್ಣು, ಕಿವಿ, ನಾಲಿಗೆ, ಚರ್ಮ ಎಲ್ಲವೂ ಆಕರ್ಷಣೆಗೆ ಒಳಗಾಗುತ್ತವೆ. ನೋಡಿ, ನೋಡಿ ಕಣ್ಣಿಗೆ ಕನ್ನಡಕ ಬಂದರೂ ನೋಡುವ ಹಸಿವು ಮುಗಿಯೋದಿಲ್ಲ ಕಣ್ಣಿಗೆ, ಕಿವಿಗೆ ಮಿಶಿನ್ ಬಂದರೂ ಕೇಳುವ ಚಟ ಬಿಟ್ಟಿಲ್ಲ. ಹಲ್ಲುಗಳು ಮುರಿದು ಬಿದ್ದರೂ ತಿನ್ನಬಾರದು ಅನಿಸಿಲ್ಲ. ಅಂದ್ರೆ ಈ ಜಗತ್ತಿನಲ್ಲಿ ಇಂದ್ರಿಯ ಮತ್ತು ವಿಷಯಗಳನ್ನು ಅನುಭವಿಸಿ ಮುಗಿಸುತ್ತೀವಿ ಅನ್ನುವವರು ಯಾರೂ ಇಲ್ಲ. ಅನುಭವಿಸದೆ ಬಿಟ್ಟರೆ ಇಂದ್ರಿಯಗಳು ಕೆಡುತ್ತವೆ. ಮಿತಿಮೀರಿ ಅನುಭವಿಸಿದರೆ ಅವು ನಮ್ಮನ್ನು ಕೆಡಿಸುತ್ತವೆ. ಅಂದರೆ ಇಂದ್ರಿಯಗಳನ್ನು ಹದವರಿತು ಬಳಸಬೇಕು. ಅದಕ್ಕೆ ಪತಂಜಲಿ ಮಹರ್ಷಿಗಳು ಬ್ರಹ್ಮಚರ್ಯ ಎಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಏಪ್ರಿಲ್ 2, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ಪಂಚಮಿ ಗಂ. 23-50 **ನಕ್ಷತ್ರ:** ಕೃತ್ತಿಕಾ ಗಂ. 08-50 **ಯೋಗ:** ಪ್ರೀತಿ ಗಂ. 06-07 ನಂತರ ಆಯುಷ್ಮಾನ್ ಗಂ. 26-50 **ಕರಣ:** ಬವ ಗಂ. 13-08, ಮೀನ ಮಾಸದ 19 ನೇ ದಿನ, ಮಳೆನಕ್ಷತ್ರ: ರೇವತಿ 1.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-29 **ಸೂರ್ಯಾಸ್ತ:** 06-39
ಮುಸ್ಲಿಂ ದಿನಾಂಕ: 03 ಶವ್ವಾಲ್
ಅದೃಷ್ಟ ಸಂಖ್ಯೆ: 12, 7

ಮೇಷ: ಮಹಿಳಾ ಉದ್ಯೋಗಿಗಳಿಗೆ ಅಧಿಕ ಕೆಲಸದ ಜೊತೆಯಲ್ಲಿ ಹೆಚ್ಚಿನ ಆದಾಯ ಉಂಟಾಗಲಿದೆ. ರಾಸಾಯನಿಕ ಪದಾರ್ಥಗಳ ವ್ಯಾಪಾರದಲ್ಲಿ ಹೆಚ್ಚಿನ ಲಾಭವಿರುವುದು. ಆರೋಗ್ಯದ ಬಗ್ಗೆ ಹೆಚ್ಚಿನ ಗಮನವಿರಲಿ.

ವೃಷಭ: ಬಹುದಿನಗಳಿಂದ ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿದ್ದ ನಿಮಗೆ ಹೆಚ್ಚು ವರಮಾನ ಗಳಿಸುವ ಮಾರ್ಗವನ್ನು ಸ್ನೇಹಿತರೊಬ್ಬರು ತೋರುವರು. ವೃತ್ತಿಪರ ಗುರಿ ಸಾಧನೆಗೆ ಅಗತ್ಯ ತಯಾರಿ ನಡೆಸಿ.

ಮಿಥುನ: ಹಿರಿಯ ಅಧಿಕಾರಿಗಳ ಬಗ್ಗೆ ಗೌರವದ ಭಾವವನ್ನು ಇಟ್ಟುಕೊಳ್ಳುವುದರಿಂದ ಹೆಚ್ಚಿನ ಪ್ರಯೋಜನ ಪಡೆಯಲಿದ್ದೀರಿ. ಯಶಸ್ಸು ನಿಮ್ಮನ್ನು ಅರಸಿಕೊಂಡು ಬರಲಿದ್ದು, ಹೆಚ್ಚಿನ ಸಂತಸ ಸಿಗಲಿದೆ.

ಕರ್ಕಾಟಕ: ಮನಸ್ಸಿನ ಭಾವನೆಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುವಿರಿ. ಅದರಿಂದ, ಬಹುದಿನಗಳ ಮಾನಸಿಕ ಯಾತನೆ ದೂರಾಗಿ, ನಿರಾಳರಾಗುವಿರಿ. ದೀರ್ಘಕಾಲೀನ ಯೋಜನೆಗಳು ಫಲದಾಯಕವೆನಿಸಲಿವೆ.

ಸಿಂಹ: ಶುಭ ಸಮಾಚಾರಗಳನ್ನು ಕೇಳುವಿರಿ. ಪ್ರಯತ್ನಿಸಿದಂತಹ ಎಲ್ಲ ಕಾರ್ಯಗಳಲ್ಲಿ ಯಶಸ್ಸು ಕಾಣುವಿರಿ. ದಲ್ಲಾಳಿಗಳಿಗೆ ಈ ದಿನ ಲಾಭಾಂಶ ವೃದ್ಧಿಯಾಗುವುದು.

ಕನ್ಯಾ: ಜೀವನದ ಗುರಿ ಮತ್ತು ಆಕಾಂಕ್ಷೆಗಳನ್ನು ಚೆನ್ನಾಗಿ ಅರಿತುಕೊಳ್ಳುವಿರಿ. ಮಹಿಳಾ ನೌಕರರಿಗೆ ಮನೆಯ ಜವಾಬ್ದಾರಿ ಹಾಗೂ ಕೆಲಸದ ನಡುವೆ ಸಮನ್ವಯ ಸಾಧಿಸಲು ಕಷ್ಟವಾಗಬಹುದು. ಹಣಕಾಸಿನ ಕೊರತೆ ಬಾಧಿಸದು.

ತುಲಾ: ಸಂಬಂಧಗಳಿಗೆ ಅತಿಯಾಗಿ ಬೆಲೆ ಕೊಡುವ ನಿಮಗೆ, ಮರೆಯಲಾಗದಂಥ ನೋವು ಸಂಬಂಧಿಕರಿಂದಲೇ ಆಗುವುದು. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನರಕ್ಕೇರಲು ಸಕಾಲ.

ವೃಶ್ಚಿಕ: ನಿಮ್ಮ ಲೆಕ್ಕ ಪತ್ರಗಳು ಸಮರ್ಪಕವಾಗಿರುವುದು ಹಿರಿಯ ಅಧಿಕಾರಿಗಳ ಗಮನಕ್ಕೆ ಬರಲಿದೆ. ವೈದ್ಯಕೀಯ ಕ್ಷೇತ್ರದಲ್ಲಿನ ಸಾಧನೆಯಿಂದಾಗಿ ಗೌರವ–ಪುರಸ್ಕಾರಗಳು ಸಿಗಲಿವೆ. ಉದರ ವ್ಯಾಧಿಗಳು ದೂರವಾಗುತ್ತವೆ.

ಧನು: ಸಿವಿಲ್ ಎಂಜಿನಿಯರ್‌ಗಳು ಯಾವುದೇ ಕೆಲಸವನ್ನು ತರ್ಕಬದ್ಧವಾಗಿ ಆಲೋಚಿಸಿ ಮಾಡುವುದು ಉತ್ತಮ. ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು ರಾಜಕೀಯವಾಗಿ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ.

ಮಕರ: ಸೂಕ್ಷ್ಮ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ಎಚ್ಚರಿಕೆಯಿಂದ ವರ್ತಿಸಿ. ಮನೋಭಿಲಾಷೆಗಳು ಈಡೇರಿ, ಮನಸ್ಸಿಗೆ ಸಂತೋಷವಾಗುವುದು. ಸಹನೆಯನ್ನು ಪರೀಕ್ಷಿಸುವ ಸಂದರ್ಭ ಎದುರಾಗಬಹುದು.

ಕುಂಭ: ಜವಳಿ ಉದ್ಯಮದವರಿಗೆ ಅಪಾರ ಲಾಭವಿದ್ದು, ರಫ್ತು ವ್ಯವಹಾರಗಳನ್ನು ವಿಸ್ತರಿಸಿಕೊಳ್ಳಬಹುದು. ದೈನಂದಿನ ವ್ಯವಹಾರಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ.

ಮೀನ: ವ್ಯಕ್ತಿ ಗೌರವ ಕಾಪಾಡಿಕೊಳ್ಳಲು ಸುತ್ತಲಿನ ವಾತಾವರಣಕ್ಕೆ ಹೊಂದಿಕೊಳ್ಳಬೇಕಾದ ಅನಿವಾರ್ಯ ಎದುರಾಗಲಿದೆ. ವಿದ್ಯಾರ್ಥಿಗಳು ಸರ್ವತೋಮುಖ ಅಭಿವೃದ್ಧಿ ಸಾಧಿಸುವಿರಿ.

ಪದಬಂಧ 5999

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹುಲಿಯ ಉಗುರು (4)
3.ಲಲಿತ ಕಲೆಗಳನ್ನು ಬಲ್ಲವನು (4)
5.ಶೀರ್ಷಿಕೆ ಇಲ್ಲಿದೆ (5)
7.ಕಾಗದ,ಲೋಹ ಮುಂತಾದವುಗಳ ಮೇಲೆ ಒತ್ತುವಮುದ್ರೆ (2)
8.ಸೂರ್ಯ ರಶ್ಮಿ ಇಲ್ಲಿದೆ (5)
10.ನೆನಪಿನಿಂದ ಮಾಸದ ತಿಂಗಳು (2)
12.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
14.ಯಾವ ಕಳಂಕವೂ ಇಲ್ಲದ್ದು (4)
15.ಚೈತ್ರಮಾಸವನ್ನು ಹೀಗೂ ಹೇಳುತ್ತಾರೆ (4)

ಮೇಲಿಂದ ಕೆಳಕ್ಕೆ
1.ಪುಸ್ತಕವನ್ನು ಒರಗಿಸಿಡಲು ಮಾಡಿದ ಮರದ ಸಾಧನ (4)
2.ಉಚಿತವಾಗಿದ್ದರೂ ಇದು ನಿಶ್ಚಿತ! (3)
4.ವಿವಾದವಿಲ್ಲದೆ ನಡೆದ ಮದುವೆ (3)
6.ಬರದಲ್ಲಿರುವ ಅನಾಗರಿಕ (3)
9.ಪ್ರೇಮಿಗಳ ಅಗಲಿಕೆಯ ನೋವು (3)
11.ಜೊತೆಯಲ್ಲಿ ವಾಸಿಸುವುದು (4)
12.ಕಾರ್ಖಾನೆಯಲ್ಲಿ ಕೆಲಸ ಮಾಡುವವನು (3)
13.ಸ್ಮಶಾನವಿಲ್ಲಿ ಉಲ್ಟಾ ಪಲ್ಟಾ ಕಾಣುತ್ತಿದೆ (3)

5998ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಲಿಂಗನ 3.ವಿರೇಚಕ
5.ಸುಗಮ 6.ನಡುಕ
8.ಪಾನಕ 10.ಕಂಬಳಿ
11.ಆಕರ 13.ಸಾಹಸ
15.ವರ್ಧಮಾನ 16.ಸಮಾಚಾರ

ಮೇಲಿಂದ ಕೆಳಕ್ಕೆ:
1.ಆಪೋಶನ 2.ನನಸು
3.ವಿಷಮ 4.ಕಶೇರುಕ
7.ದುರಬ 9.ನರ್ತಕ
10.ಕಂಠೀರವ 12.ರತ್ನಾಕರ
13.ಸಾಧನ 14.ಸರಸ

ಸುಡೊಕು 6384

	9				5		6	
2	7		4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6383 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ವಿನಿಮಯ ದರ

$ ಡಾಲರ್	85.60
£ ಪೌಂಡ್	110.42
€ ಯುರೊ	92.41

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹202
ಆರ್‌ಎಸ್‌ಎಸ್-5	₹197
ಗುಡ್ ಲಾಟ್ ₹188	(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1305 (1305)
ಸೂರ್ಯಕಾಂತಿ (ರಿಫೈನ್ಡ್)	₹1405 (1410)
ಪಾಮೋಲಿನ್	₹1350 (1355)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹281-555
ದ್ವಿತಳಿ (ಬಿ.ವಿ)	₹156-690

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,519
ಇಂದಿನ ಅಂತ್ಯ	23,165
▼	353
ದಿನದ ಕನಿಷ್ಠ	23,136

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹510
12 ಕ್ಕೆ	₹68
ಮೈಸೂರು	
100ಕ್ಕೆ	₹510

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹27500
ಎಸಿ	₹16660
ಆರ್‌ಪಿ	₹22500
ಆರ್‌ಸಿ	₹12630

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿಸುಂಕ ನೀತಿ: ಸೂಚ್ಯಂಕಗಳ ಇಳಿಕೆ

ಸೆನ್ಸೆಕ್ಸ್ 1,390 ಅಂಶ ಕುಸಿತ

ಮುಂಬೈ (ಪಿಟಿಐ): ಮಾಹಿತಿ ತಂತ್ರಜ್ಞಾನ ಮತ್ತು ಖಾಸಗಿ ಬ್ಯಾಂಕ್‌ಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಮಂಗಳವಾರದ ವಹಿವಾಟಿನಲ್ಲಿ ದೇಶದ ಷೇರು ಸೂಚ್ಯಂಕಗಳು ಶೇ 1ಕ್ಕೂ ಹೆಚ್ಚು ಕುಸಿತ ಕಂಡಿವೆ.

2025–26ರ ಆರ್ಥಿಕ ವರ್ಷದ ಆರಂಭದ ಮೊದಲ ದಿನವೇ ಸೂಚ್ಯಂಕಗಳು ಇಳಿದಿವೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,390 ಅಂಶ (ಶೇ 1.80) ಕುಸಿದು, 76,024ಕ್ಕೆ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ವೇಳೆ 1,502 ಅಂಶ ಇಳಿಕೆಯಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 353 ಅಂಶ (ಶೇ 1.50) ಕಡಿಮೆಯಾಗಿ, 23,165ಕ್ಕೆ ಕೊನೆಗೊಂಡಿತು.

ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹3.44 ಲಕ್ಷ ಕೋಟಿಯಷ್ಟು ಕರಗಿದ್ದು, ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ ₹409 ಲಕ್ಷ ಕೋಟಿಯಾಗಿದೆ.

ಏಪ್ರಿಲ್ 2ರಿಂದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಭಾರತದಿಂದ ರಫ್ತಾಗುವ ಉತ್ಪನ್ನಗಳ ಮೇಲೆ ಪ್ರತಿ ಸುಂಕ ಜಾರಿಗೆ ತರಲಿದ್ದಾರೆ. ಇದರಿಂದ ಮಾರುಕಟ್ಟೆಯಲ್ಲಿ ಅನಿಶ್ಚಿತತೆಯ ಸ್ಥಿತಿ ಉಂಟಾಗಿದ್ದರಿಂದ ಷೇರು ಸೂಚ್ಯಂಕ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಎಚ್‌ಸಿಎಲ್ ಟೆಕ್, ಬಜಾಜ್ ಫಿನ್‌ಸರ್ವ್, ಎಚ್‌ಡಿಎಫ್‌ಸಿ ಬ್ಯಾಂಕ್, ಬಜಾಜ್ ಫೈನಾನ್ಸ್, ಇನ್ಫೊಸಿಸ್, ಟೈಟನ್, ಐಸಿಐಸಿಐ ಬ್ಯಾಂಕ್, ಸನ್ ಫಾರ್ಮಾ, ರಿಲಯನ್ಸ್ ಇಂಡಸ್ಟ್ರೀಸ್, ಲಾರ್ಸನ್ ಆ್ಯಂಡ್ ಟೂಬ್ರೊ, ಟೆಕ್ ಮಹೀಂದ್ರ ಮತ್ತು ಎನ್‌ಟಿಪಿಸಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಇಂಡಸ್‌ಇಂಡ್ ಬ್ಯಾಂಕ್, ಜೊಮಾಟೊ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹4,352 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರ ಶೇ 0.12ರಷ್ಟು ಏರಿಕೆಯಾಗಿದೆ. ಪ್ರತಿ ಬ್ಯಾರೆಲ್‌ಗೆ 74.86 ಡಾಲರ್ (₹6,411) ಆಗಿದೆ.

‘ಅಮೆರಿಕದ ಮಾರುಕಟ್ಟೆಯನ್ನು ಭಾರತದ ಐ.ಟಿ ವಲಯವು ಹೆಚ್ಚಾಗಿ ಅವಲಂಬಿಸಿದೆ. ಪ್ರತಿ ಸುಂಕದಿಂದ ಉಂಟಾದ ಅನಿಶ್ಚಿತತೆಯು, ಕಂಪನಿಗಳ ಷೇರಿನ ಮೌಲ್ಯ ಇಳಿಕೆಗೆ ಕಾರಣವಾಗಿದೆ’ ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮುಖ್ಯಾಂಶಗಳು

- 2025–26ರ ಆರ್ಥಿಕ ವರ್ಷದ ಮೊದಲ ದಿನವೇ ಸೂಚ್ಯಂಕಗಳ ಇಳಿಕೆ
- ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ₹4,352 ಕೋಟಿ ಮೌಲ್ಯದ ಷೇರು ಮಾರಾಟ
- ಒಂದೇ ದಿನ ₹3.44 ಲಕ್ಷ ಕೋಟಿಯಷ್ಟು ಕರಗಿದ ಹೂಡಿಕೆದಾರರ ಸಂಪತ್ತು

10 ಗ್ರಾಂ ಚಿನ್ನದ ದರ ₹94,150

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹2 ಸಾವಿರ ಏರಿಕೆಯಾಗಿ, ₹94,150ರಂತೆ ಮಾರಾಟವಾಗಿದೆ. ಆಭರಣ ಚಿನ್ನ (ಶೇ 99.5 ಪರಿಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ, ₹93,700 ಆಗಿದೆ.

ಪ್ರಸಕ್ತ ವರ್ಷದ ಆರಂಭದಿಂದ ಇದುವರೆಗೆ 10 ಗ್ರಾಂ ಚಿನ್ನದ ದರವು ₹14,760 (ಶೇ 18.6) ಏರಿಕೆಯಾಗಿದೆ. ಜನವರಿ 1ರಂದು ₹79,390 ಇತ್ತು.

ಬೆಳ್ಳಿ ಧಾರಣೆಯು ಕೆ.ಜಿಗೆ ₹500 ಇಳಿಕೆಯಾಗಿ, ₹1,02,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದಾಸ್ತಾನುಗಾರರು ಮತ್ತು ಆಭರಣ ತಯಾರಕರಿಂದ ಹಳದಿ ಲೋಹದ ಖರೀದಿ ಹೆಚ್ಚಳವಾಗಿದೆ. ಹೀಗಾಗಿ, ಚಿನ್ನದ ದರ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ಪ್ರತಿ ಸುಂಕ ಹೇರುವುದಾಗಿ ಘೋಷಿಸಿದ್ದಾರೆ. ಇದರಿಂದ ಮಾರುಕಟ್ಟೆಯಲ್ಲಿ ಅನಿಶ್ಚಿತ ಸ್ಥಿತಿ ತಲೆದೋರಿದೆ. ಹಾಗಾಗಿ, ಚಿನ್ನದ ಬೆಲೆ ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ವಾಣಿಜ್ಯ ಸಿಲಿಂಡರ್ ದರ ₹41 ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ವಾಣಿಜ್ಯ ಬಳಕೆಯ ಸಿಲಿಂಡರ್ ಮತ್ತು ವಿಮಾನ ಇಂಧನ (ಎಟಿಎಫ್) ದರವನ್ನು ಇಳಿಕೆ ಮಾಡಿವೆ. ಹೊಸ ದರವು ಮಂಗಳವಾರದಿಂದ ಜಾರಿಗೆ ಬಂದಿದೆ.

19 ಕೆ.ಜಿ ತೂಕದ ಸಿಲಿಂಡರ್ ಬೆಲೆಯಲ್ಲಿ ₹41 ಇಳಿಕೆಯಾಗಿದೆ. ದೆಹಲಿಯಲ್ಲಿ ಸಿಲಿಂಡರ್ ದರ ₹1,762 ಆಗಿದೆ. ಮುಂಬೈನಲ್ಲಿ ₹1,713, ಕೋಲ್ಕತ್ತ ದಲ್ಲಿ ₹1,868 ಮತ್ತು ಚೆನ್ನೈನಲ್ಲಿ ₹1,921 ಇದೆ. ಗೃಹ ಬಳಕೆಯ 14 ಕೆ.ಜಿ ತೂಕದ ಸಿಲಿಂಡರ್ ದರವು ಯಥಾಸ್ಥಿತಿಯಲ್ಲಿದ್ದು, ₹803 ಇದೆ.

ವಿಮಾನ ಇಂಧನ ದರ ಇಳಿಕೆ: ವಿಮಾನಗಳಲ್ಲಿ ಬಳಸುವ ಇಂಧನ ದರವು ಪ್ರತಿ ಕಿಲೊ ಲೀಟರ್‌ಗೆ (1 ಸಾವಿರ ಲೀಟರ್) ₹5,870 (ಶೇ 6.1) ಇಳಿಕೆಯಾಗಿದೆ. ದೆಹಲಿಯಲ್ಲಿ ₹89,441 ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಇಂಧನ ದರ ಹಾಗೂ ವಿದೇಶಿ ವಿನಿಮಯ ದರಕ್ಕೆ ಅನುಗುಣವಾಗಿ ತೈಲ ಮಾರಾಟ ಕಂಪನಿಗಳು ಪ್ರತಿ ತಿಂಗಳು ದರ ಪರಿಷ್ಕರಣೆ ಮಾಡುತ್ತವೆ.

ಬುಚ್: ತಡೆಯಾಜ್ಞೆ ವಿಸ್ತರಣೆ

ಮುಂಬೈ (ಪಿಟಿಐ): ಷೇರು ಮಾರುಕಟ್ಟೆ ವಂಚನೆ ಆರೋಪದ ಮೇಲೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಮಾಜಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ಐದು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಮುಂಬೈನ ವಿಶೇಷ ನ್ಯಾಯಾಲಯ ನೀಡಿದ್ದ ಆದೇಶದ ಮೇಲಿನ ಮಧ್ಯಂತರ ತಡೆಯಾಜ್ಞೆಯನ್ನು ಬಾಂಬೆ ಹೈಕೋರ್ಟ್ ಮಂಗಳವಾರ ವಿಸ್ತರಿಸಿದೆ.

ಪ್ರಕರಣದ ಮೂಲ ದೂರುದಾರರು ಅಫಿಡವಿಟ್ ಸಲ್ಲಿಸಿದ್ದಾರೆ. ಬುಚ್ ಮತ್ತು ಇತರರಿಗೆ ಅದನ್ನು ಪರಿಶೀಲಿಸಲು ಸಮಯ ನೀಡಲಾಗಿದೆ. ಮುಂದಿನ ಆದೇಶದವರೆಗೂ ಮಧ್ಯಂತರ ತಡೆಯಾಜ್ಞೆ ಮುಂದುವರಿಯಲಿದೆ ಎಂದು ನ್ಯಾಯಾಧೀಶ ಶಿವಕುಮಾರ್ ಡಿಗೆ ಹೇಳಿದರು. ಮೇ 7ರಂದು ಮುಂದಿನ ವಿಚಾರಣೆ ನಡೆಯಲಿದೆ.

ಷೇರುಪೇಟೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸಿಬಿ ನ್ಯಾಯಾಲಯವು ಎಫ್‌ಐಆರ್ ದಾಖಲಿಸುವಂತೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಬುಚ್ ಹಾಗೂ ಅಧಿಕಾರಿಗಳು ಹೈಕೋರ್ಟ್‌ನ ಮೆಟ್ಟಿಲೇರಿದ್ದರು. ನಾಲ್ಕು ವಾರದವರೆಗೆ ಎಫ್‌ಐಆರ್ ದಾಖಲಿಸದಂತೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಕಳೆದ ತಿಂಗಳು ಬಾಂಬೆ ಹೈಕೋರ್ಟ್ ಸೂಚಿಸಿತ್ತು.

ಎಚ್‌ಎಎಲ್‌ಗೆ ₹30,400 ಕೋಟಿ ವರಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) 2024–25ರ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ₹30,400 ಕೋಟಿ ವರಮಾನ ಗಳಿಸಿದೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹30,381 ಕೋಟಿ ವರಮಾನ ಗಳಿಸಿತ್ತು ಎಂದು ಎಚ್‌ಎಎಲ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಿ.ಕೆ. ಸುನಿಲ್ ತಿಳಿಸಿದ್ದಾರೆ.

ಎಚ್‌ಎಎಲ್‌ನ ಕಾರ್ಯಾದೇಶದ ಮೊತ್ತವು ₹1.84 ಲಕ್ಷ ಕೋಟಿಗಳಾಗಿದೆ. 2024-25ರ ಆರ್ಥಿಕ ವರ್ಷದಲ್ಲಿ, ₹1.02 ಲಕ್ಷ ಕೋಟಿ ಮೌಲ್ಯದ ಹೊಸ ತಯಾರಿಕಾ ಒಪ್ಪಂದ, ₹17,500 ಕೋಟಿ ಮೌಲ್ಯದ ದುರಸ್ತಿ ಮತ್ತು ಕೂಲಂಕುಷ ಪರೀಕ್ಷೆ ಒಪ್ಪಂದಗಳನ್ನು ಪಡೆದುಕೊಂಡಿದೆ.

ಇತ್ತೀಚೆಗೆ, ಕಂಪನಿಯು ರಕ್ಷಣಾ ಸಚಿವಾಲಯದೊಂದಿಗೆ 156 ಲಘು ಯುದ್ಧ ಹೆಲಿಕಾಪ್ಟರ್‌ಗಳು ಪ್ರಚಂದ್ ಪೂರೈಕೆ ಒಪ್ಪಂದಕ್ಕೆ ಸಹಿ ಹಾಕಿದೆ. ಇದರ ಮೌಲ್ಯ ₹62,777 ಕೋಟಿಯಾಗಿದೆ ಎಂದು ತಿಳಿಸಿದ್ದಾರೆ. 2025–26ರ ಆರ್ಥಿಕ ವರ್ಷದಲ್ಲೂ ಕಂಪನಿ ಉತ್ತಮ ಹಣಕಾಸಿನ ಸಾಧನೆ ಮಾಡುವ ವಿಶ್ವಾಸವಿದೆ ಎಂದು ಹೇಳಿದ್ದಾರೆ.

₹22 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಮಾರ್ಚ್‌ವರೆಗೆ ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಒಟ್ಟು ₹22.08 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಜಿಎಸ್‌ಟಿ ಸಂಗ್ರಹದಲ್ಲಿ ಶೇ 9.4ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಮಾರ್ಚ್ ತಿಂಗಳಲ್ಲಿ ₹1.96 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದ್ದು, ಶೇ 9.9ರಷ್ಟು ಏರಿಕೆಯಾಗಿದೆ. ಇದು ಈ ಆರ್ಥಿಕ ವರ್ಷದಲ್ಲಿ ಸಂಗ್ರಹವಾದ ಎರಡನೇ ಅತ್ಯಧಿಕ ಸಂಗ್ರಹವಾಗಿದೆ. ಏಪ್ರಿಲ್ ತಿಂಗಳಲ್ಲಿ ₹2.10 ಲಕ್ಷ ಕೋಟಿ ಸಂಗ್ರಹವಾಗಿತ್ತು ಎಂದು ತಿಳಿಸಿದೆ.

ದೇಶೀಯ ವಹಿವಾಟು ಮೇಲಿನ ಜಿಎಸ್‌ಟಿ ಸಂಗ್ರಹದಲ್ಲಿ ಶೇ 8.8ರಷ್ಟು ಹೆಚ್ಚಳವಾಗಿದ್ದು,₹1.49 ಲಕ್ಷ ಕೋಟಿ ಸಂಗ್ರಹವಾಗಿದೆ. ಸರಕುಗಳ ಆಮದಿನಿಂದ ₹46,919 ಕೋಟಿ ಸಂಗ್ರಹವಾಗಿದೆ.

ಒಟ್ಟು ಸಂಗ್ರಹದಲ್ಲಿ ಕೇಂದ್ರ ಜಿಎಸ್‌ಟಿ ₹38,145 ಕೋಟಿ, ರಾಜ್ಯ ಜಿಎಸ್‌ಟಿ ₹49,891 ಕೋಟಿ ಮತ್ತು ಸಮಗ್ರ ಜಿಎಸ್‌ಟಿ ₹95,853 ಕೋಟಿಯಾಗಿದೆ. ಪರಿಹಾರ ಸೆಸ್ ಮೂಲಕ ₹12,253 ಕೋಟಿ ಸಂಗ್ರಹವಾಗಿದೆ. ಮರುಪಾವತಿ (ರೀಫಂಡ್) ಪ್ರಮಾಣ ಶೇ 41ರಷ್ಟು ಹೆಚ್ಚಳವಾಗಿದ್ದು, ₹19,615 ಕೋಟಿಯಾಗಿದೆ. ಮರುಪಾವತಿ ಬಳಿಕ ನಿವ್ವಳ ಜಿಎಸ್‌ಟಿ ₹1.76 ಲಕ್ಷ ಕೋಟಿಯಾಗಿದೆ.

ಜಿಎಸ್‌ಟಿ ಸಂಗ್ರಹದ ಹೆಚ್ಚಳವು ವ್ಯಾಪಾರ ಹೆಚ್ಚಳವನ್ನು ಪ್ರತಿಬಿಂಬಿಸುತ್ತದೆ. ಜೊತೆಗೆ ಆರ್ಥಿಕ ಸ್ಥಿರತೆ ಮತ್ತು ಕಂಪನಿಗಳ ಸದೃಢ ತೆರಿಗೆ ಪಾವತಿಯನ್ನು ಸೂಚಿಸುತ್ತದೆ ಎಂದು ವಲಯದ ತಜ್ಞರು ಹೇಳಿದ್ದಾರೆ.

‘ಮಹಾರಾಷ್ಟ್ರ, ಹರಿಯಾಣ, ಉತ್ತರ ಪ್ರದೇಶ, ರಾಜಸ್ಥಾನದಲ್ಲಿ ವರಮಾನ ಸಂಗ್ರಹದಲ್ಲಿ ಶೇ 10ರಷ್ಟು ಹೆಚ್ಚಳವಾಗಿದೆ. ಗುಜರಾತ್, ಕರ್ನಾಟಕ, ತೆಲಂಗಾಣ, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ಶೇ 1ರಿಂದ ಶೇ 7ರಷ್ಟು ಏರಿಕೆಯಾಗಿದೆ’ ಎಂದು ಡೆಲಾಯ್ಟ್ ಇಂಡಿಯಾ ಪಾಲುದಾರ ಎಂ.ಎಸ್. ಮಣಿ ತಿಳಿಸಿದ್ದಾರೆ.

‘ಕೃಷಿ ಉತ್ಪನ್ನಕ್ಕೆ ಭಾರತ ಶೇ 100 ಸುಂಕ’

ವಾಷಿಂಗ್ಟನ್/ ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಕೃಷಿ ಉತ್ಪನ್ನಗಳ ಮೇಲೆ ಭಾರತವು ಶೇ 100ರಷ್ಟು ಸುಂಕ ವಿಧಿಸುತ್ತದೆ. ಇತರ ದೇಶಗಳು ಹೆಚ್ಚು ಸುಂಕ ವಿಧಿಸುವುದರಿಂದ ಅಮೆರಿಕದ ಉತ್ಪನ್ನಗಳನ್ನು ಆ ರಾಷ್ಟ್ರಗಳಿಗೆ ರಫ್ತು ಮಾಡುವುದು ‘ವಾಸ್ತವವಾಗಿ ಅಸಾಧ್ಯ’ ಎಂದು ಅಮೆರಿಕ ಹೇಳಿದೆ.

ಡೊನಾಲ್ಡ್ ಟ್ರಂಪ್

ಭಾರತ ಮತ್ತು ಇತರ ದೇಶಗಳು ಅಮೆರಿಕದ ಸರಕುಗಳ ಮೇಲೆ ಹೆಚ್ಚಿನ ಸುಂಕ ವಿಧಿಸುತ್ತಿರುವುದನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಲವು ಸಲ ಟೀಕಿಸಿದ್ದಾರೆ.

ಭಾರತ ಒಳಗೊಂಡಂತೆ ಕೆಲವು ದೇಶಗಳ ಸರಕುಗಳ ಮೇಲೆ ಟ್ರಂಪ್ ಘೋಷಿಸಿರುವ ಪ್ರತಿ ಸುಂಕ ನೀತಿಯು ಏಪ್ರಿಲ್ 2ರಂದು ಜಾರಿಗೆ ಬರಲಿದೆ. ಇದು ಅಮೆರಿಕದ ‘ವಿಮೋಚನಾ ದಿನ’ ಎಂದು ಅವರು ಟ್ರಂಪ್ ಈಗಾಗಲೇ ಹೇಳಿದ್ದಾರೆ.

‘ದುರದೃಷ್ಟವಶಾತ್, ಈ ದೇಶಗಳು ಹಲವು ವರ್ಷಗಳಿಂದ ನಮ್ಮ ಹಣವನ್ನು ಸುಲಿಗೆ ಮಾಡುತ್ತಿವೆ ಮತ್ತು ಅಮೆರಿಕದ ಕಾರ್ಮಿಕರ ಬಗ್ಗೆ ಅವುಗಳು ತಿರಸ್ಕಾರ ಮನೋಭಾವ ಹೊಂದಿವೆ’ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲೆವಿಟ್ ಟೀಕಿಸಿದ್ದಾರೆ.

ಎಷ್ಟು ಪ್ರಮಾಣದಲ್ಲಿ ಪ್ರತಿ ಸುಂಕ ವಿಧಿಸಲಾಗುತ್ತದೆ ಮತ್ತು ಅವು ಯಾವೆಲ್ಲಾ ದೇಶಗಳ ಮೇಲೆ ಪರಿಣಾಮ ಬೀರಲಿವೆ ಎಂಬುದನ್ನು ಲೆವಿಟ್ ವಿವರಿಸಲಿಲ್ಲ.

‘ಅಮೆರಿಕದ ಡೇರಿ ಉತ್ಪನ್ನಗಳ ಮೇಲೆ ಯುರೋಪಿಯನ್ ಯೂನಿಯನ್ ಶೇ 50 ಸುಂಕ ವಿಧಿಸುತ್ತಿದ್ದರೆ, ನಾವು ಕಳುಹಿಸುವ ಅಕ್ಕಿಯ ಮೇಲೆ ಜಪಾನ್ ಶೇ 700ರಷ್ಟು ಸುಂಕ ವಿಧಿಸುತ್ತದೆ. ಅಮೆರಿಕದ ಕೃಷಿ ಉತ್ಪನ್ನಗಳ ಮೇಲೆ ಭಾರತವು ಶೇ 100ರಷ್ಟು ಸುಂಕ ಮತ್ತು ಅಮೆರಿಕದ ಬೆಣ್ಣೆ ಹಾಗೂ ಚೀಸ್ ಮೇಲೆ ಕೆನಡಾ ಶೇ 300ರಷ್ಟು ಸುಂಕ ವಿಧಿಸುತ್ತಿವೆ’ ಎಂದು ಲೆವಿಟ್ ಮಾಹಿತಿ ನೀಡಿದರು.

‘ಭಾರತ ಸುಂಕ ತಗ್ಗಿಸಲಿದೆ’

‘ಅಮೆರಿಕದಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳಿಗೆ ವಿಧಿಸುವ ಸುಂಕವನ್ನು ಭಾರತ ಗಣನೀಯವಾಗಿ ತಗ್ಗಿಸಲಿದೆ’ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

‘ಬಹಳಷ್ಟು ದೇಶಗಳು ತಮ್ಮ ಸುಂಕವನ್ನು ಕೈಬಿಡಲಿವೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಅವರು ಹಲವು ವರ್ಷಗಳಿಂದ ಅಮೆರಿಕಕ್ಕೆ ಅನ್ಯಾಯವಾಗಿ ಸುಂಕ ವಿಧಿಸುತ್ತಿದ್ದಾರೆ’ ಎಂದು ಪ್ರತಿಕ್ರಿಯಿಸಿದ್ದಾರೆ.

ಭೂಕಂಪ: 2,700 ದಾಟಿದ ಮೃತರ ಸಂಖ್ಯೆ

ಬ್ಯಾಂಕಾಕ್ (ಎಪಿ): ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ 2,700 ದಾಟಿದೆ.

ರಾಜಧಾನಿಯಲ್ಲಿ ಧರೆಗುರುಳಿದ್ದ ಕಟ್ಟಡದ ಅವಶೇಷಗಳಡಿ 91 ಗಂಟೆಗಳಿಂದ ಸಿಲುಕಿದ್ದ 63 ವರ್ಷದ ಮಹಿಳೆಯನ್ನು ರಕ್ಷಣಾ ಸಿಬ್ಬಂದಿ ಮಂಗಳವಾರ ರಕ್ಷಣೆ ಮಾಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಬಹುದು ಎಂದು ಅಗ್ನಿಶಾಮಕ ಇಲಾಖೆ ತಿಳಿಸಿದೆ.

ಮ್ಯಾನ್ಮಾರ್ ಸೇನಾ ಸರ್ಕಾರದ ಹಿರಿಯ ಜನರಲ್ ಮಿನ್ ಆಂಗ್ ಹ್ಲೇಂಗ್ ಮಾತನಾಡಿ, ‘ಭೂಕಂಪದಲ್ಲಿ ಈವರೆಗೆ 2,719 ಮಂದಿ ಮೃತಪಟ್ಟಿದ್ದಾರೆ. 4,521 ಮಂದಿ ಗಾಯಗೊಂಡಿದ್ದು, 441 ಮಂದಿ ನಾಪತ್ತೆಯಾಗಿದ್ದಾರೆ’ ಎಂದು ಹೇಳಿದ್ದಾರೆ.

ಭೂಕಂಪದಿಂದ ದೇಶದ ಬಹುತೇಕ ಕಡೆಗಳಲ್ಲಿ ವಿದ್ಯುತ್, ಟೆಲಿಫೋನ್ ಅಥವಾ ಮೊಬೈಲ್ ಸಂಪರ್ಕ ಸಾಧ್ಯವಾಗುತ್ತಿಲ್ಲ. ರಸ್ತೆಗಳು, ಮೇಲ್ಸೇತುವೆಗಳು ಹಾನಿಗೀಡಾಗಿದ್ದು, ಯಾವ ಪ್ರದೇಶದಲ್ಲಿ ಎಷ್ಟು ಪ್ರಮಾಣದಲ್ಲಿ ಹಾನಿಯಾಗಿದೆ ಎಂಬುದನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ ಎಂದು ವರದಿಗಳು ತಿಳಿಸಿವೆ.

ಈಗ ಲಭ್ಯವಾಗುತ್ತಿರುವ ವರದಿಗಳು ಬಹುತೇಕ ಮ್ಯಾನ್ಮಾರ್‌ನ ಎರಡನೇ ದೊಡ್ಡ ನಗರ ಮಾಂಡಲೆಗೆ ಸಂಬಂಧಿಸಿದ್ದು ಎಂದು ತಿಳಿದುಬಂದಿದೆ.

ಭಾರತಕ್ಕೆ ಭೇಟಿ: ಸುನಿತಾ

ನ್ಯೂಯಾರ್ಕ್ (ಪಿಟಿಐ): ‘ಬಾಹ್ಯಾಕಾಶದಿಂದ ನೋಡುವಾಗ ಭಾರತವು ಅದ್ಭುತವಾಗಿ ಕಾಣಿಸುತ್ತದೆ’ ಎಂದು ನಾಸಾ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಬಣ್ಣಿಸಿದ್ದಾರೆ. ಮುಂದೊಂದು ದಿನ ಅವಕಾಶ ಸಿಕ್ಕಾಗ ಭಾರತಕ್ಕೆ ಭೇಟಿ ನೀಡುವುದಾಗಿಯೂ ಅವರು ತಿಳಿಸಿದ್ದಾರೆ.

> ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ತನ್ನ ಹೆಜ್ಜೆಯೂರಲು ಪ್ರಯತ್ನಿಸುತ್ತಿದ್ದು, ಅದರ ಭಾಗವಾಗಲು ಮತ್ತು ಅವರಿಗೆ ನೆರವು ನೀಡಲು ಇಷ್ಟಪಡುತ್ತೇನೆ
>
> **ಸುನಿತಾ ವಿಲಿಯಮ್ಸ್,** ನಾಸಾ ಗಗನಯಾತ್ರಿ

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ, ‘ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿದ್ದಾಗ (ಐಎಸ್‌ಎಸ್) ಭಾರತವು ಹೇಗೆ ಕಾಣಿಸುತ್ತದೆ ಮತ್ತು ಬಾಹ್ಯಾಕಾಶ ಸಂಶೋಧನೆಯಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಜತೆ ಕೆಲಸ ಮಾಡುವ ಇರಾದೆ ಇದೆಯೇ ಎಂಬ ಪ್ರಶ್ನೆಗೆ ಅವರು ಈ ಮೇಲಿನಂತೆ ಉತ್ತರಿಸಿದ್ದಾರೆ.

ಐಎಸ್‌ಎಸ್‌ನಲ್ಲಿ ಒಂಬತ್ತು ತಿಂಗಳು ಕಳೆದು ಭೂಮಿಗೆ ಮರಳಿದ ಬಳಿಕ ಸುನಿತಾ ಮತ್ತು ಸಹೋದ್ಯೋಗಿ ಬುಚ್ ವಿಲ್ಮೋರ್ ಅವರು ಇದೇ ಮೊದಲ ಬಾರಿ ಜಂಟಿ ಪತ್ರಿಕಾಗೋಷ್ಠಿ ನಡೆಸಿ ತಮ್ಮ ಅನುಭವಗಳನ್ನು ಹಂಚಿಕೊಂಡರು.

‘ಭಾರತದ ನೋಟ ನಮಗೆ ವಿಸ್ಮಯ ಉಂಟುಮಾಡುತ್ತದೆ. ರಾತ್ರಿಯಲ್ಲಿ ದೊಡ್ಡ ನಗರಗಳು ಮತ್ತು ಸಣ್ಣ ಪಟ್ಟಣಗಳು ವಿದ್ಯುತ್‌ದೀಪಗಳಿಂದ ಕಂಗೊಳಿಸುವುದನ್ನು ಕಣ್ತುಂಬಿಕೊಳ್ಳುವುದೇ ಚೆಂದ. ಹಗಲಿನಲ್ಲಿ ಹಿಮಾಲಯ ಪರ್ವತ ಶ್ರೇಣಿಯ ಸೌಂದರ್ಯವನ್ನು ಸವಿಯಬಹುದು. ಐಎಸ್‌ಎಸ್ ಪ್ರತಿಬಾರಿಯೂ ಭಾರತದ ಮೇಲಿನಿಂದ ಸಾಗುವಾಗ, ಬುಚ್ ಅವರು ಹಿಮಾಲಯದ ಅದ್ಭುತ ಚಿತ್ರಗಳನ್ನು ಸೆರೆಹಿಡಿದಿದ್ದಾರೆ’ ಎಂದು ಹೇಳಿದರು.

‘ಮುಂದೊಂದು ದಿನ ನನ್ನ ತಂದೆಯ ತವರು ದೇಶಕ್ಕೆ (ಭಾರತ) ಖಂಡಿತವಾಗಿಯೂ ಭೇಟಿ ನೀಡುತ್ತೇನೆ. ನಾವು ನಮ್ಮ ಅನುಭವಗಳನ್ನು ಭಾರತದಲ್ಲಿ ಸಾಧ್ಯವಾದಷ್ಟು ಜನರೊಂದಿಗೆ ಹಂಚಿಕೊಳ್ಳಬಹುದು’ ಎಂದಿದ್ದಾರೆ. ಸುನಿತಾ ಅವರ ತಂದೆ ದೀಪಕ್ ಪಾಂಡ್ಯ ಅವರು ಗುಜರಾತ್‌ನವರಾಗಿದ್ದು, 1958ರಲ್ಲಿ ಅಮೆರಿಕಕ್ಕೆ ಬಂದು ನೆಲಸಿದ್ದಾರೆ.

ಭಾರತಕ್ಕೆ ಭೇಟಿ ನೀಡುವಂತೆ ಸುನಿತಾ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಈಚೆಗೆ ಆಹ್ವಾನ ನೀಡಿದ್ದರು. ‘ಐಎಸ್‌ಎಸ್‌ನಿಂದ ಭೂಮಿಗೆ ಮರಳಿದ ನಂತರ ಭಾರತದಲ್ಲಿ ನಿಮ್ಮನ್ನು ಕಾಣಲು ದೇಶದ ಜನರು ಉತ್ಸುಕರಾಗಿದ್ದಾರೆ’ ಎಂದಿದ್ದರು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಜಯಂತ್ ಉಪಾಧ್ಯಾಯ, ಉಡುಪಿ

- **ಪ್ರಶ್ನೆ: ನಾನು ಇತ್ತೀಚೆಗೆ ಗಮನಿಸಿದಂತೆ ಬಹಳಷ್ಟು ಸಂದರ್ಭಗಳಲ್ಲಿ ಕಡಿಮೆ ಮೌಲ್ಯದ ಷೇರುಗಳ ಬೆಲೆಯಲ್ಲಿ ಬಹು ಬೇಗನೆ ವೃದ್ಧಿ ಆಗಿರುವುದನ್ನು ನೋಡಿದ್ದೇನೆ. ಕೆಲವೊಮ್ಮೆ ದೊಡ್ಡ ದೊಡ್ಡ ಕಂಪನಿಗಳ ಒಂದು ಷೇರಿಗೆ ಸಾವಿರಾರು ರೂಪಾಯಿ ಮೌಲ್ಯ ಕೊಡುವ ಬದಲು ಇಂತಹ ಕಂಪನಿಗಳ ಸಾವಿರಾರು ಷೇರುಗಳನ್ನು ಖರೀದಿಸಬಹುದಲ್ಲವೆ? ಇದರಿಂದಲೂ ಸಂಪತ್ತು ನಿಧಾನವಾಗಿಯಾದರೂ ಸೃಷ್ಟಿಸ ಬಹುದಲ್ಲ? ಈ ಬಗ್ಗೆ ನಿಮ್ಮ ಸಲಹೆ ಏನು?.**

ಉತ್ತರ: ಯಾವುದೇ ಕಂಪನಿಯ ಷೇರಿನ ಮೌಲ್ಯ ನಿರ್ಧಾರವಾಗುವುದು ಅದರ ಆರ್ಥಿಕ ಗುಣಮಟ್ಟ ಹಾಗೂ ಮುಂದಿನ ಬೆಳವಣಿಗೆಯ ಸಾಧ್ಯತೆ, ಆಡಳಿತ ಮಂಡಳಿ ಹೊಂದಿರುವ ಆರ್ಥಿಕ ಮುನ್ನೋಟ, ಅದರ ವ್ಯವಸ್ಥಿತ ಸಾಧನೆಯಂತಹ ಅಂಶಗಳ ಆಧಾರದ ಮೇಲೆ. ಹೀಗಾಗಿ ಮಾರುಕಟ್ಟೆಯಲ್ಲಿ ಅಗ್ಗಕ್ಕೆ ಸಿಗುವ ಎಲ್ಲಾ ಕಂಪನಿಯ ಷೇರುಗಳು ಈ ಗುಣಮಟ್ಟ ಹೊಂದಿವೆ ಎಂದು ಹೇಳಲಾಗದು. ಹೂಡಿಕೆಗೂ ಸಾಕಷ್ಟು ಮುಂಜಾಗರೂಕತೆ, ಅದಕ್ಕೆ ಸಂಬಂಧಿತ ಮಾಹಿತಿಗಳ ಅಧ್ಯಯನಶೀಲ ಸ್ವಭಾವ ಹೊಂದಿರಬೇಕಾಗುತ್ತದೆ. ಅದು ನಮ್ಮ ಅದೃಷ್ಟ ಪರೀಕ್ಷೆಗಿರುವ ಮಾರ್ಗವಲ್ಲ ಎಂಬುದು ತಿಳಿದಿರಲಿ. ಗುಣಮಟ್ಟ ಇರುವ ಯಾವುದೇ ವಸ್ತುವಿಗೆ ಯಾವತ್ತೂ ಮೌಲ್ಯ ಇದ್ದೇ ಇರುತ್ತದೆ ಎಂಬುದನ್ನು ಅಗತ್ಯವಾಗಿ ತಿಳಿಯಿರಿ.

ಪ್ರಕಾಶ್ ಎಸ್.ಆರ್, ಚಿತ್ರದುರ್ಗ

- **ಪ್ರಶ್ನೆ: ನಾನು ಹಿರಿಯ ನಾಗರಿಕನಾಗಿದ್ದು, 2024-25ರ ಆರ್ಥಿಕ ವರ್ಷದಲ್ಲಿ ಸಿಗುವ ಆದಾಯ ವಿವರಗಳು ಈ ಕೆಳಗಿನಂತಿವೆ.**

ಪಿಂಚಣಿ ಆದಾಯ ವರ್ಷಕ್ಕೆ ₹6 ಲಕ್ಷ ಪಡೆಯುತ್ತಿದ್ದೇನೆ. ಡಿವಿಡೆಂಡ್, ಬಡ್ಡಿ ಮೂಲಕ ಸುಮಾರು ₹1.50 ಲಕ್ಷ ಆದಾಯ ಬಂದಿದೆ. ಇದಕ್ಕೆ ಸಂಬಂಧಿಸಿ ಸುಮಾರು ₹5,000ದ ಅಂದಾಜು ತೆರಿಗೆ ಕಡಿತಗೊಂಡಿದೆ. ನನಗೆ ಬೇರೆ ಯಾವುದೇ ತೆರಿಗೆ ಬರುವ ಆದಾಯವಿಲ್ಲ. ನಾನು ಹಿರಿಯ ನಾಗರಿಕನಾಗಿರುವ ಕಾರಣ, ನನ್ನ ಆದಾಯಕ್ಕೆ ಯಾವುದೇ ತೆರಿಗೆ ಇಲ್ಲ. ಆದರೆ ಇದರ ರಿಫಂಡ್ ಪಡೆಯಬೇಕಿದೆ. ಈ ಬಗ್ಗೆ ಮಾಹಿತಿ ನೀಡಿ.

ಉತ್ತರ: ನಿಮ್ಮ ಆದಾಯ ಗರಿಷ್ಠ ತೆರಿಗೆ ವಿನಾಯಿತಿ ಮೊತ್ತವಾದ ₹3 ಲಕ್ಷಕ್ಕಿಂತ ಅಧಿಕ ಇರುವುದರಿಂದ ನೀವು ಆದಾಯ ತೆರಿಗೆ ರಿಫಂಡ್ ಪಡೆಯುವ ಕಾರಣಕ್ಕಲ್ಲದಿದ್ದರೂ, ರಿಟರ್ನ್ಸ್ ಸಲ್ಲಿಕೆಯನ್ನು ಕಡ್ಡಾಯವಾಗಿ ಮಾಡಬೇಕಾಗಿರುತ್ತದೆ. ನೀವು ಮುಂದಿನ ಜುಲೈ ತಿಂಗಳೊಳಗೆ ನಿಮ್ಮ ಐಟಿಆರ್ ಸಲ್ಲಿಸಿ. ನೀವು ಯಾವುದಾದರೂ ತೆರಿಗೆ ಸಲಹೆ ನೀಡುವವರ ನೆರವು ಪಡೆದು ಈ ಆದಾಯ ಮಾತ್ರವಲ್ಲದೆ ನಿಮ್ಮ ಗಮನಕ್ಕೆ ಬರದ ಇತರೆ ಯಾವುದಾದರೂ ಆದಾಯ ನಿಮ್ಮ ಎಐಎಸ್ ಖಾತೆಯಲ್ಲಿ ಕಂಡು ಬಂದಿದೆಯೇ ಎಂಬ ಬಗ್ಗೆ ಮಾಹಿತಿ ಪಡೆದು ನಂತರವಷ್ಟೇ ರಿಟರ್ನ್ಸ್ ಸಲ್ಲಿಸಿ. ನಿಮ್ಮ ಆಧಾರ್ ಹಾಗೂ ಮೊಬೈಲ್ ಸಂಖ್ಯೆ ಈಗಾಗಲೇ ಜೋಡಣೆ ಆಗಿದ್ದರೆ, ತೆರಿಗೆ ರಿಟರ್ನ್ಸ್ ಸುಲಭವಾಗಿ ಸಲ್ಲಿಸಬಹುದು.

ವಿಜಯ್ ಕೆ.ಪಿ, ವೈಟ್‌ಫೀಲ್ಡ್, ಬೆಂಗಳೂರು

- **ಪ್ರಶ್ನೆ: ನಾನು ಐ.ಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ನನ್ನ ಉಳಿತಾಯದ ಭಾಗವಾಗಿ ನಾನು ಷೇರು, ಮ್ಯೂಚುವಲ್ ಫಂಡ್ ಇತ್ಯಾದಿ ಉತ್ಪನ್ನಗಳಲ್ಲಿ ಕೆಲವು ವರ್ಷಗಳಿಂದ ಹೂಡಿಕೆ ಮಾಡುತ್ತಿದ್ದೇನೆ. ಇದಲ್ಲದೆ ನಾನು ವರ್ಚುವಲ್ ಡಿಜಿಟಲ್ ಆಸ್ತಿಗಳಾದ ಕ್ರಿಪ್ಟೋ ಕರೆನ್ಸಿಗಳಲ್ಲೂ ಹೂಡಿಕೆ ಮಾಡಿದ್ದೇನೆ. ಇದರಿಂದ ಒಂದಿಷ್ಟು ಲಾಭವಾಗಿದೆ. ಆದರೆ ಕೆಲವು ಸಂದರ್ಭದಲ್ಲಿ ನಷ್ಟವೂ ಆಗಿದೆ. ನನ್ನ ಪ್ರಶ್ನೆ ಏನೆಂದರೆ, ಆದಾಯ ತೆರಿಗೆ ಕಾನೂನಿನಡಿ ಇದರ ತೆರಿಗೆ ಪಾವತಿ ಅಥವಾ ನಷ್ಟವನ್ನು ಆದಾಯ ತೆರಿಗೆ ರಿಟರ್ನ್ಸ್ ಅಡಿ ವಜಾ ಮಾಡುವ ಹಾಗೂ ಮುಂದಿನ ಸಾಲಿಗೆ ಮುಂದೂಡುವ ಅವಕಾಶ ಇದೆಯೆ? ಹಾಗೂ ತೆರಿಗೆ ದರ, ಪಾವತಿ ಇತ್ಯಾದಿ ಹೇಗೆ. ಇದಕ್ಕೆ ತೆರಿಗೆ ಕಡಿತ (ಟಿಡಿಎಸ್) ಅನ್ವಯಿಸುತ್ತದೆಯೆ?.**

ಉತ್ತರ: 2022-23ನೇ ಹಣಕಾಸು ವರ್ಷದಿಂದ ಅನ್ವಯಿಸುವಂತೆ, ಭಾರತ ಸರ್ಕಾರ ವರ್ಚುವಲ್ ಡಿಜಿಟಲ್ ಆಸ್ತಿಗಳ (ವಿಡಿಎ) ಮೇಲೆ ತೆರಿಗೆ ವಿಧಿಸಿದೆ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 115ಬಿಬಿಎಚ್ ಅಡಿಯಲ್ಲಿ, ಡಿಜಿಟಲ್ ಆಸ್ತಿಗಳ ಮಾರಾಟದಿಂದ ಲಾಭವಿದ್ದರೆ ಶೇ 30ರಷ್ಟು ತೆರಿಗೆ ವಿಧಿಸಲಾಗುತ್ತದೆ. ಈ ಉಲ್ಲೇಖದಲ್ಲಿ ಎಲ್ಲೂ ಕ್ರಿಪ್ಟೋ ಎಂಬ ಸ್ಪಷ್ಟ ಪದ ಬಳಕೆ ಮಾಡಿಲ್ಲವಾದರೂ ಈ ವ್ಯವಹಾರಗಳು ಡಿಜಿಟಲ್ ಆಸ್ತಿಯ ವರ್ಗದಲ್ಲಿ ಬರುತ್ತದೆ.

ಇದರಲ್ಲಿ ನಷ್ಟ ಉಂಟಾದರೆ, ಷೇರುಗಳು ಅಥವಾ ಮ್ಯೂಚುವಲ್ ಫಂಡ್‌ಗಳ ಮೇಲೆ ಲಭ್ಯವಿರುವಂತೆ, ಡಿಜಿಟಲ್ ಆಸ್ತಿಗಳ ಮಾರಾಟದಿಂದ ಆಗಿರುವ ನಷ್ಟವನ್ನು ಬೇರೆ ಯಾವ ಲಾಭದೊಡನೆ ವಜಾ ಮಾಡಲು ಅವಕಾಶವಿಲ್ಲ. ಇಲ್ಲಿ ಇರುವ ನಿರ್ಬಂಧ ಅನ್ಯವರ್ಗದ ಲಾಭಗಳೊಡನೆ ವಜಾ ಮಾಡಲು ಮಾತ್ರ. ಹೀಗಾಗಿ ಪರಸ್ಪರ ವಿವಿಧ ಕ್ರಿಪ್ಟೋ ಕರೆನ್ಸಿಗಳಲ್ಲಿ ಸಂಭವಿಸಿದ ಲಾಭ ನಷ್ಟವನ್ನು ಪರಸ್ಪರ ವಜಾ ಮಾಡಿ ಒಟ್ಟಾರೆ ಲಾಭ ಬಂದರೆ ಮಾತ್ರವೆ ತೆರಿಗೆ ಪಾವತಿಸಬೇಕಾಗುತ್ತದೆ. ಈ ವ್ಯವಹಾರದಲ್ಲಿ ನಷ್ಟ ಸಂಭವಿಸಿದರೆ, ಅಂತಹ ನಷ್ಟವನ್ನು ಮುಂದಿನ ವರ್ಷಗಳಿಗೆ ಮುಂದೂಡಲು ಅವಕಾಶ ಇಲ್ಲ. ಲಾಭ ಲೆಕ್ಕ ಹಾಕಲು, ಮೂಲ ಖರೀದಿ ಮೌಲ್ಯವನ್ನು ಮಾರಾಟ ಬೆಲೆಯಿಂದ ಕಳೆದು ಉಳಿದ ಮೊತ್ತಕ್ಕೆ ತೆರಿಗೆ ಇರುತ್ತದೆ. ಇತರೆ ವೆಚ್ಚಗಳಾದ ಬ್ರೋಕರೇಜ್, ಬ್ಯಾಂಕ್ ವೆಚ್ಚ ಇತ್ಯಾದಿಗಳನ್ನು ಕಳೆಯುವ ಅವಕಾಶ ಇಲ್ಲ.

ಕ್ರಿಪ್ಟೋ ಕರೆನ್ಸಿ ಅಥವಾ ಇತರೆ ವರ್ಚುವಲ್ ಡಿಜಿಟಲ್ ಆಸ್ತಿಗಳ ಮೇಲೆ ಮಾರಾಟದಿಂದ ಬರುವ ಲಾಭಕ್ಕೆ ಶೇಕಡ 30ರಷ್ಟು ನಿಶ್ಚಿತ ತೆರಿಗೆ ಪಾವತಿಸಬೇಕಾಗುತ್ತದೆ. ಹಾಗೂ ಇದರ ಮೇಲೆ ವಿವಿಧ ಸೆಕ್ಷನ್‌ಗಳಡಿ ಸಿಗಬಹುದಾದ ಯಾವುದೇ ವಿನಾಯಿತಿ ಇರುವುದಿಲ್ಲ. ಇನ್ನು ಟಿಡಿಎಸ್ ಬಗ್ಗೆ ಹೇಳುವುದಾದರೆ ಶೇಕಡ 1ರ ದರದಲ್ಲಿ ಕ್ರಿಪ್ಟೋ ವ್ಯವಹಾರ ನಿರ್ವಹಿಸುವ ಸಂಸ್ಥೆಗಳು ಹೂಡಿಕೆದಾರರಿಗೆ ಹಣ ಪಾವತಿಸುವಾಗ ಅಥವಾ ಅವರ ವ್ಯವಹಾರದ ಖಾತೆಗೆ ಜಮಾ ಮಾಡುವಾಗ ತೆರಿಗೆ ಕಡಿತ ಮಾಡಬೇಕಾಗುತ್ತದೆ. ಇದು ವೈಯಕ್ತಿಕ ತೆರಿಗೆ ಪಾವತಿದಾರರಿಗಾಗಿದ್ದರೆ ₹50,000ದ ತನಕದ ಪಾವತಿಗೆ ತೆರಿಗೆ ಕಡಿತ ಇರುವುದಿಲ್ಲ. ಈ ಬಗ್ಗೆ ನಿಮ್ಮ ನಿಖರವಾದ ಮಾಹಿತಿ ಹೊಂದಿ ಸೂಕ್ತ ತೆರಿಗೆ ಸಲಹೆಗಾರರ ಮಾರ್ಗದರ್ಶನ ಪಡೆಯಿರಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.

ಇ–ಮೇಲ್: businessdesk@prajavani.co.in

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಏಳನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕಿರಣ್ ಕುಮಾರ್. ಸಿ
(ಮಾಲೀಕರು ಪಾರ್ವತಿ ಸೂಪರ್ ಫ್ಯೂಲ್ಸ್, ಬಿಡದಿ)
ದಿ. ಶ್ರೀ ಪಾರ್ವತಮ್ಮ ಮತ್ತು
ದಿ. ಶ್ರೀ ಚನ್ನಯ್ಯ (ನಿವೃತ್ತ ಅರಣ್ಯಾಧಿಕಾರಿ)
ಇವರ ದ್ವಿತೀಯ ಪುತ್ರ (02-04-2018)
ಇಂತಿ ದುಃಖತಪ್ತರು: ಪತ್ನಿ, ಮಗ, ಕುಟುಂಬದವರು ಹಾಗೂ ಪೆಟ್ರೋಲ್ ಬಂಕ್ ಸಿಬ್ಬಂದಿ ವರ್ಗ
ಮೊ: 9902230350, 9845010161

LOOKING FOR JOB OPPORTUNITY
Refer Classifieds on Wednesday

ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ.ಸಿ. ಬೆಟ್ಟಸ್ವಾಮಿಗೌಡ
ಸಂಪಂಗಿರಾಮ ಬಸ್ ಮಾಲೀಕರು
ಅಧ್ಯಕ್ಷರು, ಕರ್ನಾಟಕ ಅರ್ಬನ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ, ಬೆಂಗಳೂರು

70ನೇ ಜನ್ಮ ದಿನದ ಸವಿನೆನಪು



ಶ್ರೀ ರಾಜಗೋಪಾಲ್
ಹಿರಿಯ ಉಪ ನಿರ್ದೇಶಕರು, ಕೆ.ಎಂ.ಎಫ್
(ಶ್ರೀಯುತ ರಾಮಯ್ಯನವರ ಮಗ, ಗೋಪಾಲಪುರ)
02-04-1955 24-01-2006
Mob : 9448161491

ನೀವುಗಳು ಎಂದೆಂದಿಗೂ ನಮ್ಮ ಮನ ಮನೆಗಳಲ್ಲಿ ಅಮರರಾಗಿರುವಿರಿ..
ಸದಾ ನಿಮ್ಮ ನೆನಪಿನಲ್ಲಿರುವ : ಪತ್ನಿ, ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು ಮತ್ತು ಬಂಧುಗಳು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

REQUIREMENT FEMALE for accounts near magadi road metro Station. Contact details: 9035860026/ 9886019833

Cook

ಯುವಕ, ಯುವತಿಯರಿಗೆ ಹೋಟೆಲ್ ಕೆಲಸದಲ್ಲಿ ಅಡಿಗೆ ಮಾಡಲು ಮತ್ತು ಹೆಲ್ಪರ್ ಕೆಲಸ ಖಾಲಿ ಇದೆ. ಸಂಬಳ : 25,000 ರಿಂದ 30,000 ಸಾವಿರವರೆಗೆ.ಶೇಷಾದ್ರಿಪುರಂ, ಬೆಂಗಳೂರು. Ph: 9019626612

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

ವೈಯಕ್ತಿಕ

Change of Name

I ASHISH Kumar Ahlawat S/o Satya Prakash Ahlawat, R/o. 42/,Madhav Nagar, Bangalore 560001 have changed my name to Ashish Ahlawat for all purposes by an affidavit sworn before Vikhroli Public Notary dated 21-03-2025

ಪ್ರವಾಸ

Travel

7 ದಿನಗಳ ಅಷ್ಟ ಜ್ಯೋತಿರ್ಲಿಂಗ. 14 ದಿನಗಳ ಚಾರ್‌ಧಾಮ. ಕಾಶಿ ಯಾತ್ರೆ. ಸಂಪರ್ಕಿಸಿ. ವಿಜಯ ಟ್ರಾವೆಲ್ಸ್, ಮಲ್ಲೇಶ್ವರಂ, ಬೆಂಗಳೂರು: 9448294477

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ರಾಜಕೀಯವು ಪೂರ್ಣಾವಧಿ ಉದ್ಯೋಗವಲ್ಲ: ಯೋಗಿ

ಲಖನೌ (ಪಿಟಿಐ): ಬಿಜೆಪಿಯ ರಾಷ್ಟ್ರೀಯ ನಾಯಕರು ಮತ್ತು ತಮ್ಮ ನಡುವೆ ಭಿನ್ನಾಭಿಪ್ರಾಯ ತಲೆದೋರಿದೆ ಎಂಬ ವರದಿಗಳನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅಲ್ಲಗಳೆದಿದ್ದಾರೆ.

ಪಿಟಿಐ ಸುದ್ದಿ ಸಂಸ್ಥೆ ಜತೆಗಿನ ಸಂದರ್ಶನದಲ್ಲಿ ಮಾತನಾಡಿದ ಅವರು, 'ಪಕ್ಷದ ಕೇಂದ್ರ ನಾಯಕರೊಂದಿಗೆ ಭಿನ್ನಾಭಿಪ್ರಾಯ ಹೊಂದುವ ಮೂಲಕ ನಾನು ಕುರ್ಚಿಯಲ್ಲಿ (ಮುಖ್ಯಮಂತ್ರಿ

ಯೋಗಿ ಆದಿತ್ಯನಾಥ

ಸ್ಥಾನ) ಉಳಿಯಬಹುದೇ' ಎಂದು ಕೇಳಿದ್ದಾರೆ. 'ಭಿನ್ನಾಭಿಪ್ರಾಯಗಳ ಬಗ್ಗೆ ಊಹಾಪೋಹಗಳನ್ನು ಹುಟ್ಟು ಹಾಕುವವರ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

ಕೆಲವರು ನಿಮ್ಮನ್ನು ಮುಂದಿನ ಪ್ರಧಾನಿ ಎಂಬಂತೆ ಬಿಂಬಿಸುತ್ತಿರುವ ಕುರಿತ ಪ್ರಶ್ನೆಗೆ, 'ರಾಜಕೀಯವು ನನಗೆ ಪೂರ್ಣಾವಧಿ ಕೆಲಸವಲ್ಲ. ನಾನು ಯೋಗಿಯಾಗಿಯೇ (ಸನ್ಯಾಸಿ) ಇದ್ದೇನೆ' ಎಂದು ಪ್ರತಿಕ್ರಿಯಿಸಿದರು.

'ನಾನು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದು, ರಾಜ್ಯದ ಜನರ ಸೇವೆ ಮಾಡುವ ಜವಾಬ್ದಾರಿಯನ್ನು ಪಕ್ಷವು ನನಗೆ ನೀಡಿದೆ. ರಾಜಕೀಯದಲ್ಲಿ ಎಷ್ಟು ದಿನ ಮುಂದುವರಿಯಬೇಕು ಎಂಬುದಕ್ಕೂ ಒಂದು ಕಾಲಮಿತಿ ಇರುತ್ತದೆ' ಎಂದರು.

'ರಸ್ತೆ ಇರುವುದು ಸಂಚಾರಕ್ಕೆ'

'ರಸ್ತೆ ಇರುವುದು ಸಂಚಾರ ಮಾಡುವುದಕ್ಕೆ. ರಸ್ತೆಯಲ್ಲಿ ನಮಾಜ್ ಮಾಡಬಾರದು ಎಂಬ ಸರ್ಕಾರದ ನಿರ್ಧಾರದ ವಿರುದ್ಧ ಮಾತನಾಡುತ್ತಿರುವವರು, ಹಿಂದೂಗಳ ಶಿಸ್ತನ್ನು ನೋಡಿ ಕಲಿಯಬೇಕು. 66 ಕೋಟಿ ಜನರು ಪ್ರಯಾಗರಾಜ್‌ಗೆ ಬಂದಿದ್ದರು. ಕಳ್ಳತನ, ಆಸ್ತಿ ಹಾನಿ, ಬೆಂಕಿ ಹಚ್ಚುವುದು, ಅಪಹರಣ, ದೌರ್ಜನ್ಯ... ಹೀಗೆ ಯಾವ ಅಪರಾಧ ಪ್ರಕರಣವೂ ದಾಖಲಾಗಲಿಲ್ಲ. ಇದು ಧಾರ್ಮಿಕ ಶಿಸ್ತು. ಅನುಕೂಲಗಳು ಬೇಕು ಎಂದಾದರೆ, ನೀವು ಶಿಸ್ತನ್ನು ಪಾಲಿಸಲೇಬೇಕು' ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದರು.

'ಬುಲ್ಡೋಜರ್ ನ್ಯಾಯ: ಸುಪ್ರೀಂ ಕೋರ್ಟ್ ಶ್ಲಾಘಿಸಿದೆ'

- ಬುಲ್ಡೋಜರ್ ಅನ್ನು ಕಟ್ಟಡ ಕಟ್ಟಲೂ ಬಳಸಬಹುದು. ಕಟ್ಟಡ ಕೆಡವಲೂ ಬಳಸಬಹುದು. ಉತ್ತಮ ರೀತಿಯಲ್ಲಿ ಬುಲ್ಡೋಜರ್ ಅನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ನಾವು ತೋರಿಸಿಕೊಟ್ಟಿದ್ದೇವೆ. ಸುಪ್ರೀಂ ಕೋರ್ಟ್‌ನ ಯಾವುದೇ ಸೂಚನೆಯಾಗಲಿ, ಅಭಿಪ್ರಾಯಗಳಾಗಲಿ ನಮ್ಮ ಬುಲ್ಡೋಜರ್ ನ್ಯಾಯದ ವಿರುದ್ಧ ಇರಲಿಲ್ಲ. ನಿಜ ಹೇಳಬೇಕೆಂದರೆ, ನಮ್ಮ ಈ ಕಾರ್ಯವನ್ನು ಸುಪ್ರೀಂ ಕೋರ್ಟ್ ಶ್ಲಾಘಿಸಿದೆ
- ವಕ್ಫ್ ಮಂಡಳಿಯು ಸ್ವಹಿತಾಸಕ್ತಿಗಾಗಿ ಆಸ್ತಿ ಕಬಳಿಸುವ ಕೂಪವಾಗಿದೆ. ಹಿಂದೂ ದೇವಾಲಯಗಳು, ಮಠಗಳನ್ನೇ ನೋಡಿ, ಶಿಕ್ಷಣ ಹಾಗೂ ಆರೋಗ್ಯಕ್ಕೆ ಎಷ್ಟೊಂದು ದೇಣಿಗೆ ನೀಡಿವೆ. ಇಷ್ಟೊಂದು ಆಸ್ತಿ ಇದ್ದರೂ ವಕ್ಫ್ ಮಂಡಳಿಯು ಇಂಥ ಒಂದು ದೇಣಿಗೆ ನೀಡಿದೆಯೇ? ಸಮಾಜಕ್ಕೆ ಮಾಡುವುದು ಬೇಡ, ಕೊನೆ ಪಕ್ಷ ಮುಸ್ಲಿಮರಿಗಾದರೂ ಮಾಡಿದೆಯೇ?

ರಾಜ್ಯಸಭೆಯಲ್ಲಿ ಗುರುವಾರ ಮಂಡಿಸಲಿರುವ ಕೇಂದ್ರ • ಮಸೂದೆಗೆ ವಿಪಕ್ಷಗಳ ವಿರೋಧ

ವಕ್ಫ್: ತಿದ್ದುಪಡಿ ಮಸೂದೆ ಇಂದು ಮಂಡನೆ

ನವದೆಹಲಿ: ಕೇಂದ್ರ ಸರ್ಕಾರವು ಪರಿಷ್ಕೃತ ವಕ್ಫ್ (ತಿದ್ದುಪಡಿ) ಮಸೂದೆಯನ್ನು ಲೋಕಸಭೆಯಲ್ಲಿ ಬುಧವಾರ ಮಂಡಿಸಲಿದೆ.

ಲೋಕಸಭೆಯಲ್ಲಿ ಮಸೂದೆಗೆ ಬುಧವಾರವೇ ಅಂಗೀಕಾರ ಪಡೆಯಲು ಒಲವು ಹೊಂದಿರುವ ಕೇಂದ್ರ, ಇದನ್ನು ರಾಜ್ಯಸಭೆಯಲ್ಲೂ ಗುರುವಾರವೇ ಮಂಡಿಸಲು ಮುಂದಾಗಿದೆ ಎಂದು ಮೂಲಗಳು ಹೇಳಿವೆ.

ಮುಸ್ಲಿಮರ ಹಕ್ಕುಗಳನ್ನು ಮೊಟಕುಗೊಳಿಸುವ ಪ್ರಯತ್ನದ ಭಾಗವಾಗಿ ಈ ತಿದ್ದುಪಡಿ ಮಸೂದೆಯನ್ನು ತರಲಾಗುತ್ತಿದೆ ಎಂದೇ ಪ್ರತಿಪಾದಿಸುತ್ತಾ ಬಂದಿರುವ ವಿರೋಧ ಪಕ್ಷಗಳು, ಈ ವಿಚಾರವಾಗಿ ಸಂಘರ್ಷಕ್ಕೆ ಸಜ್ಜಾಗಿವೆ.

ವಿಪ್ ಜಾರಿ: ಮುಂದಿನ ಮೂರು ದಿನ ಸದನದಲ್ಲಿ ಹಾಜರಿರುವಂತೆ ಬಿಜೆಪಿ ಹಾಗೂ ಕಾಂಗ್ರೆಸ್, ತನ್ನ ಸಂಸದರಿಗೆ ವಿಪ್ ಜಾರಿ ಮಾಡಿವೆ.

ಸಲಹಾ ಸಮಿತಿ ಸಭೆ: ಲೋಕಸಭೆಯಲ್ಲಿ ತಿದ್ದುಪಡಿ ಮಸೂದೆ ಮಂಡನೆ ಕುರಿತು ಚರ್ಚಿಸಲು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅಧ್ಯಕ್ಷತೆಯಲ್ಲಿ ಕಲಾಪ ಸಲಹಾ ಸಮಿತಿ ಸಭೆ ನಡೆಯಿತು. ಮಸೂದೆ ಕುರಿತ ಚರ್ಚೆಗೆ 8 ತಾಸು ನೀಡುವುದಾಗಿ ಸಭೆಗೆ ತಿಳಿಸಲಾಯಿತು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ವಿಪಕ್ಷಗಳ ಸದಸ್ಯರು, ಮಸೂದೆ ಕುರಿತ ಚರ್ಚೆಗೆ 12 ಗಂಟೆ ಮೀಸಲಿಡಬೇಕು ಎಂದು ಪಟ್ಟು ಹಿಡಿದರು. ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಹೇರಿರುವುದು, ನ್ಯಾಯಯುತ ಮತ್ತು ಮುಕ್ತ ಚುನಾವಣೆಗಳನ್ನು ನಡೆಸುವ ಬಗ್ಗೆಯೂ ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್ ಓಂ ಬಿರ್ಲಾ, 'ರಾಷ್ಟ್ರಪತಿಯವರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಕೂಡ ಇಷ್ಟೊಂದು ಸುದೀರ್ಘ ಚರ್ಚೆ ನಡೆಯದಿರುವಾಗ, ಈ ತಿದ್ದುಪಡಿ ಮಸೂದೆ ಕುರಿತ ಚರ್ಚೆಗೆ ಇಷ್ಟೊಂದು ಸಮಯ ಹಂಚಿಕೆ ಹೇಗೆ ಸಾಧ್ಯ' ಎಂಬ ಪ್ರಶ್ನೆಯನ್ನು ಸಭೆ ಮುಂದಿಟ್ಟರು.

'ವಕ್ಫ್ (ತಿದ್ದುಪಡಿ) ಮಸೂದೆ ಕುರಿತ ಚರ್ಚೆಗೆ 8 ಗಂಟೆ ನೀಡಲು ನಿರ್ಧರಿಸಲಾಗಿದೆ. ಸದನದ ವಿವೇಚನೆಯಂತೆ ಚರ್ಚೆಯ ಅವಧಿಯನ್ನು ವಿಸ್ತರಿಸಬಹುದು. ವಿಪಕ್ಷಗಳ ಸದಸ್ಯರಿಗೆ ಚರ್ಚೆ ಬೇಡ ಎನ್ನುವುದಾದರೆ, ಬುಧವಾರ ಪ್ರಶ್ನೋತ್ತರ ಅವಧಿ ನಂತರ ನಾನು ಈ ಮಸೂದೆಯನ್ನು ಮಂಡಿಸುತ್ತೇನೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದರು.

ಆಗ, ಮಸೂದೆ ಕುರಿತ ಚರ್ಚೆಗೆ 10 ಗಂಟೆ ನೀಡಬೇಕು ಎಂದು ವಿಪಕ್ಷಗಳ ಸದಸ್ಯರು ಆಗ್ರಹಿಸಿದರು. ಇದಕ್ಕೆ ಒಪ್ಪದ ಸಮಿತಿ, 8 ಗಂಟೆ ನೀಡುವುದಾಗಿ ಸ್ಪಷ್ಟಪಡಿಸಿತು. ಆಗ, ತಮ್ಮ ಬೇಡಿಕೆಗಳಿಗೆ ಸ್ಪಂದನೆ ಸಿಗುತ್ತಿಲ್ಲ ಎಂದು ಪ್ರತಿಭಟಿಸಿದ ವಿರೋಧ ಪಕ್ಷಗಳ ಸದಸ್ಯರು, ಸಭೆಯಿಂದ ಹೊರ ನಡೆದರು ಎಂದು ಮೂಲಗಳು ಹೇಳಿವೆ.

ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪನಾಯಕ ಗೌರವ್ ಗೊಗೊಯಿ, ಕಾಂಗ್ರೆಸ್‌ನ ಮುಖ್ಯ ಸಚೇತಕ ಕೆ.ಸುರೇಶ್, ಡಿಎಂಕೆ ಸಂಸದ ದಯಾನಿಧಿ ಮಾರನ್, ಶಿವಸೇನಾ (ಯುಬಿಟಿ) ಸದಸ್ಯ ಅರವಿಂದ ಸಾವಂತ, ಸಮಾಜವಾದಿ ಪಕ್ಷದ ಲಾಲ್‌ಜಿ ವರ್ಮಾ ಹಾಗೂ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು ಎಂದಿವೆ.

ಮಿತ್ರ ಪಕ್ಷಗಳ ಬೆಂಬಲ

ಬಿಜೆಪಿ ಮಿತ್ರ ಪಕ್ಷಗಳಾದ ಟಿಡಿಪಿ, ಜೆಡಿಯು ಹಾಗೂ ಎಲ್‌ಜೆಪಿ (ರಾಮವಿಲಾಸ್) ಈ ಮೊದಲು ವಕ್ಫ್ ತಿದ್ದುಪಡಿ ಮಸೂದೆಯಲ್ಲಿನ ಕೆಲ ಅಂಶಗಳ ಬಗ್ಗೆ ಅಪಸ್ವರ ಎತ್ತಿದ್ದವು. ತಾವು ನೀಡಿರುವ ತಿದ್ದುಪಡಿಗಳನ್ನು ಜಂಟಿ ಸಂಸದೀಯ ಸಮಿತಿಯು ತಿದ್ದುಪಡಿ ಮಸೂದೆಯಲ್ಲಿ ಅಳವಡಿಸಿದ ಕಾರಣ, ಈ ಮಿತ್ರ ಪಕ್ಷಗಳು ಈಗ ಬೆಂಬಲ ವ್ಯಕ್ತಪಡಿಸಿವೆ.

'ಇಂಡಿಯಾ'ದ ಪ್ರಬಲ ವಿರೋಧ

ನವದೆಹಲಿ: ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ವಕ್ಫ್ ತಿದ್ದುಪಡಿ ಮಸೂದೆಯನ್ನು ಒಗ್ಗಟ್ಟಿನಿಂದ ವಿರೋಧಿಸಲಿದೆ. ತನ್ನೆಲ್ಲ ಸಂಸದರು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕು, ಯಾರೂ ಕಲಾಪಕ್ಕೆ ಅಡ್ಡಿ ಉಂಟುಮಾಡಬಾರದು ಎಂದು 'ಇಂಡಿಯಾ' ಮೈತ್ರಿಕೂಟವು ಸೂಚಿಸಿದೆ.

ಈ ಮಸೂದೆಯು ಮುಸ್ಲಿಮರಿಗೆ ಮಾತ್ರ ಸಂಬಂಧಿಸಿದ್ದು ಎಂದು ಯಾರೂ ಬಿಂಬಿಸಬಾರದು. ಇದು ಸಂವಿಧಾನ, ಧರ್ಮನಿರಪೇಕ್ಷತೆ ಮತ್ತು ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದ ವಿಚಾರವೆಂದು ಬಿಂಬಿಸಬೇಕು ಎಂದು 'ಇಂಡಿಯಾ' ಕೂಟದ ನಾಯಕರು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಸೂದೆಯ ಪರವಾಗಿ ಲೋಕಸಭೆಯಲ್ಲಿ 294 ಮತಗಳನ್ನು, ರಾಜ್ಯಸಭೆಯಲ್ಲಿ 125 ಮತಗಳನ್ನು (ಎಐಎಡಿಎಂಕೆ ಬೆಂಬಲ ಸಿಕ್ಕರೆ 129 ಮತಗಳನ್ನು) ಒಗ್ಗೂಡಿಸಬಹುದು ಎಂಬ ಲೆಕ್ಕಾಚಾರ ಎನ್‌ಡಿಎ ಪಾಳಯದಲ್ಲಿದೆ.

ವಿಪಕ್ಷಗಳ ಟೀಕೆ

ಕೇಂದ್ರ ಸರ್ಕಾರ ತನ್ನ 'ಕಾರ್ಯಸೂಚಿ' ಹೇರಲು ಮುಂದಾಗಿತ್ತು ಹಾಗೂ ನಮ್ಮ ಮಾತು ಕೇಳಲು ಸಿದ್ಧವಿರಲಿಲ್ಲ. ಕೇಂದ್ರದ ಈ ನಡೆ ಖಂಡಿಸಿ ನಾವು ಸಭೆಯಿಂದ ಹೊರ ನಡೆಯಬೇಕಾಯಿತು. ಮತದಾರರ ಗುರುತಿನ ಚೀಟಿ (ಎಪಿಕ್), ರಕ್ಷಣೆ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯಗಳು ಹಾಗೂ ಮಣಿಪುರ ವಿದ್ಯಮಾನಗಳ ಕುರಿತು ಚರ್ಚೆ ನಡೆಯಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ. ಸದನ ಒಂದು ಪಕ್ಷಕ್ಕೆ ಸೇರಿದ್ದಲ್ಲ. ಅದು ಜನರಿಗೆ ಸೇರಿದ್ದು.

ಗೌರವ್ ಗೊಗೊಯಿ, ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ

ವಿರೋಧ ಪಕ್ಷಗಳನ್ನು ನಿರಂತರವಾಗಿ ನಿರ್ಲಕ್ಷಿಸುತ್ತಾ ಬರಲಾಗುತ್ತಿದೆ. ಕೇಂದ್ರ ಸರ್ಕಾರದ ಈ ನಡೆ ಸ್ವೀಕಾರಾರ್ಹವಲ್ಲ

ದಯಾನಿಧಿ ಮಾರನ್, ಡಿಎಂಕೆ ಸಂಸದ

ವಕ್ಫ್ ತಿದ್ದುಪಡಿ ಮಸೂದೆ ಕುರಿತ ಚರ್ಚೆಗೆ ಸೂಕ್ತ ಅವಕಾಶ ನೀಡದಿರುವುದು ವಿಷಾದನೀಯ. ಮಣಿಪುರ ವಿದ್ಯಮಾನ ಕುರಿತು ರಾತ್ರಿ 11ಕ್ಕೆ ಅಥವಾ ಮಧ್ಯರಾತ್ರಿ ಚರ್ಚೆ ಮಾಡಲು ನೀವು (ಕೇಂದ್ರ) ಬಯಸುವಿರಾ? ಕೇಂದ್ರವು ಲೋಕಸಭೆಯ ಘನತೆಯನ್ನು ಹಾಳು ಮಾಡುತ್ತಿದೆ

ಕಲ್ಯಾಣ ಬ್ಯಾನರ್ಜಿ, ಟಿಎಂಸಿ ಮುಖ್ಯ ಸಚೇತಕ, ಲೋಕಸಭೆ



ಗಣಗೌರ್ ಉತ್ಸವ

ಜೈಪುರದಲ್ಲಿ ಮಂಗಳವಾರ ಗಣಗೌರ್ ಉತ್ಸವದ ಅಂಗವಾಗಿ ತ್ರಿಪೋಲಿಯಾ ಗೇಟ್ ಬಳಿ ಸಾಗಿದ ಮೆರವಣಿಗೆಯಲ್ಲಿ ದೊಡ್ಡ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

'ಪುಸ್ತಕಗಳೊಂದಿಗೆ ಬಾಲಕಿ ಓಡುತ್ತಿದ್ದ ದೃಶ್ಯ ಆಘಾತ ತಂದಿತ್ತು'

ನವದೆಹಲಿ (ಪಿಟಿಐ): ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ತನ್ನ ಗುಡಿಸಲನ್ನು ಬುಲ್ಡೋಜರ್ ಧ್ವಂಸ ಮಾಡುತ್ತಿದ್ದ ವೇಳೆ, 8 ವರ್ಷದ ಬಾಲಕಿ ಪಠ್ಯಪುಸ್ತಕಗಳನ್ನು ಹಿಡಿದು ಓಡುತ್ತಿದ್ದ ವಿಡಿಯೊ ಆಘಾತ ತಂದಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಹಾಗೂ ಉಜ್ವಲ್ ಭುಯಾನ್ ಅವರು ಇದ್ದ ಪೀಠವು, ಪ್ರಯಾಗರಾಜ್‌ನಲ್ಲಿ ಅಕ್ರಮ ಕಟ್ಟಡಗಳ ತೆರವು ಕಾರ್ಯಾಚರಣೆ ಕುರಿತ ಅರ್ಜಿ ವಿಚಾರಣೆ ವೇಳೆ ಈ ವಿಷಯ ಪ್ರಸ್ತಾಪಿಸಿದೆ.

'ಜಲಾಲಪುರ ತಹಶೀಲ್ದಾರ್ ಆದೇಶದ ಮೇರೆಗೆ ಗ್ರಾಮದಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆ. ವಸತಿಯೇತರ ನಿರ್ಮಾಣಗಳ ತೆರವಿಗೂ ಮುನ್ನ ನೋಟಿಸ್ ನೀಡಲಾಗಿತ್ತು' ಎಂದೂ ಪೊಲೀಸರು ಪೀಠಕ್ಕೆ ತಿಳಿಸಿದ್ದಾರೆ.

'ಜನಗಣತಿ, ಜಾತಿಗಣತಿಯನ್ನು ಸರ್ಕಾರ ತಕ್ಷಣ ಆರಂಭಿಸಲಿ'

ದೇಶದಲ್ಲಿ 10 ವರ್ಷಕ್ಕೊಮ್ಮೆ ನಡೆಯುತ್ತಿದ್ದ ಜನಗಣತಿ ಮತ್ತು ಅದರ ಜೊತೆಗೆ ಜಾತಿಗಣತಿಯನ್ನು ಸರ್ಕಾರ ತಕ್ಷಣ ಆರಂಭಿಸಬೇಕು ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ಆಗ್ರಹಿಸಿದರು.

ರಾಜ್ಯಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಮಾತನಾಡಿದ ಖರ್ಗೆ, 'ಜನಗಣತಿ ಮತ್ತು ಜಾತಿಗಣತಿ ವಿಳಂಬದಿಂದಾಗಿ ಹೆಚ್ಚು ಜನರು ಕಲ್ಯಾಣ ಕಾರ್ಯಕ್ರಮಗಳಿಂದ ವಂಚಿತರಾಗುತ್ತಿದ್ದಾರೆ' ಎಂದು ಹೇಳಿದರು.

'1881ರಿಂದ ಪ್ರತಿ 10 ವರ್ಷಕ್ಕೊಮ್ಮೆ ದೇಶದಲ್ಲಿ ಜನಗಣತಿ ನಡೆಯುತ್ತಿತ್ತು. ಯುದ್ಧ, ತುರ್ತು ಪರಿಸ್ಥಿತಿಯ ಸಮಯದಲ್ಲೂ ಜನಗಣತಿ ನಡೆದಿದೆ. ಆದರೆ ಇತಿಹಾಸದಲ್ಲಿ ಮೊದಲ ಬಾರಿಗೆ ಸರ್ಕಾರವೊಂದು ಜನಗಣತಿಯನ್ನು ಇಷ್ಟು ವಿಳಂಬಗೊಳಿಸಿರುವುದು ದುರದೃಷ್ಟಕರ' ಎಂದರು.

ಎಸ್‌ಪಿ ಸಂಸದ ಸುಮನ್‌ಗೆ ಬೆದರಿಕೆ: ಸಂಸತ್ತಿನಲ್ಲಿ ಪ್ರಸ್ತಾಪ

ರಜಪೂತ ರಾಜ ರಾಣಾ ಸಂಗ್ ಬಗ್ಗೆ ಆಡಿದ ವಿವಾದಾತ್ಮಕ ಮಾತುಗಳಿಗೆ ಸಮಾಜವಾದಿ ಪಕ್ಷದ ಸಂಸದ ರಾಮ್‌ಜಿ ಲಾಲ್ ಸುಮನ್ ಅವರಿಗೆ ಬೆದರಿಕೆ ಎದುರಾಗಿರುವುದು ಹಾಗೂ ಅವರ ಮನೆಯ ಮೇಲೆ ದಾಳಿ ನಡೆದಿರುವುದು ಲೋಕಸಭೆಯಲ್ಲಿ ಮಂಗಳವಾರ ಪ್ರಸ್ತಾಪ ಆಯಿತು.

ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ನೇತೃತ್ವದಲ್ಲಿ ಪಕ್ಷದ ಸಂಸದರು ಲೋಕಸಭೆಯ ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದರು, ಘೋಷಣೆಗಳನ್ನು ಕೂಗಿದರು. ಈ ವಿಚಾರವಾಗಿ ನಿಲುವಳಿ ಸೂಚನೆಗೆ ಸ್ಪೀಕರ್ ಓಂ ಬಿರ್ಲಾ ಅವಕಾಶ ನೀಡದೆ ಇದ್ದಾಗ, ಸಮಾಜವಾದಿ ಪಕ್ಷದ ಕೆಲವರು ಭಿತ್ತಿಪತ್ರ ಪ್ರದರ್ಶಿಸಿದರು. ಟಿಎಂಸಿ ಸಂಸದರು ನ್ಯಾಯಮೂರ್ತಿಯೊಬ್ಬರ ವರ್ಗಾವಣೆ ವಿಚಾರವಾಗಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ತೊಡಗಿರುವ ಸಂಸದರು ತಮ್ಮ ಆಸನಗಳಿಗೆ ಮರಳಬೇಕು ಎಂದು ಬಿರ್ಲಾ ಮನವಿ ಮಾಡಿದರೂ, ಘೋಷಣೆ ಕೂಗುವುದು ಮುಂದುವರಿಯಿತು. ಭಿತ್ತಿಪತ್ರ ಹಾಗೂ ಘೋಷಣೆ ಕೂಗುವುದಕ್ಕೆ ಸದನದಲ್ಲಿ ಅವಕಾಶವಿಲ್ಲ, ವಿಷಯ ಪ್ರಸ್ತಾಪಿಸಲು ಅಖಿಲೇಶ್ ಅವರಿಗೆ ಅವಕಾಶ ನೀಡಲಾಗುತ್ತದೆ ಎಂದು ಬಿರ್ಲಾ ಹೇಳಿದರು.

ಆದರೆ ಗದ್ದಲ ಮುಂದುವರಿದ ಕಾರಣಕ್ಕೆ, ಸದನವನ್ನು ಮುಂದೂಡಲಾಯಿತು. ರಾಜ್ಯಸಭೆಯಲ್ಲಿಯೂ ಸುಮನ್ ಅವರ ವಿಚಾರ ಪ್ರಸ್ತಾಪವಾಯಿತು.

ಸಮಾಜವಾದಿ ಪಕ್ಷದ ರಾಮಗೋಪಾಲ್ ಯಾದವ್ ವಿಷಯ ಪ್ರಸ್ತಾಪಿಸಿ, 'ಸುಮನ್ ಅವರ ಜೀವ ತೆಗೆಯುವವರಿಗೆ ₹25 ಲಕ್ಷ ಕೊಡುವುದಾಗಿ ವ್ಯಕ್ತಿಯೊಬ್ಬ ಹೇಳಿದ್ದಾನೆ. ಸಂಸದರೊಬ್ಬರ ಭದ್ರತೆಗೆ ಸಂಬಂಧಿಸಿದ ವಿಷಯ ಇದು' ಎಂದರು.

ಯಾದವ್ ಬೆಂಬಲಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಸಂಸದರ ಭದ್ರತೆಗೆ ಸಂಬಂಧಿಸಿದ ವಿಷಯವನ್ನು ಪ್ರಸ್ತಾಪಿಸಲು ತಾವು ಬಯಸಿರುವುದಾಗಿ ಹೇಳಿದರು. ಪ್ರತಿ ಪ್ರಜೆ ಹಾಗೂ ಪ್ರತಿ ಸಂಸದನ ಭದ್ರತೆ ಬಹಳ ಮುಖ್ಯ ಎಂದು ಹೇಳಿದ ಸಭಾಪತಿ ಜಗದೀಪ್ ಧನಕರ್, ಸುಮನ್ ಅವರ ಮಾತುಗಳು 'ನೋವು ಉಂಟುಮಾಡುವಂತಿದ್ದವು' ಎಂದರು.

ಸುಮನ್ ಅವರು ತಮ್ಮ ಮಾತುಗಳನ್ನು ಕಡತದಿಂದ ತೆಗೆದುಹಾಕಿದರೂ, ಆ ಮಾತುಗಳನ್ನು ಮತ್ತೆ ಮತ್ತೆ ಆಡಿದರು ಎಂದು ಧನಕರ್ ಹೇಳಿದರು.

'ಮನೆಗಳ ಧ್ವಂಸ ಆತ್ಮಸಾಕ್ಷಿ ಕಲಕಿದೆ'

ಒಂದನೇ ಪುಟದಿಂದ...

'ಈ ಪ್ರಕರಣದಲ್ಲಿ, ತಮಗೆ ನೀಡಿರುವ ನೋಟಿಸ್‌ಗಳಿಗೆ ಪ್ರತಿಕ್ರಿಯೆ ಸಲ್ಲಿಸಲು ಅವಕಾಶ ನೀಡಿಲ್ಲ. ಸಂವಿಧಾನದ 21ನೇ ವಿಧಿಯು ಪ್ರತಿಯೊಬ್ಬರಿಗೂ ಮನೆ ಹೊಂದುವ ಹಕ್ಕು ನೀಡಿರುದನ್ನು ಪ್ರಾಧಿಕಾರ ನೆನಪಿಟ್ಟುಕೊಳ್ಳಬೇಕು' ಎಂದು ಪೀಠ ಹೇಳಿದೆ.

ಪ್ರಕರಣ ಏನು?

ಒಂದನೇ ಪುಟದಿಂದ...

ಮಾರ್ಚ್ 24ರಂದು ಮೇಲ್ಮನವಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಅರ್ಜಿದಾರರು ಮನೆಗಳನ್ನು ಪುನಃ ನಿರ್ಮಿಸಿಕೊಳ್ಳಲು ಅನುಮತಿ ನೀಡುವುದಾಗಿ ಹೇಳಿತ್ತು.

'ನನ್ನ ಕಕ್ಷಿದಾರರ ಮನೆಗಳು ಇರುವ ಜಾಗವು, 2023ರಲ್ಲಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತ್ಯೆಯಾದ ಗ್ಯಾಂಗ್‌ಸ್ಟರ್ ಹಾಗೂ ರಾಜಕಾರಣಿ ಅತೀಕ್ ಅಹ್ಮದ್‌ಗೆ ಸೇರಿದ್ದು ಎಂದು ತಪ್ಪಾಗಿ ಭಾವಿಸಿದ ರಾಜ್ಯ ಸರ್ಕಾರ, ಮನೆಗಳನ್ನು ಧ್ವಂಸಗೊಳಿಸಿದೆ' ಎಂದು ಅರ್ಜಿದಾರರ ಪರ ವಕೀಲ, ನ್ಯಾಯಪೀಠಕ್ಕೆ ತಿಳಿಸಿದ್ದರು.

ಮನೆಗಳನ್ನು ಧ್ವಂಸಗೊಳಿಸಿದ್ದನ್ನು ಸಮರ್ಥಿಸಿಕೊಂಡಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, '2020ರಲ್ಲಿ ಮೊದಲ, 2021ರ ಜನವರಿ ಹಾಗೂ ಮಾರ್ಚ್‌ನಲ್ಲಿ ಮತ್ತೆ ನೋಟಿಸ್ ನೀಡಲಾಗಿತ್ತು' ಎಂದಿದ್ದರು.

'ಅರ್ಜಿದಾರರಿಗೆ ಮಾರ್ಚ್ 6ರಂದು ನೋಟಿಸ್ ನೀಡಿ, 7ರಂದು ಮನೆಗಳನ್ನು ನೆಲಸಮಗೊಳಿಸಲಾಗಿದೆ. ನೋಟಿಸ್ ಜಾರಿ ಮಾಡಿದ 24 ಗಂಟೆಯಲ್ಲಿ ಕಾರ್ಯಾಚರಣೆ ಕೈಗೊಂಡಿದ್ದು ಆಘಾತಕಾರಿ' ಎಂದು ಪೀಠ ಹೇಳಿದೆ.

ಸಂಕ್ಷಿಪ್ತ ಸುದ್ದಿ

'ಸಚಿವ ಕಪಿಲ್ ವಿರುದ್ಧ ಎಫ್‌ಐಆರ್ ದಾಖಲಿಸಿ'



ಕಪಿಲ್ ಮಿಶ್ರಾ

ನವದೆಹಲಿ (ಪಿಟಿಐ): ದೆಹಲಿಯಲ್ಲಿ 2020ರಲ್ಲಿ ನಡೆದ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಕಪಿಲ್ ಮಿಶ್ರಾ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಎಂದು ದೆಹಲಿ ನ್ಯಾಯಾಲಯವು ಮಂಗಳವಾರ ಆದೇಶಿಸಿದೆ.

'ಗಲಭೆ ಸಂಭವಿಸಿದಾಗ ಮಿಶ್ರಾ ಅವರು ಅಲ್ಲಿ ಇದ್ದಿದ್ದು ಸ್ಪಷ್ಟವಾಗಿದೆ. ಮೇಲ್ನೋಟಕ್ಕೆ ಗುರುತಿಸಬಹುದಾದ ಅಪರಾಧ ಗೋಚರಿಸುತ್ತಿದೆ. ಆದ್ದರಿಂದ ತನಿಖೆಯ ಅಗತ್ಯವಿದೆ' ಎಂದು ಹೆಚ್ಚುವರಿ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ವೈಭವ್ ಚೌರಾಸಿಯಾ ಹೇಳಿದ್ದಾರೆ.

ಕಪಿಲ್ ಮಿಶ್ರಾ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಯಮುನಾ ವಿಹಾರ್‌ನ ನಿವಾಸಿ ಮೊಹಮದ್ ಇಲ್ಯಾಸ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರು ಈ ಆದೇಶ ನೀಡಿದ್ದಾರೆ. ಗಲಭೆಯಲ್ಲಿ ಸಚಿವರ ಯಾವುದೇ ಪಾತ್ರವಿಲ್ಲ ಎಂದು ದೆಹಲಿ ಪೊಲೀಸರು ಈ ಅರ್ಜಿಯನ್ನು ವಿರೋಧಿಸಿದರು.

ಅತ್ಯಾಚಾರ: ಬಜೀಂದರ್‌ಗೆ ಜೀವಾವಧಿ ಶಿಕ್ಷೆ

ಚಂಡೀಗಢ (ಪಿಟಿಐ): ಸ್ವಯಂಘೋಷಿತ ಧರ್ಮ ಪ್ರಚಾರಕ ಬಜೀಂದರ್ ಸಿಂಗ್‌ಗೆ ಪಂಜಾಬ್‌ನ ಮೊಹಾಲಿಯ ನ್ಯಾಯಾಲಯವು ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ವಿಧಿಸಿದೆ.

'ಯೇಸು ಯೇಸು ಪಾದ್ರಿ' ಎಂದು ಹೆಸರಾಗಿದ್ದ ಬಜೀಂದರ್ ಅತ್ಯಾಚಾರ ಪ್ರಕರಣದಲ್ಲಿ ದೋಷಿ ಎಂದು ಮಾರ್ಚ್ 28ರಂದು ಆದೇಶ ನೀಡಿದ್ದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ವಿಕ್ರಾಂತ್ ಕುಮಾರ್ ಅವರು ಶಿಕ್ಷೆಯ ಪ್ರಮಾಣ ಮಂಗಳವಾರ ಪ್ರಕಟಿಸಿದ್ದಾರೆ.

ಮಹಿಳೆಯೊಬ್ಬರು ನೀಡಿದ್ದ ದೂರಿನ ಆಧಾರದಲ್ಲಿ ಬಜೀಂದರ್ ವಿರುದ್ಧ 2018ರಲ್ಲಿ ಪ್ರಕರಣ ದಾಖಲಾಗಿತ್ತು.

ಮಹಿಳೆಯನ್ನು ವಿದೇಶಕ್ಕೆ ಕರೆದುಕೊಂಡು ಹೋಗುವುದಾಗಿ ಆಮಿಷವೊಡ್ಡಿದ್ದ ಬಜೀಂದರ್ ಮೊಹಾಲಿಯಲ್ಲಿನ ತನ್ನ ನಿವಾಸದಲ್ಲಿ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದ. ಅದರ ವಿಡಿಯೊ ಚಿತ್ರೀಕರಿಸಿಕೊಂಡು ಮಹಿಳೆಗೆ ಬೆದರಿಕೆ ಒಡ್ಡುತ್ತಿದ್ದ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು.

ಲಂಡನ್‌ಗೆ ಹೊರಟಿದ್ದ ಬಜೀಂದರ್‌ನನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ 2018ರಲ್ಲಿ ಬಂಧಿಸಲಾಗಿತ್ತು.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 21 ಸಾವು

ಅಹಮದಾಬಾದ್: ಗುಜರಾತ್‌ನ ಬನಾಸ್‌ಕಾಂಠ ಜಿಲ್ಲೆಯ ಪಟಾಕಿ ಕಾರ್ಖಾನೆಯೊಂದರಲ್ಲಿ ಮಂಗಳವಾರ ಸ್ಫೋಟ ಸಂಭವಿಸಿ ಚಾವಣಿ ಕುಸಿದ ಪರಿಣಾಮ 21 ಮಂದಿ ಮೃತಪಟ್ಟಿದ್ದು, 6 ಮಂದಿ ಗಾಯಗೊಂಡಿದ್ದಾರೆ.

'ದೀಸಾ ನಗರದ ಕೈಗಾರಿಕಾ ಪ್ರದೇಶದಲ್ಲಿ ಬೆಳಿಗ್ಗೆ 9.45ಕ್ಕೆ ಈ ದುರಂತ ಸಂಭವಿಸಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಮಧ್ಯಪ್ರದೇಶದ ಕಾರ್ಮಿಕರು ತಮ್ಮ ಕುಟುಂಬಸ್ಥರೊಂದಿಗೆ ಕಾರ್ಖಾನೆಯಲ್ಲಿಯೇ ವಾಸಿಸುತ್ತಿದ್ದರು. ಸ್ಫೋಟದ ಪರಿಣಾಮವಾಗಿ ಗೋದಾಮಿನ ಚಾವಣಿಯು ಕುಸಿದುಬಿದ್ದಿದ್ದರಿಂದ ಸಾವಿನ ಸಂಖ್ಯೆ ಹೆಚ್ಚಾಗಿದೆ.

ಹಲವರ ದೇಹಗಳು ಪೂರ್ಣವಾಗಿ ಸುಟ್ಟು ಹೋಗಿರುವುದರಿಂದ ಗುರುತು ಹಿಡಿಯಲು ಕಷ್ಟವಾಗುತ್ತಿದೆ.

'ಈ ಸ್ಥಳದಲ್ಲಿ ಗೋದಾಮಿಗೆ ಮಾತ್ರ ಪರವಾನಗಿ ನೀಡಲಾಗಿದೆ, ಪ್ರಾಥಮಿಕ ಮಾಹಿತಿಯ ಪ್ರಕಾರ ಈ ಸ್ಥಳದಲ್ಲಿ ಅನುಮತಿ ಇಲ್ಲದೆ ಪಟಾಕಿ ತಯಾರಿಸಲಾಗುತ್ತಿತ್ತು' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ನೇಹಾ ಪಾಂಚಾಲ್ ತಿಳಿಸಿದ್ದಾರೆ.

'ಸ್ಫೋಟಕ್ಕೆ ಕಾರಣರಾದವರ ಪತ್ತೆಗಾಗಿ ರಾಜಸ್ಥಾನ ಮತ್ತು ಅಹಮದಾಬಾದ್‌ಗೆ ವಿಶೇಷ ತಂಡಗಳನ್ನು ಕಳುಹಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪೂಜಾ ಸ್ಥಳಗಳ ಕಾಯ್ದೆಯಲ್ಲಿನ ಅವಕಾಶಗಳ ಸಿಂಧುತ್ವ ಪ್ರಶ್ನಿಸಿ ಮೇಲ್ಮನವಿ

ಹೊಸ ಅರ್ಜಿಗಳ ವಿಚಾರಣೆಗೆ ನಕಾರ

'ಸುಪ್ರೀಂ' ಸುದ್ದಿ

ನವದೆಹಲಿ(ಪಿಟಿಐ): ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ–1991ರ ಸೆಕ್ಷನ್ 4(2)ರ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾದ ಹೊಸ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿತು.

'ಕಾಯ್ದೆಯ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಗಳ ಜೊತೆ ನಾನು ಸಲ್ಲಿಸಿರುವ ಪಿಐಎಲ್ ವಿಚಾರಣೆಯನ್ನೂ ನಡೆಸಬೇಕು' ಎಂದು ಕಾನೂನು ವಿದ್ಯಾರ್ಥಿ ನಿತಿನ್ ಉಪಾಧ್ಯಾಯ ಕೋರಿದ್ದರು.

'ಈ ವಿಚಾರವಾಗಿ ಹೊಸದಾಗಿ ಸಲ್ಲಿಕೆಯಾಗುವ ಅರ್ಜಿಗಳ ವಿಚಾರಣೆ ನಡೆಸುವುದಕ್ಕೆ ನಾವು ಸಿದ್ಧ ಇಲ್ಲ' ಎಂದು ಸಿಜೆಐ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇದ್ದ ನ್ಯಾಯಪೀಠ ಹೇಳಿತು.

ರಣವೀರ್‌ಗೆ ಮಧ್ಯಂತರ ರಕ್ಷಣೆ ವಿಸ್ತರಣೆ

ಪ್ರಕರಣವೊಂದರಲ್ಲಿ ಯೂಟ್ಯೂಬರ್ ರಣವೀರ್ ಅಲಹಾಬಾದಿಯಾ ಅವರಿಗೆ ನೀಡಿರುವ ಮಧ್ಯಂತರ ರಕ್ಷಣೆ ವಿಸ್ತರಿಸಿ ಸುಪ್ರೀಂ ಕೋರ್ಟ್ ಮಂಗಳವಾರ ಆದೇಶಿಸಿದೆ.

ತಮ್ಮ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ತನಿಖೆ ಎದುರಿಸುತ್ತಿದ್ದು, ಕಾರ್ಯಕ್ರಮಗಳಲ್ಲಿ ಸಭ್ಯತೆಯಿಂದ ನಡೆದುಕೊಳ್ಳುವುದಾಗಿ ಅಲಹಾಬಾದಿಯಾ ಸಲ್ಲಿಸಿದ ಮುಚ್ಚಳಿಕೆ ಪರಿಗಣಿಸಿದ ನಂತರ ಸುಪ್ರೀಂ ಕೋರ್ಟ್ ಈ ಆದೇಶ ನೀಡಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ ಹಾಗೂ ಎನ್.ಕೋಟೀಶ್ವರ ಸಿಂಗ್ ಅವರಿದ್ದ ಪೀಠವು ಅರ್ಜಿ ವಿಚಾರಣೆ ನಡೆಸಿ, 'ವಿದೇಶ ಪ್ರಯಾಣಕ್ಕೆ ಅನುಮತಿ ಕೋರಿ ಅಲಹಾಬಾದಿಯಾ ಸಲ್ಲಿಸಿರುವ ಅರ್ಜಿಯನ್ನು ಮುಂದಿನ ವಿಚಾರಣೆ ವೇಳೆ ಪರಿಗಣಿಸಲಾಗುವುದು' ಎಂದು ಹೇಳಿತು.

ಬಡ್ಡಿ ದರ ನಿರ್ಧಾರ: ಕೋರ್ಟ್‌ಗೆ ಅಧಿಕಾರ ಇದೆ

ಬಡ್ಡಿಯ ಪ್ರಮಾಣ ಎಷ್ಟಿರಬೇಕು, ಅದನ್ನು ತಕರಾರು ಅರ್ಜಿ ಸಲ್ಲಿಸಿದ ದಿನದಿಂದ ಪಾವತಿಸಬೇಕೇ, ಅದಕ್ಕೂ ಮೊದಲಿನ ದಿನಾಂಕದಿಂದ ಪಾವತಿಸಬೇಕೇ ಅಥವಾ ನ್ಯಾಯಾಲಯದ ಆದೇಶ ಬಂದ ದಿನದಿಂದ ಪಾವತಿಸಬೇಕೇ ಎಂಬುದನ್ನು ಹೇಳುವ ಅಧಿಕಾರವು ನ್ಯಾಯಾಲಯಗಳಿಗೆ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ತೀರ್ಪೊಂದರಲ್ಲಿ ಈ ಮಾತು ಹೇಳಿದೆ. ರಾಜ್ಯ ಸರ್ಕಾರಕ್ಕೆ ವರ್ಗಾವಣೆ ಮಾಡಿದ ಷೇರುಗಳ ಮೌಲ್ಯನಿಗದಿಯ ವಿಚಾರವಾಗಿ ರಾಜಸ್ಥಾನ ಸರ್ಕಾರ ಹಾಗೂ ಐ.ಕೆ. ಮರ್ಚಂಟ್ಸ್ ಪ್ರೈ.ಲಿ. ಸೇರಿದಂತೆ ಕೆಲವು ಖಾಸಗಿ ಕಂಪನಿಗಳ ನಡುವಿನ 5 ದಶಕಗಳ ಕಾನೂನು ಸಮರ ಅಂತ್ಯಗೊಂಡಿದೆ. ಕಲ್ಕತ್ತ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ಕಂಪನಿಯು 'ಸುಪ್ರೀಂ' ಮೆಟ್ಟಿಲೇರಿತ್ತು. ಷೇರು ಮೌಲ್ಯ ₹640 ಎಂದು ನಿರ್ಧರಿಸಿದ್ದನ್ನು ಹೈಕೋರ್ಟ್ ಮಾನ್ಯ ಮಾಡಿತ್ತು. ಅಲ್ಲದೆ, ವಾರ್ಷಿಕ ಶೇ 5ರ ಸರಳ ಬಡ್ಡಿ ಲೆಕ್ಕದಲ್ಲಿ ಹಣ ಪಾವತಿಸಬೇಕು ಎಂದು ಹೇಳಿತ್ತು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ: ಪಿಬಿ/5054ಜಿಮುರ.ಸು/ಅಧಿಸೂಚನೆ: 2024–25/3173 ದಿನಾಂಕ: 28.03.2025
ಇ–ಟೆಂಡರ್ ಅಧಿಸೂಚನೆ IFT-KW-4 ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)
ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಒಟ್ಟು 4 ಕಾಮಗಾರಿಗಳು
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 15–04–2025 (16.00 ಗಂಟೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 16–04–2025 (16.00 ಗಂಟೆವರೆಗೆ) (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17–04–2025 (16.30 ಗಂಟೆವರೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 19–04–2025 (16.00 ಗಂಟೆವರೆಗೆ)
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ, ಲೋಕೋಪಯೋಗಿ ಇಲಾಖೆ ವಿಭಾಗ, ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/ADK/KSMCA/02/25-26 dt.01.04.2025

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್ ನಿಲ್ದಾಣದ ಹತ್ತಿರ, ಬೈಯಪ್ಪನಹಳ್ಳಿ, ಬೆಂಗಳೂರು - 560 038. ದೂರವಾಣಿ: 080-25191039
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಬಿಡ್ ಸಂ.: ಬಿಎಂಆರ್‌ಸಿಎಲ್/2024–25/ಬಿಡಿ/ವರ್ಕ್_ಇಂಡೆಂಟ್86 ದಿನಾಂಕ: 01.04.2025
ಟೆಂಡರ್ ಪ್ರಕಟಣೆ
ಬಿಎಂಆರ್‌ಸಿಎಲ್ ಇವರು "ಯುಜಿ–1 ವಿಭಾಗದ ಸುರಂಗಮಾರ್ಗದ ಭಾಗವೂ ಸೇರಿದಂತೆ ಚಿಕ್ಕಪೇಟೆ(ಸಿಕೆಪಿಇ) ಮತ್ತು ಕೃಷ್ಣ ರಾಜೇಂದ್ರ ಮಾರುಕಟ್ಟೆ (ಕೆಆರ್‌ಎಂಟಿ) ನೆಲಮಾಳಿಗೆ ಮೆಟ್ರೋ ನಿಲ್ದಾಣಗಳಲ್ಲಿ ಜಲ ನಿರೋಧಕ" ಕಾಮಗಾರಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಅಂದಾಜು ವೆಚ್ಚ: ರೂ.71.05 ಲಕ್ಷಗಳು. ಟೆಂಡರ್ ಭದ್ರತಾ ಮೊತ್ತ: ರೂ. 1,42,106/–. ಕಾಮಗಾರಿ ವಿವರಗಳನ್ನು ಖರೀದಿ ವೆಬ್‌ಸೈಟ್‌ನಿಂದ ಪಡೆಯಬಹುದು. ಟೆಂಡರ್ ದಸ್ತಾವೇಜುಗಳನ್ನು ಪಡೆದು ದಿನಾಂಕ: 02.05.2025, 15.00 ಗಂಟೆ ಅಥವಾ ಅದಕ್ಕೂ ಮೊದಲು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಅಥವಾ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಓ ಮತ್ತು ಎಂ)

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, ನೆಲಮಹಡಿ, ಬಿ.ಎಂ.ಟಿ.ಸಿ, ಟಿ.ಟಿ.ಎಂ.ಸಿ ಬಸ್ ನಿಲ್ದಾಣ, ಯಶವಂತಪುರ ವೃತ್ತ, ಬೆಂಗಳೂರು–560022.
ದೂರವಾಣಿ: 080–43344334 ಫ್ಯಾಕ್ಸ್: (080) 43344376, ವೆಬ್‌ಸೈಟ್: www.kstdc.co
ಸಂ: ಕೆಎಸ್‌ಟಿಡಿಸಿ/02/ಮಾರುಕಟ್ಟೆ/2018–19/01/2025–26 ದಿನಾಂಕ: 01.04.2025
ಅಧಿಸೂಚನೆ
ಕೆ.ಎಸ್.ಟಿ.ಡಿ.ಸಿ ಪ್ರವಾಸಗಳಿಗೆ ನಿಗದಿತ ದರಗಳಲ್ಲಿ ಸಾರಿಗೆ ಸೇವೆಯನ್ನು ಒದಗಿಸಲು ಟ್ರಾವೆಲ್ ಏಜೆನ್ಸಿಗಳನ್ನು ಎಂಪಾನೆಲ್ ಮಾಡಿಕೊಳ್ಳುವ ಕುರಿತು.
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತವು (KSTDC) ರಾಜ್ಯಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಹಾಗೂ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಆತಿಥ್ಯ ಹಾಗೂ ಸಾರಿಗೆ ಸೇವೆಗಳನ್ನು ಒದಗಿಸುವ ಸಲುವಾಗಿ, ಟ್ರಾವೆಲ್ ಏಜೆನ್ಸಿಗಳನ್ನು ಎಂಪಾನೆಲ್ ಮಾಡಿಕೊಳ್ಳಲು ಉದ್ದೇಶಿದ್ದು, ಆಸಕ್ತ ಟ್ರಾವೆಲ್ ಏಜೆನ್ಸಿಗಳಿಂದ ಅರ್ಜಿ ಆಹ್ವಾನಿಸುತ್ತಿದೆ.
ಅರ್ಜಿ ನಮೂನೆ ಹಾಗೂ ವಿವರವಾದ ದಾಖಲೆಗಳನ್ನು ನಿಗಮದ ವೆಬ್‌ಸೈಟ್ https://www.kstdc.co/ ನಲ್ಲಿ ಅಧಿಸೂಚನೆಗಳ ವಿಭಾಗದ ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ದಿನಾಂಕ: 02.04.2025 ರಿಂದ 16.04.2025 ರವರೆಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 080–43344344 ನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕ.ರಾ.ಪ್ರ.ಅ.ನಿ.ನಿಯಮಿತ.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು – 560023
ದೂರವಾಣಿ ಸಂಖ್ಯೆ: 080–23113584 email id: pdrch-hfws@karnataka.gov.in
Notification No. DD/NCD/48/2023-24(E-1270286) Date: 01.04.2025
IND No. NHM/2024-25/IND0028/CALL-2
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ
"TENDER FOR PROCUREMENT AND SUPPLY OF SPIROMETER UNDER 15th FINANCE COMMISSION, NATIONAL HEALTH MISSION (NCD)"
ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ "Supply & Installation of Spirometer Equipment for Karnataka State" ಗಳನ್ನು ಸರಬರಾಜು ಮಾಡಲು ಮೂಲ ತಯಾರಕರು/ ಅಧಿಕೃತ ಸರಬರಾಜುದಾರರು ಅಗತ್ಯದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
ಅರ್ಹತೆಯುಳ್ಳ ಟೆಂಡರ್ ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್ ಗಳನ್ನು ದಿನಾಂಕ 01.04.2025 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯುಮೆಂಟ್ ಗಳನ್ನು ದಿನಾಂಕ: 09.04.2025 ಅಪರಾಹ್ನ 5.30 ರ ಒಳಗಾಗಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು, (ಆರ್.ಸಿ.ಹೆಚ್) ರವರ ಕಛೇರಿ ಸಮಯ ಪೂರ್ವಾಹ್ನ 11.00 ರಿಂದ ಅಪರಾಹ್ನ 4.00 ರ ಒಳಗಾಗಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
DIPR/CP/04/Zen/2025-26

ಕರ್ನಾಟಕ ಸರ್ಕಾರ
ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
ಟೆಂಡರ್ ಅಧಿಸೂಚನೆ ಸಂಖ್ಯೆ:ಆ.ಪು.ಸಂ.ಪ/ಸಂ.ವಿ/ಟೆಂ–18:2024–25 ದಿನಾಂಕ: 27.03.2025
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಕೆಡಬ್ಲ್ಯೂ–4 ರೀತ್ಯಾ ಪುರಾತನ ಸ್ಮಾರಕಗಳ/ದೇವಾಲಯದ ಸಂರಕ್ಷಣೆ 01 ಕಾಮಗಾರಿ (DAMH/2024-25:OW/ WORK_INDENT-124 (Call-2) ಟೆಂಡರ್‌ಗಿಟ್ಟ ಮೊತ್ತ ರೂ.136.00 ಲಕ್ಷಗಳು. ಈ ಕಾಮಗಾರಿಗೆ ಐಟಂವಾರು ಟೆಂಡರ್‌ನ್ನು ಸ್ಟ್ಯಾಂಡರ್ಡ್ ಟೆಂಡರ್ ಡ್ಯಾಕುಮೆಂಟ್‌ನಲ್ಲಿನ ಷರತ್ತಿಗಳಿಗೆ ಅನುಗುಣವಾಗಿ ಕರೆಯಲಾಗಿದ್ದು, ಇ–ಪ್ರೋಕ್ಯೂರ್‌ಮೆಂಟ್ ಮೂಲಕ ನಿಗಧಿಪಡಿಸಿರುವ ವರ್ಗಗಳ ಅನುಸಾರ ಈ ಕಾಮಗಾರಿಗಳ ಟೆಂಡರ್‌ಗೆ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಡಾಕ್ಯೂಮೆಂಟ್ ಗಳನ್ನು ಇ–ಪೋರ್ಟಾಲ್‌ನಲ್ಲಿ ದಿ: 28.03.2025 ರಿಂದ ಪಡೆಯಬಹುದು. ಕಾಮಗಾರಿ ಟೆಂಡರ್‌ನ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 05.04.2025, 17.00 ಗಂಟೆ. ಕಾಮಗಾರಿಯ ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 12.04.2025, 16.00 ಗಂಟೆ. ಕಾಮಗಾರಿಯ ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 16.04.2025, 16.30 ಗಂಟೆ. ಕಾಮಗಾರಿ ಟೆಂಡರ್ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ:17.04.2025, 11.00 ಗಂಟೆ. ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: 04.04.2025, 11.00 ಗಂಟೆ.
ಸಹಿ/– ಆಯುಕ್ತರು, ಪುರಾತತ್ವ
DIPR-DD-MYS/07/KSMCA-001/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃ.ನೀ.ಕಾ, ಮಹದೇವಪುರ ವಲಯ, ಬೃಬೆಂಮಪಾಲಿಕೆ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560 011.
ಸಂಖ್ಯೆ:ಕಾಪಾಅ/ಬೃನೀಕಾ/ಮ.ಪುರ/ತಿದ್ದುಪಡಿ–5–2/2024–25 ದಿನಾಂಕ:01.04.2025
ತಿದ್ದುಪಡಿ–5–2 (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಉಲ್ಲೇಖ: ಈ ಕಚೇರಿ ಪ್ರಕಟಣೆ ಸಂಖ್ಯೆ: ಕಾಪಾಅ/ಬೃ.ನೀ.ಕಾ/ಮಪುರ/ಟೆಂಡರ್/05 /2024–25, ದಿನಾಂಕ: 03.03.2025
ಮೇಲ್ಕಂಡ ಉಲ್ಲೇಖಿತ ಟೆಂಡರಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡಂತೆ ಓದಿಕೊಳ್ಳುವುದು.
ಹೊಸ ಟೆಂಡರ್ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತದೆ.

ಟೆಂಡರ್ ವೇಳಾಪಟ್ಟಿ	ಮಾರ್ಪಾಡಾದ ದಿನಾಂಕಗಳು
(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	05.03.2025
(2) ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	15.04.2025ರ ಸಂಜೆ 4:00 ಗಂಟೆಗೆ
(3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	16.04.2025ರ ಸಂಜೆ 4:30 ಗಂಟೆಗೆ
(4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	18.04.2025

ಪ್ರಕಟಣೆಯ ಇತರೆ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಮೂಲದಂತೆಯೇ ಇರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಬೃ.ನೀ.ಕಾ, ಮಹದೇವಪುರ ವಲಯ

ಆರ್‌ಸಿಬಿ–ಗುಜರಾತ್ ಹಣಾಹಣಿ ಇಂದು: ರಜತ್ ಬಳಗಕ್ಕೆ 'ಹ್ಯಾಟ್ರಿಕ್' ಜಯದ ಛಲ: ಗಿಲ್ ಪಡೆಗೆ ಗೆಲುವಿನ ಕನಸು

ವಿರಾಟ್–ಸಿರಾಜ್ ಮುಖಾಮುಖಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಮಂಗಳವಾರ ಸಂಜೆ ಪಶ್ಚಿಮದತ್ತ ಸೂರ್ಯ ಸರಿಯುತ್ತಿದ್ದ. ಆದರೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಕು ಕವಿಯದಂತೆ ಬೃಹತ್ ದೀಪಸ್ತಂಭಗಳು ಬೆಳಕು ಚೆಲ್ಲುತ್ತಿದ್ದವು ಇದೇ ಹೊತ್ತಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ 'ಬ್ಯಾಟಿಂಗ್ ಚಾಂಪಿಯನ್' ವಿರಾಟ್ ಕೊಹ್ಲಿ ಮತ್ತು ಈ ವರ್ಷ ಗುಜರಾತ್ ಟೈಟನ್ಸ್‌ನಲ್ಲಿ ಆಡುತ್ತಿರುವ 'ಹೈದರಾಬಾದ್ ಎಕ್ಸ್‌ಪ್ರೆಸ್' ಮೊಹಮ್ಮದ್ ಸಿರಾಜ್ ಅವರಿಬ್ಬರ ಸ್ನೇಹಮಿಲನವು ಮಿಂಚಿನ ಸಂಚಲನ ಮೂಡಿಸಿತು.

ಬುಧವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಸಿರಾಜ್ ಮಿಯಾ ಇದೇ ಮೊದಲ ಬಾರಿಗೆ ತಮ್ಮ ನೆಚ್ಚಿನ 'ವಿರಾಟ್ ಭಾಯ್'ಗೆ ಬೌಲಿಂಗ್ ಮಾಡಲಿದ್ದಾರೆ. 2018ರಿಂದ 2024ರವರೆಗೆ ಸಿರಾಜ್ ಅವರು ವಿರಾಟ್ ಅವರೊಂದಿಗೆ ಆರ್‌ಸಿಬಿ ಡ್ರೆಸಿಂಗ್ ರೂಮ್ ಹಂಚಿಕೊಂಡಿದ್ದರು. ಈ ಬಾರಿಯ ಐಪಿಎಲ್‌ಗಾಗಿ ನಡೆದ ಮೆಗಾ ಹರಾಜಿಗೂ ಮುನ್ನ ಆರ್‌ಸಿಬಿ ತಂಡವು ತಮ್ಮನ್ನು ಬಿಡುಗಡೆ ಮಾಡಿದಾಗ ಸಿರಾಜ್ ಭಾವುಕರಾಗಿದ್ದರು. ಈಗ ತಂಡ ಬದಲಾದರೂ ವಿರಾಟ್ ಮತ್ತು ಆರ್‌ಸಿಬಿ ಅಭಿಮಾನಿಗಳೊಂದಿಗಿನ ಬಾಂಧವ್ಯ ಸಿರಾಜ್ ಅವರಲ್ಲಿ ಕಡಿಮೆಯಾಗಿಲ್ಲ.

2017ರಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿ ಮೊದಲ ಸಲ ಆಡಿದ್ದ ಸಿರಾಜ್ ಅವರಿಗೆ ಕೊಹ್ಲಿಯನ್ನು ಎದುರಿಸುವ ಅವಕಾಶ ಸಿಕ್ಕಿರಲಿಲ್ಲ. ಈಗ ಎದುರಾಳಿಯಾಗಿ ಆಡಲು ಸಜ್ಜಾಗಿದ್ದಾರೆ. ಸಾಮಾಜಿಕ ಜಾಲತಾಣಗಳ ತುಂಬ ಈಗ ಇವರಿಬ್ಬರ ಕುರಿತ ಪೋಸ್ಟ್‌ಗಳೇ ಹರಿದಾಡುತ್ತಿವೆ. ವಿರಾಟ್ ಅವರು ಸಿರಾಜ್ ಬೌಲಿಂಗ್‌ನಲ್ಲಿ ಸಿಕ್ಸರ್ ಎತ್ತಬಹುದೇ ಅಥವಾ ಔಟಾಗುವರೇ ಎಂಬ ಕೌತುಕ ಮನೆ ಮಾಡಿದೆ.

ಕರ್ನಾಟಕದ ಕ್ರಿಕೆಟ್ ಅಭಿಮಾನಿಗಳಿಗೆ ಇನ್ನೊಂದು ಕುತೂಹಲವೂ ಇಲ್ಲಿದೆ. ರಾಜ್ಯ ತಂಡದಲ್ಲಿ ಜೊತೆಯಾಗಿ ಆಡುವ ಬ್ಯಾಟರ್ ದೇವದತ್ತ ಪಡಿಕ್ಕಲ್ ಮತ್ತು ವೇಗಿ ಪ್ರಸಿದ್ಧಕೃಷ್ಣ ಕೂಡ ಮುಖಾಮುಖಿಯಾಗಲಿದ್ದಾರೆ. ಗುಜರಾತ್ ಟೈಟನ್ಸ್ ತಂಡವು ಈಚೆಗೆ ಮುಂಬೈ ಇಂಡಿಯನ್ಸ್ ಎದುರು ಜಯಿಸುವಲ್ಲಿ ಪ್ರಸಿದ್ಧ ಮಹತ್ವದ ಪಾತ್ರ ವಹಿಸಿದ್ದರು. ಪಂದ್ಯಶ್ರೇಷ್ಠ ಗೌರವಕ್ಕೂ ಪಾತ್ರರಾಗಿದ್ದರು. ಕಳೆದೆರಡೂ ಪಂದ್ಯಗಳಲ್ಲಿ ಪಡಿಕ್ಕಲ್ (10 ಮತ್ತು 27) ತಮ್ಮ ಸಂಪೂರ್ಣ ಸಾಮರ್ಥ್ಯ ಮೆರೆಯುವಲ್ಲಿ ಯಶಸ್ವಿಯಾಗಿಲ್ಲ. ತವರಿನಂಗಳದಲ್ಲಿ ಅವರು ಮಿಂಚುವ ನಿರೀಕ್ಷೆ ಇದೆ.

ಈ ಎಲ್ಲ ಸಂಗತಿಗಳ ಜೊತೆಗೆ ಕ್ರೀಡಾಂಗಣಕ್ಕೆ ಲಗ್ಗೆ ಹಾಕಲು ಆರ್‌ಸಿಬಿ ಅಭಿಮಾನಿಗಳಿಗೆ ಇನ್ನೂ ಕೆಲವು ಕಾರಣಗಳಿವೆ. ಅದರಲ್ಲೊಂದು; ಈ ಆವೃತ್ತಿಯಲ್ಲಿ ಆರ್‌ಸಿಬಿಯು ತನ್ನ ತವರಿನಂಗಳದಲ್ಲಿ ಆಡಲಿರುವ ಮೊದಲ ಪಂದ್ಯ ಇದಾಗಿದೆ. ಈಗಾಗಲೇ ಆಡಿರುವ ಎರಡೂ ಪಂದ್ಯಗಳಲ್ಲಿ ಭರ್ಜರಿ ಜಯ ಗಳಿಸಿದೆ. ಈಡನ್ ಗಾರ್ಡನ್‌ನಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ 'ಹಾಲಿ ಚಾಂಪಿಯನ್' ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಚೆಪಾಕ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ಗೆದ್ದು ಬಂದಿದೆ. ಅದರಲ್ಲೂ ಚೆನ್ನೈನಲ್ಲಿ 17 ವರ್ಷಗಳ ನಂತರ ಜಯ ದಾಖಲಿಸಿರುವುದು ತಂಡದಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ.

ಇನ್ನೊಂದೆಡೆ ರಜತ್ ಪಾಟೀದಾರ್ ಅವರು ನಾಯಕತ್ವ ವಹಿಸಿಕೊಂಡ ನಂತರ ತಂಡವು ಇಲ್ಲಿ ಆಡುತ್ತಿರುವ ಪ್ರಥಮ ಪಂದ್ಯವೂ ಇದಾಗಿದೆ. ನಾಯಕತ್ವದ ಜೊತೆಗೆ ಬ್ಯಾಟಿಂಗ್‌ನಲ್ಲಿಯೂ (51 ಮತ್ತು 34 ರನ್) ಸೈ ಎನಿಸಿಕೊಂಡಿದ್ದಾರೆ. ಆರಂಭಿಕ ಬ್ಯಾಟರ್ ಫಿಲ್ ಸಾಲ್ಟ್, ಮಧ್ಯಮ ಕ್ರಮಾಂಕದಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್, ಜಿತೇಶ್ ಶರ್ಮಾ ಮತ್ತು ಟಿಮ್ ಡೇವಿಡ್ ಉತ್ತಮ ಲಯದಲ್ಲಿದ್ದಾರೆ.

ಬೌಲಿಂಗ್ ವಿಭಾಗವೂ ತಕ್ಕಮಟ್ಟಿಗೆ ಸಮತೋಲನಗೊಂಡಿದೆ.

ಸ್ಪಿನ್ನರ್ ಕೃಣಾಲ್ ಪಾಂಡ್ಯ, ಲೆಗ್‌ಬ್ರೇಕ್ ಬೌಲರ್ ಸುಯಶ್ ಶರ್ಮಾ, ವೇಗಿ ಜೋಷ್ ಹ್ಯಾಜಲ್‌ವುಡ್, ಯಶ್ ದಯಾಳ್ ಮತ್ತು ಭುವನೇಶ್ವರ್ ಕುಮಾರ್ ಪರಿಣಾಮಕಾರಿಯಾಗಿದ್ದಾರೆ.

ಗುಜರಾತ್ ತಂಡದ ನಾಯಕ ಶುಭಮನ್ ಗಿಲ್, ಜೋಸ್ ಬಟ್ಲರ್, ಸಾಯಿ ಸುದರ್ಶನ್, ರುದರ್‌ಫೋರ್ಡ್ ಮತ್ತು ಶಾರೂಕ್ ಖಾನ್ ರನ್ ಹೊಳೆ ಹರಿಸುವ ಸಮರ್ಥರು. ಅನುಭವಿ ಬೌಲರ್‌ಗಳ ಬಲವೂ ತಂಡಕ್ಕೆ ಇದೆ. ಅದೇನೇ ಇರಲಿ; ಪಾಯಿಂಟ್ ಪಟ್ಟಿಯಲ್ಲಿ ಆರ್‌ಸಿಬಿ ತಂಡವು ಅಗ್ರಸ್ಥಾನವನ್ನು ಕಾಪಾಡಿಕೊಳ್ಳಲು ತವರಿನಂಗಳದಲ್ಲಿ ಶುಭಾರಂಭ ಮಾಡುವ ಭರವಸೆಯಲ್ಲಿ ಅಭಿಮಾನಿಗಳ ಬಳಗ ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಹಿಂದಿನ ಐದು ಪಂದ್ಯಗಳು

ವರ್ಷ	ವಿಜೇತ	ಫಲಿತಾಂಶ
2024	ಆರ್‌ಸಿಬಿ	9 ವಿಕೆಟ್
2024	ಆರ್‌ಸಿಬಿ	4 ವಿಕೆಟ್
2023	ಗುಜರಾತ್	6 ವಿಕೆಟ್
2022	ಗುಜರಾತ್	6 ವಿಕೆಟ್
2022	ಆರ್‌ಸಿಬಿ	8 ವಿಕೆಟ್

ಬಲಾಬಲ

ಪಂದ್ಯ 5
ಆರ್‌ಸಿಬಿ ಜಯ 3
ಗುಜರಾತ್ 2

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ಆರ್‌ಸಿಬಿ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ಗುಜರಾತ್ ತಂಡದ ಮೊಹಮ್ಮದ್ ಸಿರಾಜ್ ಭೇಟಿಯ ಕ್ಷಣ ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಚಿನ್ನಸ್ವಾಮಿಯಲ್ಲಿ ರನ್ ದಾಖಲೆ

- ಗರಿಷ್ಠ ಮೊತ್ತ: 3ಕ್ಕೆ 287–ಸನ್‌ರೈಸರ್ಸ್ ಹೈದರಾಬಾದ್ (2024–ಆರ್‌ಸಿಬಿ ವಿರುದ್ಧ)
- ಕನಿಷ್ಠ ಮೊತ್ತ;82 (2008–ಕೆಕೆಆರ್ ವಿರುದ್ಧ)
- ಹೆಚ್ಚು ರನ್ ಸ್ಕೋರರ್: ವಿರಾಟ್ ಕೊಹ್ಲಿ (3040 ; 86 ಇನಿಂಗ್ಸ್)
- ಹೆಚ್ಚು ವಿಕೆಟ್ ಗಳಿಕೆ: ಯಜುವೇಂದ್ರ ಚಾಹಲ್ (52 ವಿಕೆಟ್; 41ಇನಿಂಗ್ಸ್)
- ವೈಯಕ್ತಿಕ ಶ್ರೇಷ್ಠ ಸ್ಕೋರ್: ಕ್ರಿಸ್ ಗೇಲ್ (ಆರ್‌ಸಿಬಿ; ಅಜೇಯ 175, ಪುಣೆ ವಾರಿಯರ್ಸ್ ಎದುರು, 2013)
- ವೈಯಕ್ತಿಕ ಶ್ರೇಷ್ಠ ಬೌಲಿಂಗ್: ಸ್ಯಾಮುಯೆಲ್ ಬದ್ರಿ (ಆರ್‌ಸಿಬಿ, 9ಕ್ಕೆ4, ಮುಂಬೈ ಇಂಡಿಯನ್ಸ್ ವಿರುದ್ಧ, 2017)

ಚಿನ್ನಸ್ವಾಮಿ ಅಂಗಳದಲ್ಲಿ ಆರ್‌ಸಿಬಿ



ಅರ್ಧ ಶತಕ ಬಾರಿಸಿದ ಪ್ರಭಸಿಮ್ರನ್ ಸಿಂಗ್

ಕಿಂಗ್ಸ್‌ಗೆ ಅಧಿಕಾರಯುತ ಗೆಲುವು

ಲಖನೌ (ಪಿಟಿಐ): ಆರಂಭ ಆಟಗಾರ ಪ್ರಭಸಿಮ್ರನ್ ಸಿಂಗ್ (69, 34ಎ, 4x9, 6x3) ಮತ್ತು ನಾಯಕ ಶ್ರೇಯಸ್ ಅಯ್ಯರ್ (ಔಟಾಗದೇ 52, 30 ಎಸೆತ, 4x3, 6x4) ಅವರ ಅರ್ಧ ಶತಕಗಳ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡ ಐಪಿಎಲ್ ಪಂದ್ಯದಲ್ಲಿ ಮಂಗಳವಾರ ಲಖನೌ ಸೂಪರ್ ಕಿಂಗ್ಸ್ ತಂಡದ ಮೇಲೆ ಎಂಟು ವಿಕೆಟ್‌ಗಳ ಅಧಿಕಾರಯುತ ಗೆಲುವು ಪಡೆಯಿತು.

ಏಕನಾ ಕ್ರೀಡಾಂಗಣದಲ್ಲಿ ಬ್ಯಾಟ್ ಮಾಡಲು ಇಳಿಸಲ್ಪಟ್ಟ ಲಖನೌ ಸೂಪರ್ ಕಿಂಗ್ಸ್ ತಂಡವನ್ನು ಪಂಜಾಬ್ ಬೌಲರ್‌ಗಳು ಶಿಸ್ತುಬದ್ಧ ಬೌಲಿಂಗ್‌ನಿಂದ 7 ವಿಕೆಟ್‌ಗೆ 171 ರನ್‌ಗಳಿಗೆ ಕಟ್ಟಿ ಹಾಕಿದರು. ನಂತರ ಬ್ಯಾಟರ್‌ಗಳು ಬಿರುಸಿನ ಆಟವಾಡಿ ಇನ್ನೂ 22 ಎಸೆತಗಳು ಇರುವಂತೆ 2 ವಿಕೆಟ್‌ಗೆ 177 ರನ್ ಹೊಡೆದು ಸತತ ಎರಡನೇ ಜಯ ಪಡೆಯಿತು.

ಪ್ರಿಯಾನ್ಶ್ ಆರ್ಯ (8) ಅವರು ಬೇಗ ನಿರ್ಗಮಿಸಿದರೂ ಇನ್ನೊಂದು ಕಡೆ ಅಬ್ಬರಿಸುತ್ತಿದ್ದ ಪ್ರಭಸಿಮ್ರನ್ ಅವರು ನಾಯಕ ಅಯ್ಯರ್ ಅವರೊಡನೆ 43 ಎಸೆತಗಳಲ್ಲಿ 84 ರನ್ ಬಾರಿಸಿ ತಂಡವನ್ನು ಗೆಲುವಿನ ದಾರಿಯಲ್ಲಿ ಮುನ್ನಡೆಸಿದರು. ನೇಹಲ್ ವಧೇರಾ (43, 25ಎ, 4x3, 6x4) ಅವರೂ ಮಿಂಚಿನ ಆಟವಾಡಿದ್ದರಿಂದ ತಂಡ ಬೇಗನೇ ಗುರಿತಲುಪಿತು.

ಇದಕ್ಕೆ ಮೊದಲು, ಪಂಜಾಬ್ ಕಿಂಗ್ಸ್ ತಂಡದ ಬೌಲರ್‌ಗಳು ಆರಂಭದಿಂದಲೇ ಪರಿಣಾಮಕಾರಿ ದಾಳಿ ಸಂಘಟಿಸಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು. ಉತ್ತಮ ಲಯದಲ್ಲಿರುವ ನಿಕೋಲಸ್ ಪೂರನ್ (44, 30 ಎಸೆತ, 4x5, 6x2) ಮತ್ತು ಆಯುಷ್ ಬಡೋನಿ (41, 33 ಎಸೆತ, 4x1, 6x3) ಸ್ವಲ್ಪ ಪ್ರತಿರೋಧ ತೋರಿದರೂ ಅಂತಿಮವಾಗಿ ಮೊತ್ತ ನಿರೀಕ್ಷೆಗಿಂತ ಕಡಿಮೆಯಾಯಿತು. ಐಪಿಎಲ್ ಮೆಗಾ ಹರಾಜಿನಲ್ಲಿ ಅತಿ ಹೆಚ್ಚು ಮೌಲ್ಯ ಪಡೆದಿದ್ದ ಲಖನೌ ತಂಡದ ನಾಯಕ ರಿಷಭ್ ಪಂತ್ (2) ಅವರು ಸತತ ಮೂರನೇ ಬಾರಿ ವಿಫಲರಾದರು.

ಪೂರನ್ ಮತ್ತು ಬಡೋನಿ ಅವರು ಆಕ್ರಮಣಕಾರಿಯಾಗಿದ್ದು ನಾಲ್ಕನೇ ವಿಕೆಟ್‌ಗೆ 54 ರನ್ ಸೇರಿಸಿ ಚೇತರಿಕೆ ಒದಗಿಸಿದರು. ಕೊನೆಯಲ್ಲಿ ಮಿಲ್ಲರ್ (19, 18ಎ) ಮತ್ತು ಅಬ್ದುಲ್ ಸಮದ್ (27, 12ಎ, 4X2, 6X2) ಅವರ ಆಟದಿಂದ 170 ರನ್‌ಗಳ ಗಡಿ ದಾಟಲು ಸಾಧ್ಯವಾಯಿತು.

ಸ್ಕೋರುಗಳು: 20 ಓವರುಗಳಲ್ಲಿ 7 ವಿಕೆಟ್‌ಗೆ 171 (ಏಡನ್ ಮರ್ಕರಂ 28, ಪೂರನ್ 44, ಬಡೋನಿ 41, ಅಬ್ದುಲ್ ಸಮದ್ 27; ಅರ್ಷದೀಪ್ 43ಕ್ಕೆ3); ಲಖನೌ ಸೂಪರ್ ಜೈಂಟ್ಸ್: 16.2 ಓವರುಗಳಲ್ಲಿ 2ಕ್ಕೆ 177 (ಪ್ರಭಸಿಮ್ರನ್ ಸಿಂಗ್ 69, ಶ್ರೇಯಸ್ ಅಯ್ಯರ್ ಔಟಾಗದೇ 52, ನೇಹಲ್ ವಧೇರಾ ಔಟಾಗದೇ 43; ದಿಗ್ವೇಶ್ ರಾಥಿ 30ಕ್ಕೆ2). ಪಂದ್ಯದ ಆಟಗಾರ: ಪ್ರಭಸಿಮ್ರನ್ ಸಿಂಗ್

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಆರ್‌ಸಿಬಿ	2	2	0	4	2.266
2	ಪಿಬಿಕೆಎಸ್	2	2	0	4	1.48
3	ಡಿಸಿ	2	2	0	4	1.320
4	ಜಿಟಿ	2	1	1	2	0.625
5	ಎಂಐ	3	1	2	2	0.309
6	ಎಲ್‌ಎಸ್‌ಜಿ	3	1	2	2	-0.150
7	ಸಿಎಸ್‌ಕೆ	3	1	2	2	-0.771
8	ಎಸ್‌ಆರ್‌ಎಚ್	3	1	2	2	-0.871
9	ಆರ್‌ಆರ್	3	1	2	2	-1.112
10	ಕೆಕೆಆರ್	3	1	2	2	-1.428

ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 189 ರನ್

ನೂರ್ ಅಹ್ಮದ್ (ಸಿಎಸ್‌ಕೆ) 9 ವಿಕೆಟ್

ಬಾಕ್ಸಿಂಗ್: ಲಕ್ಷ್ಯ ಚಾಹರ್‌ಗೆ ಸೋಲು

ನವದೆಹಲಿ (ಪಿಟಿಐ): ಲಕ್ಷ್ಯ ಚಾಹರ್ ಅವರು ಬ್ರೆಜಿಲ್‌ನ ಫಾಜ್ ದುಗ್ವಾಸುನಲ್ಲಿ ನಡೆಯುತ್ತಿರುವ ಮೊದಲ ವಿಶ್ವ ಬಾಕ್ಸಿಂಗ್ ಕಪ್‌ನ 80 ಕೆ.ಜಿ ವಿಭಾಗದಲ್ಲಿ ಸ್ಥಳೀಯ ಬಾಕ್ಸರ್ ವಂಡರ್ಲೆ ಪೆರೀರಾ ಅವರಿಗೆ ಮಣಿಯುವುದರೊಡನೆ ಭಾರತ ನಿರಾಶಾದಾಯಕ ಆರಂಭ ಮಾಡಿತು.

ದೇಶದ ಹಾಲಿ ಲೈಟ್ ಹೆವಿವೇಟ್ ಚಾಂಪಿಯನ್ ಚಾಹರ್ ಅವರು ಸೋಮವಾರ ರಾತ್ರಿ ನಡೆದ ಸೆಣಸಾಟದಲ್ಲಿ 0–5 ರಿಂದ 2023ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ವಂಡರ್ಲೆ ಎದುರು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಸೋಲನುಭವಿಸಿದರು. ಬ್ರೆಜಿಲ್‌ನ ಬಾಕ್ಸರ್ ಗರಿಷ್ಠ 150ರಲ್ಲಿ 149 ಪಾಯಿಂಟ್ಸ್ ಪಡೆದರೆ, ಚಾಹರ್ 135 ಪಾಯಿಂಟ್ಸ್ ಗಳಿಸಿದರು.

20 ವರ್ಷ ವಯಸ್ಸಿನ ಜಾದುಮಣಿ ಸಿಂಗ್ ಮೆಂಡೆಂಗ್ಬಾಮ್ (50 ಕೆ.ಜಿ. ವಿಭಾಗ), ನಿಖಿಲ್ ದುಬೆ (75 ಕೆ.ಜಿ. ವಿಭಾಗ), ಜುಗ್ನೂ (85 ಕೆ.ಜಿ. ವಿಭಾಗ) ಅವರು ಎರಡನೇ ದಿನ ಕಣಕ್ಕಿಳಿಯಲಿರುವ ಭಾರತದ ಸ್ಪರ್ಧಿಗಳಾಗಿದ್ದಾರೆ. ಈ ಕೂಟ ಒಟ್ಟು ಆರು ದಿನ ನಿಗದಿಯಾಗಿದೆ.

ಅಂತರರಾಷ್ಟ್ರೀಯ ಒಲಿಂಪಿಕ್ ಸಂಸ್ಥೆಯಿಂದ, ಮಾನ್ಯತೆಯನ್ನು ಮರಳಿ ಪಡೆದ ನಂತರ ವರ್ಲ್ಡ್ ಬಾಕ್ಸಿಂಗ್ ನಡೆಸುತ್ತಿರುವ ಮೊದಲ ಪ್ರಮುಖ ಟೂರ್ನಿ ಇದಾಗಿದೆ.

ಅತಿ ಹೆಚ್ಚು ಪಂದ್ಯಗಳನ್ನಾಡಿದ ಭಾರತ ತಂಡದ ಆಟಗಾರ್ತಿ

ಅಂತರರಾಷ್ಟ್ರೀಯ ಹಾಕಿಗೆ ವಂದನಾ ವಿದಾಯ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಪರ ಅತಿ ಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿರುವ ಆಟಗಾರ್ತಿ ವಂದನಾ ಕಟಾರಿಯಾ ಅವರು 15 ವರ್ಷಗಳ ತಮ್ಮ ಸುದೀರ್ಘ ಹಾಕಿ ಬದುಕಿಗೆ ಮಂಗಳವಾರ ನಿವೃತ್ತಿ ಪ್ರಕಟಿಸಿದರು.

ಹಾಕಿ ಜೀವನದಲ್ಲಿ 'ಉತ್ತುಂಗದಲ್ಲಿರುವಾಗ' ಕೈಗೊಂಡ ಈ ನಿರ್ಧಾರ ನೋವು–ನಲಿವು ಎರಡನ್ನೂ ಒಳಗೊಂಡಿದೆ ಎಂದು 32 ವರ್ಷ ವಯಸ್ಸಿನ ಆಟಗಾರ್ತಿ ಹೇಳಿದ್ದಾರೆ. 320 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿರುವ ವಂದನಾ 158 ಗೋಲುಗಳನ್ನು ಗಳಿಸಿದ್ದಾರೆ. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ ಭಾರತ ತಂಡದಲ್ಲಿ ಅವರೂ ಆಡಿದ್ದರು.

'ಭಾರವಾದ ಹೃದಯದಿಂದ ಇಂದು ನಾನು ಅಂತರರಾಷ್ಟ್ರೀಯ ಹಾಕಿಗೆ ನಿವೃತ್ತಿ ಘೋಷಿಸುತ್ತಿದ್ದೇನೆ. ಈ ನಿರ್ಧಾರ ಸಿಹಿ– ಕಹಿ ಜೊತೆ ಸಬಲೀಕರಣದ ಭಾವವನ್ನೂ ಮೂಡಿಸಿದೆ' ಎಂದು ಕಟಾರಿಯಾ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ನಾನು ನಿವೃತ್ತಿ ಹೇಳಲು, ನನ್ನಲ್ಲಿರುವ ಆಟದ ಮಟ್ಟ ಕುಸಿದಿದೆ ಅಥವಾ ಬತ್ತಿಹೋಗಿದೆ ಎಂಬುದು ಕಾರಣ ವಲ್ಲ. ಆಟದ ಉತ್ತುಂಗದಲ್ಲಿರುವಾಗಲೇ ವಿದಾಯ ಹೇಳಬಯಸಿದ್ದೇನೆ. ಈಗಲೂ ನನ್ನಲ್ಲಿ ಸಾಕಷ್ಟು ಉತ್ತಮ ಆಟ ಉಳಿದಿದೆ' ಎಂದು ವಂದನಾ ಹೇಳಿದರು.

ಹರಿದ್ವಾರದ ರೋಷನಾಬಾದ್‌ನವರಾದ ವಂದನಾ 2009ರಲ್ಲಿ ರಾಷ್ಟ್ರೀಯ ಹಾಕಿ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಟೋಕಿಯೊ ಕ್ರೀಡೆಗಳಲ್ಲಿ ಹ್ಯಾಟ್ರಿಕ್ ಸಾಧಿಸಿದ ಭಾರತದ ಮೊದಲ ಮತ್ತು ಏಕೈಕ ಆಟಗಾರ್ತಿ ಅವರು.

'ಟೋಕಿಯೊ ಒಲಿಂಪಿಕ್ಸ್ ನೆನಪಾಗುವಾಗ ರೋಮಾಂಚನವಾಗುತ್ತದೆ. ಒಲಿಂಪಿಕ್ಸ್ ವಿಶೇಷವಾದುದು. ನನ್ನ ಜೀವನದಲ್ಲಿ ದಕ್ಷಿಣ ಆಫ್ರಿಕಾದ ಎದುರಿನ ಆ ಪಂದ್ಯ ಭಾವನಾತ್ಮಕವಾದುದು' ಎಂದು ಅವರು ಸ್ಮರಿಸಿದರು. ವಂದನಾ 2016ರ ರಿಯೊ ಒಲಿಂಪಿಕ್ಸ್‌ನಲ್ಲೂ ಆಡಿದ್ದರು. 2018ರ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದ, 2013 ಮತ್ತು 2018ರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಗೆದ್ದ ತಂಡದ ಭಾಗವಾಗಿದ್ದರು. 2022ರ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ, 2014 ಮತ್ತು 2022ರ ಏಷ್ಯನ್ ಗೇಮ್ಸ್‌ನಲ್ಲಿ, ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಕಂಚಿನ ಪದಕಗಳನ್ನು ಗೆದ್ದ ತಂಡದಲ್ಲೂ ಅವರು ಆಡಿದ್ದರು.ಫೆಬ್ರುವರಿಯಲ್ಲಿ ಕೊನೆಯ ಬಾರಿಗೆ ಅವರು (ಪ್ರೊ ಲೀಗ್‌ನಲ್ಲಿ) ಭಾರತ ತಂಡವನ್ನು ಪ್ರತಿನಿಧಿಸಿದ್ದರು.

ಯುಟಿಟಿ: ಮುಂದಿನ ಆವೃತ್ತಿಗೆ ಕೋಲ್ಕತ್ತದ ತಂಡ

ನವದೆಹಲಿ (ಪಿಟಿಐ): ಅಲ್ಟಿಮೇಟ್ ಟೇಬಲ್ ಟೆನಿಸ್ (ಯುಟಿಟಿ), ಮುಂದಿನ ಋತುವಿನಿಂದ ಕೋಲ್ಕತ್ತ ಥಂಡರ್‌ಬ್ಲೇಡ್ಸ್ ಎಂಬ ಹೊಸ ತಂಡವನ್ನು ಸೇರ್ಪಡೆಗೊಳಿಸಿದೆ. ಪುಣೇರಿ ಪಲ್ಟನ್ ಟೂರ್ನಿಯಿಂದ ಹೊರನಡೆಯುವುದಾಗಿ ತಿಳಿಸಿದೆ.

ಪುಣೇರಿ ಪಲ್ಟನ್ ನಿರ್ಗಮನದ ಬೆನ್ನಲ್ಲೇ, ಪುನೀತ್ ಬಾಲನ್ ಸಮೂಹವು ತನ್ನ ಒಡೆತನದ 'ಬೆಂಗಳೂರು ಸ್ಮಾಶರ್ಸ್' ತಂಡದ ಹೆಸರನ್ನು 'ಪುಣೆ ಜಾಗ್ವಾರ್ಸ್' ಎಂದು ಬದಲಾಯಿಸಿದೆ.ಟೂರ್ನಿಯ ಆರನೇ ಆವೃತ್ತಿಯಲ್ಲೂ ಎಂಟು ತಂಡಗಳು ಇರಲಿವೆ.

ಆಸ್ಟ್ರೇಲಿಯಾ ಕೇಂದ್ರೀಯ ಗುತ್ತಿಗೆಗೆ ಕೊನ್‌ಸ್ಟಾಸ್

ಸಿಡ್ನಿ (ಎಎಫ್‌ಪಿ): ಸ್ಫೋಟಕ ಹೊಡೆತಗಳ ಆರಂಭ ಆಟಗಾರ ಸ್ಯಾಮ್ ಕೊನ್‌ಸ್ಟಾಸ್ ಅವರು ಮೊದಲ ಬಾರಿ 2025–26ನೇ ಸಾಲಿಗೆ ಆಸ್ಟ್ರೇಲಿಯಾದ ಕೇಂದ್ರೀಯ ಗುತ್ತಿಗೆ ಪಡೆದ ಆಟಗಾರರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಕೇಂದ್ರಿಯ ಗುತ್ತಿಗೆ ಪಡೆದ 23 ಆಟಗಾರರ ಪಟ್ಟಿ ಬಿಡುಗಡೆಯನ್ನು ಕ್ರಿಕೆಟ್ ಆಸ್ಟ್ರೇಲಿಯಾ ಮಂಗಳವಾರ ಬಿಡುಗಡೆ ಮಾಡಿದೆ.

ಥ್ರೋಬಾಲ್: ಕರ್ನಾಟಕ ಚಾಂಪಿಯನ್

ಬೆಂಗಳೂರು: ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡಗಳು ರಾಷ್ಟ್ರೀಯ ಜೂನಿಯರ್ ಥ್ರೋಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿವೆ.

ಪುದುಚೇರಿಯಲ್ಲಿ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಕರ್ನಾಟಕ 26–24, 27–25 ಅಂಕಗಳಿಂದ ತಮಿಳುನಾಡು ತಂಡವನ್ನು ಮಣಿಸಿತು. ಸೆಮಿಫೈನಲ್‌ನಲ್ಲಿ ಕರ್ನಾಟಕ 25–20, 25–17ರಿಂದ ಡೆಲ್ಲಿ ತಂಡವನ್ನು ಸೋಲಿಸಿತ್ತು. ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ 25–15, 25–18ರಿಂದ ಕೇರಳ ವಿರುದ್ಧ ಜಯಿಸಿತು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಕರ್ನಾಟಕ ತಂಡ 25–13, 25–18ರಿಂದ ತಮಿಳುನಾಡು ತಂಡವನ್ನು ಮಣಿಸಿತು. ಸೆಮಿಫೈನಲ್‌ನಲ್ಲಿ ಆಂಧ್ರ ಪ್ರದೇಶ ವಿರುದ್ಧ 25–16, 25–18ರಿಂದ ಸೋಲಿಸಿತು. ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ ತಂಡ ಪುದುಚೇರಿ ವಿರುದ್ಧ 25–13, 25–16ರಿಂದ ಗೆದ್ದುಕೊಂಡಿತು.

ರಾಷ್ಟ್ರೀಯ ಜೂನಿಯರ್ ಥ್ರೋಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಕರ್ನಾಟಕ ತಂಡದ ಬಾಲಕ , ಬಾಲಕಿಯರ ತಂಡ (ಎಡದಿಂದ), ನಿಂತವರು: ತರುಣ್ ಎ., ಜಯಂತ್ ಜೆ, ನಿತೇಶ್ ವಿ.ಎಸ್., ಹರ್ಷವರ್ಧನ್ ಆರ್., ಭರತ್ (ಉಪನಾಯಕ), ಕಾರ್ತಿಕ್ ಎಸ್., ಶ್ರೇಯಸ್ ಎಸ್., ಅನಿಲ್ ಕುಮಾರ್ ಬಿ., ಹರ್ಷವರ್ಧನ್ ಕೆ., ಸಂತೋಷ್ ಎಚ್, ಅಖಿಲ್ ಚಿಂತನ್. ಕುಳಿತವರು: ಯಶವಂತ್ (ಬಾಲಕರ ತಂಡದ ನಾಯಕ), ತರಬೇತುದಾರರಾದ ನಿತೇಶ್, ನಿತೀನ್, ಸತ್ಯನಾರಾಯಣ (ಕಾರ್ಯದರ್ಶಿ, ಕರ್ನಾಟಕ ಅಮೆಚೂರ್ ಥ್ರೊ ಬಾಲ್ ಸಂಸ್ಥೆ), ಗೋವಿಂದರಾಜು (ಕಾರ್ಯದರ್ಶಿ ಟಿಎಫ್‌ಐ), ನಾಗರಾಜ್ (ಕೋಚ್), ನಿರ್ಮಲಾ (ಮ್ಯಾನೇಜರ್), ಯೋಗಶ್ರೀ ಡಿ.ಜೆ, ಪೂಜಾ (ನಾಯಕಿ). ಮಂಡಿಯೂರಿ ಕುಳಿತವರು; ಚಾವಿ, ಅರ್ಲಿನ್, ರಕ್ಷಿತಾ, ಪ್ರಿಯಾ ಪೈ, ಆದ್ಯ, ಅಬಿತಾ, ದೀಕ್ಷಿತಾ, ಚೈತನ್ಯ, ಸೌಮ್ಯ, ತಮನ್ನಾ, ಪ್ರಿಯಾ ಸಮರಾ.

ಐಎಸ್‌ಎಲ್ ಫುಟ್‌ಬಾಲ್: ಸೆಮಿಫೈನಲ್ ಮೊದಲ ಲೆಗ್

ಬಿಎಫ್‌ಸಿಗೆ ಇಂದು ಗೋವಾ ಸವಾಲು

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ಮೂರು ದಿನಗಳ ಹಿಂದೆ ಐಎಸ್‌ಎಲ್ ಪ್ಲೇ ಆಫ್ ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ ತಂಡವನ್ನು ನಿರೀಕ್ಷೆಗಿಂತ ಸುಲಭವಾಗಿ 5–0 ಗೋಲುಗಳಿಂದ ಸೋಲಿಸಿದ್ದ ಬೆಂಗಳೂರು ಎಫ್‌ಸಿ ಅಭಿಮಾನಿ ಬಳಗದಲ್ಲಿ ರೋಮಾಂಚನ ಮೂಡಿಸಿತ್ತು. ಉತ್ಸಾಹದಲ್ಲಿರುವ ಈ ತಂಡ ಈಗ ಮತ್ತೊಂದು ಪರೀಕ್ಷೆಗೆ ಸಜ್ಜಾಗಿದೆ.

ಬುಧವಾರ 'ಬ್ಲೂಸ್ ತಂಡ' ಇದೇ ಕ್ರೀಡಾಂಗಣದಲ್ಲಿ ನಡೆಯಲಿರುವ ಸೆಮಿಫೈನಲ್‌ನ ಮೊದಲ ಲೆಗ್ ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡವನ್ನು ಎದುರಿಸಲಿದೆ. ಗೋವಾ ತಂಡ 24 ಪಂದ್ಯಗಳಿಂದ 48 ಪಾಯಿಂಟ್ಸ್ ಕಲೆಹಾಕಿ ಲೀಗ್‌ನಲ್ಲಿ ಎರಡನೇ ಸ್ಥಾನದೊಡನೆ ನೇರವಾಗಿ ಸೆಮಿಫೈನಲ್‌ಗೆ ಟಿಕೆಟ್ ಕಾದಿರಿಸಿತ್ತು.

ಗಮನಾರ್ಹ ಎಂದರೆ ಮನೊಲೊ ಮಾರ್ಕ್ವೆಝ್ ಅವರು ಎಫ್‌ಸಿ ಗೋವಾ ತಂಡದ ತರಬೇತಿ ಹೊಣೆ ಹೊತ್ತ ಮೇಲೆ ಬಿಎಫ್‌ಸಿ ತಂಡಕ್ಕೆ ಆ ತಂಡದ ಮೇಲೆ ಜಯಗಳಿಸಲು ಸಾಧ್ಯವಾಗಿಲ್ಲ.

ಅದರೆ ಬಿಎಫ್‌ಸಿ ಹೆಡ್ ಕೋಚ್ ಜೆರಾರ್ಡ್ ಜಾರ್ಗೋಝಾ ಎದುರಾಳಿ ತಂಡದ ಲಯ ಕಳವಳಕ್ಕೆ ಕಾರಣವಾಬಹುದು ಎಂಬ ಅಂಶವನ್ನು ಒಪ್ಪಲು ತಯಾರಿಲ್ಲ.

'ನಾವು ಪ್ರಬಲ ತಂಡವನ್ನು ಎದುರಿಸುತ್ತಿದ್ದೇವೆ. ಆ ತಂಡದ ಬಗ್ಗೆ ನಮಗೆ ಗೌರವವೂ ಇದೆ. ತಂಡದಲ್ಲಿ ಉತ್ತಮ ಆಟಗಾರರಿದ್ದಾರೆ. ಈ ಋತುವಿನಲ್ಲಿ ಆ ತಂಡದ ಎದುರು ನಾವು ಜಯಗಳಿಸಲಾಗಿಲ್ಲ. ಆದರೆ ನಮ್ಮ ತಂಡದ ಆಟಗಾರರು ಪ್ಲೇ ಆಫ್ ಮೂಡ್‌ನಲ್ಲಿದ್ದಾರೆ' ಎಂದು ಅವರು ಹೇಳಿದರು.

'ಇದು ಎರಡು ಪ್ರಬಲ ತಂಡಗಳ ನಡುವಣ ಪಂದ್ಯ. ಸೆಮಿಫೈನಲ್ ಸೆಣಸಾಟ.

ಈ ಹಿಂದಿನ ಪಂದ್ಯಗಳ ಜೊತೆ ಈ ಪಂದ್ಯವನ್ನು ಹೋಲಿಸಲಾಗದು. ನಾನು ತಂಡಕ್ಕೆ ಟ್ರೋಫಿಗಳನ್ನು ಗೆಲ್ಲಿಸಿಕೊಡಲು ಬಂದಿದ್ದೇನೆ' ಎಂದು ಅವರು ವಿಶ್ವಾಸದ ಮಾತುಗಳನ್ನಾಡಿದರು.

ಎರಡೂ ತಂಡಗಳು ಈ ವರ್ಷ ಸ್ಥಿರವಾದ ಸ್ಥಿರ ಪ್ರದರ್ಶನ ನೀಡಿವೆ. ತಂಡಗಳ ರಕ್ಷಣೆ ಬಲವಾಗಿದೆ. ಹಿನ್ನಡೆಯಲ್ಲಿದ್ದಾಗ ಪುಟಿದೇಳುವ ಗುಣಗಳನ್ನು ತೋರಿವೆ.

ಸಮಯ: ರಾತ್ರಿ: 7.30

ಸುರೇಶ್ ಸಿಂಗ್ ವಾಂಗ್ಜಮ್ ಅವರ ಆಟ ಬಿಎಫ್‌ಸಿ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸುವ ಸಾಧ್ಯತೆಯಿದೆ. ಪ್ರಜಾವಾಣಿ ಚಿತ್ರ

ಐಪಿಎಲ್ ಪಾಸ್: ಯಥಾಸ್ಥಿತಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಈವರೆಗೆ ನಡೆದುಕೊಂಡು ಬಂದಿರುವಂತೆ ಹೈದರಾಬಾದ್ ಕ್ರಿಕೆಟ್ ಸಂಸ್ಥೆಗೆ ಮುಂದೆಯೂ ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ಫ್ರಾಂಚೈಸಿಯು ಐಪಿಎಲ್ ಪಂದ್ಯಗಳ 3,900 ಪಾಸ್‌ಗಳನ್ನು ನೀಡಲಿದೆ. ಈ ಕುರಿತು ಮಂಗಳವಾರ ಇಲ್ಲಿ ನಡೆದ ಸಭೆಯಲ್ಲಿ ಎಚ್‌ಸಿಎ ಮತ್ತು ಎಸ್‌ಆರ್‌ಎಚ್ ಒಮ್ಮತದ ನಿರ್ಧಾರಕ್ಕೆ ಬಂದಿವೆ.

ಹೆಚ್ಚಿನ ಪಾಸ್‌ಗಳನ್ನು ನೀಡುವಂತೆ ಹೈದರಾಬಾದ್ ಕ್ರಿಕೆಟ್ ಸಂಸ್ಥೆ ಬ್ಲ್ಯಾಕ್‌ಮೇಲ್ ತಂತ್ರಗಳನ್ನು ನಡೆಸುತ್ತಿದೆ. ಈ ಸಂಬಂಧ ಮಧ್ಯಪ್ರವೇಶಿಸಬೇಕು ಎಂದು ಸನ್‌ರೈಸರ್ಸ್ ಫ್ರಾಂಚೈಸಿಯು ಭಾನುವಾರ ಬಿಸಿಸಿಐ ಮತ್ತು ಐಪಿಎಲ್ ಆಡಳಿತ ಮಂಡಳಿಗೆ ಮನವಿ ಮಾಡಿತ್ತು.

ರೂಟ್ಸ್ ಎಫ್‌ಎಸ್ ತಂಡಕ್ಕೆ ಜಯ

ಬೆಂಗಳೂರು: ರೂಟ್ಸ್ ಎಫ್‌ಎಸ್ (ಕೆಎಸ್‌ಎಫ್‌ಎ) ತಂಡ ಎ ಡಿವಿಷನ್ ಲೀಗ್ ಪಂದ್ಯದಲ್ಲಿ ಮಂಗಳವಾರ 3–1 ಗೋಲುಗಳಿಂದ ಆದಾಯ ತೆರಿಗೆ ಎಫ್‌ಸಿ ತಂಡವನ್ನು ಮಣಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರೂಟ್ಸ್ ಎಫ್‌ಎಸ್ ತಂಡದ ದರ್ಶನ್ ವಿ. (68ನೇ ನಿ.), ಸ್ಪರ್ಶ್ ದೇಸಾಯಿ (75ನೇ ನಿ.), ಕವನ್ ಕರುಮ್‌ಬಾಯ(80 + 4ನೇ ನಿ.) ಗೋಲು ಗಳಿಸಿದರು. ಆದಾಯ ತೆರಿಗೆ ತಂಡದ ಪರ ಪಾಂಡ್ಯನ್ ಎಂ. (4ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಶ್ರೀ ಗಜಾನನ ಎಫ್‌ಸಿ ತಂಡ 2–1 ಗೋಲುಗಳಿಂದ ಎಜಿಒಆರ್‌ಸಿ ತಂಡವನ್ನು ಸೋಲಿಸಿತು. ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಡಿ ಗುಂಪಿನ ಪಂದ್ಯದಲ್ಲಿ ಹಂಪಿನಗರ ಎಫ್‌ಸಿ ತಂಡ 5–0 ಗೋಲುಗಳಿಂದ ಸ್ಪೋರ್ಟಿಂಗ್ ಯೂತ್ಸ್ ಎಫ್‌ಸಿ ತಂಡವನ್ನು ಮಣಿಸಿತು.